

ಸಂಪುಟ 22 ಸಂಚಿಕೆ 47
ನವೆಂಬರ್ 12, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಸ್ಯಾರರಗ




ವಿದ್ಯುತ್ ಬಳಕೆದಾರರಿಗೆ ಬರೆ




ಮುಖ್ಯಮಂತ್ರಿ ಪದವಿ
ಜ್ಯೋತಿಬಸು ಬಿಡುಗಡೆ

ಸಾರಾಯಿ ದುರಂತ
ಸಚಿವ ಜಾನ್ ಶಾಮೀಲು!



ಆಲೂಗಡ್ಡೆ ರೈತನ ಆತ್ಮಹತ್ಯೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 49

ಹೆಸರಾಯಿತು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕಳೆದ ಸಂಚಿಕೆಯಲ್ಲಿ ಪರಿಷ್ಕರಣವಾದಿಗಳನ್ನು ಹೊರಗಿಟ್ಟು ಮಾರ್ಕ್ಸ್‌ವಾದ ಹಾಗೂ ಲೆನಿನ್‌ವಾದದ ಸಿದ್ಧಾಂತಗಳಡಿಯಲ್ಲಿ ಹೊಸ ಪಕ್ಷವೊಂದನ್ನು ತೆನಾಲಿ ಸಮಾವೇಶದಲ್ಲಿ ಸ್ಥಾಪಿಸಲಾಯಿತು. ಈ ಬಗ್ಗೆ ಓದಿರುವಿರಿ ಈ ಸಂಚಿಕೆಯಲ್ಲಿ ಸಮ್ಮೇಳನದಲ್ಲಿ ಪಕ್ಷಕ್ಕೆ ಒಂದು ಹೆಸರು ಮತ್ತು ಒಂದು ಕಾರ್ಯಕ್ರಮವನ್ನು ರೂಪಿಸಿದ ಬಗ್ಗೆ ಓದಿರಿ

ಎಂಟು ವರ್ಷಕ್ಕೂ ಹೆಚ್ಚು ಕಾಲದಿಂದ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಉತ್ತಮ ಕಾರ್ಯಕ್ರಮ ಇರಲಿಲ್ಲ. ಕಮ್ಯುನಿಸ್ಟ್ ಪಕ್ಷ ಕೆಲಸ ನಿರ್ವಹಿಸಲು ಬೇಕಾದಂಥ ಮೂಲ ಯೋಜನೆ ಅಥವಾ ದಸ್ತಾವೇಜು ಇರಲಿಲ್ಲ. ಏಳನೇ ಮಹಾಧಿವೇಶನ ಈ ದೊಡ್ಡ ಕೊರತೆಯನ್ನು ನೀಗಿ ಒಂದು ಕಾರ್ಯನಿರ್ವಾಹಕ ಅಜೆಂಡಾವನ್ನು ಒಮ್ಮತದಿಂದ ಅಂಗೀಕರಿಸಿತು. ಅದನ್ನು ಆರು ತಿಂಗಳ ಕಾಲ ಎಲ್ಲಾ ಮಟ್ಟಗಳಲ್ಲಿ ಮತ್ತು ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಎಲ್ಲಾ ರಾಜ್ಯಗಳಲ್ಲಿ ಚರ್ಚಿಸಲಾಗಿತ್ತು. ನಾನಾ ರಾಜ್ಯ ಸಮ್ಮೇಳನಗಳಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿತ್ತು. ಸರ್ವಸಮ್ಮತಿಯಿಂದ ರೂಪಿತವಾಗಿದ್ದು ಈ ಕರಡು ಅಜೆಂಡಾದ ಅತ್ಯಂತ ಮಹತ್ವದ ಅಂಶವಾಗಿದೆ.

"ಈ ರೀತಿಯಾಗಿ ರಾಜಕೀಯ, ಕಾರ್ಯಪ್ರಧಾನ ಹಾಗೂ ಸಂಘಟನಾತ್ಮಕ ಸ್ಥಿರತೆಯ ಒಂದು ಪ್ರಕ್ರಿಯೆಯ ಮೂಲಕ ಒಂದು ಹೊಸ ಏಕೀಕೃತ ಪಕ್ಷವನ್ನು ಸ್ಥಾಪಿಸಲಾಯಿತು. ಮುಂಬರುವ ದಿನಗಳಲ್ಲಿ ಕೂಡ ಪಕ್ಷದ ಒಳಗಡೆ ಎಲ್ಲಾ ಚರ್ಚೆಗಳಲ್ಲಿ ಈ ಒಮ್ಮತದ ಅಂಶವನ್ನು ಕಾಯ್ದುಕೊಳ್ಳಲಾಗುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ"

ಮೂಲಗಳಲ್ಲಿ ಸುಧಾರಣೆ ತರುವುದಷ್ಟೇ ಕರಡು ಗೊತ್ತುವಳಿಯಲ್ಲಿ ತಿದ್ದುಪಡಿಗಳನ್ನು ಅಳವಡಿಸಿದ ಉದ್ದೇಶವಾಗಿತ್ತು. ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ(ಸಿಪಿಎಸ್‌ಯು) ದೊಳಗಿನ ವಿದ್ಯಮಾನಗಳು ನಮ್ಮ ಪಕ್ಷದ ಮಹಾಧಿವೇಶನದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ ಎನ್ನುವುದು ಸ್ಪಷ್ಟವಾಗಿತ್ತು. ಕೆಲವು ಈ ರೀತಿಯ ಸುಳ್ಳು ಮಾಹಿತಿ ಹಬ್ಬಿಸಲು ಪ್ರಯತ್ನಸಿದರೂ ಸಫಲರಾಗಲಿಲ್ಲ. ಆ ರೀತಿಯಾಗಿ ಯಾವುದೇ ಪರಿಣಾಮ ಬೀರುವುದಕ್ಕೆ ವ್ಯತಿರಿಕ್ತವಾಗಿ, ಕಮ್ಯುನಿಸ್ಟ್ ಪಕ್ಷ ಈಗ ಭಾರತೀಯ ಸಂದರ್ಭವನ್ನು ಮನಸ್ಸಿನಲ್ಲಿಟ್ಟುಕೊಂಡು ತನ್ನ ರಾಜಕೀಯ ಮತ್ತು ಇತರ ನಿರ್ಣಯಗಳನ್ನು ಅಂಗೀಕರಿಸುತ್ತಿದೆ ಎನ್ನುವುದು ಸ್ಪಷ್ಟವಾಗಿತ್ತು.

ಹಿಂದಿನ ವಿಜಯವಾಡ ಅಧಿವೇಶನದ ವೇಳೆ ಪಕ್ಷದ ಸದಸ್ಯತ್ವ1,76,000 ಆಗಿತ್ತು. ಕಲ್ಕತ್ತ ಮಹಾಧಿವೇಶನಕ್ಕೆ 1,04,000 ಸದಸ್ಯರ ಬೆಂಬಲವಿತ್ತು. 1964 ಏಪ್ರಿಲ್‌ನಲ್ಲಿ ರಾಷ್ಟ್ರೀಯ ಮಂಡಳಿಯ 32 ಸದಸ್ಯರು ಮಾಡಿಕೊಂಡ ಮನವಿಯ ನಂತರ ಈ 1,04,000 ಸದಸ್ಯರು ನಮ್ಮಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

"ಕಲ್ಕತ್ತ ಅಧಿವೇಶನ ನಿಜವಾದ ಕಮ್ಯುನಿಸ್ಟ್ ಪಕ್ಷ ಹಾಗೂ ಇದಕ್ಕೆ ವಿರುದ್ಧವಾದುದನ್ನು ಹೇಳಳು ಡಾಂಗೆ ಕೂಟಕ್ಕೆ ಯಾವುದೇ ಹಕ್ಕಿಲ್ಲ ಎನ್ನುವುದಷ್ಟೇ ಈ ಅಂಕಿ ಸಂಖ್ಯೆ ದೃಢಪಡಿಸುತ್ತದೆ.

ಕಲ್ಕತ್ತ ಮಹಾಧಿವೇಶನ ಕಾಮ್ರೇಡ್ ಪಿ.ಸುಂದರಯ್ಯ ಅವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿತು. ಪಕ್ಷದ ಮಹಾಧಿವೇಶನ ಮುಗಿದ ನಂತರ ಪಿ.ಸುಂದರಯ್ಯ ಒಂದು ಹೇಳಿಕೆ ನೀಡಿದರು. ಅದನ್ನು 1964 ನವೆಂಬರ್ 14 ರಂದು ವಿವರಿಸಲಾಯಿತು.

ಪಕ್ಷದ 31 ಮುಖಂಡರನ್ನು ರಾಷ್ಟ್ರೀಯ ಭದ್ರತೆ ಕಾಯಿದೆ ಅನುಸಾರ ಪಶ್ಚಿಮ ಬಂಗಾಳ ಸರಕಾರ ಬಂಧಿಸಿದ್ದು, ಕಮ್ಯುನಿಸ್ಟ್ ಕಾರ್ಯಕರ್ತರ ಒಗ್ಗಟ್ಟು ಮುರಿಯಲು ನಡೆಸಲಾದ ಪ್ರಯತ್ನ ಇತ್ಯಾದಿಗಳನ್ನು ಈ ಹೇಳಿಕೆಯಲ್ಲಿ ಪ್ರಸ್ತಾಪಿಸಿ, ನವೆಂಬರ್ 7 ರಂದು (1964) ನಡೆದ ರ‍್ಯಾಲಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಜನ ಭಾಗವಹಿಸಿದ್ದು ವೈರಿಗಳ ಪ್ರಯತ್ನಕ್ಕೆ ನೀಡಿದ ಸೂಕ್ತ ಉತ್ತರವಾಗಿದೆ ಎಂದು ಸುಂದರಯ್ಯ ತಿಳಿಸಿದ್ದರು.

ಡಾಂಗೆ ಕೂಟದಿಂದ ತಪ್ಪು ದಾರಿ ಹಿಡಿದವರು ಮುಖ್ಯವಾಹಿನಿಗೆ ಮರಳುವ ದಿನ ದೂರವಿಲ್ಲ. ಡಾಂಗೆ ನಿಷ್ಠರ ಪಕ್ಷ ಕಾಗದದಲ್ಲಿ ಮಾತ್ರವೇ ಉಳಿಯುತ್ತದೆ ಎಂದಿದ್ದರು.

ಕಳೆದೆರಡು ವರ್ಷಗಳಿಂದ ನಮ್ಮ ವಿರುದ್ಧ ನಡೆಯುತ್ತಿದ್ದ ಅಪಪ್ರಚಾರದ ಕೆಲಸದಲ್ಲಿ ಸರಕಾರ ಕೂಡ ಕೈಜೋಡಿಸಿತ್ತು. ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧದ ಪ್ರಜಾಸತ್ತಾತ್ಮಕ, ಜನತಾ ಆಂದೋಲನವನ್ನು ಹಾಳು ಗೆಡುವುದಷ್ಟೇ ಅದರ ಏಕೈಕ ಉದ್ದೇಶವೆನ್ನುವುದು ಸ್ಪಷ್ಟ ಎಂದಿದ್ದ ಹೇಳಿಕೆ, ಜನರ ಕಲ್ಯಾಣದ ಬಗೆ ಕಾಳಜಿಯೇ ಇಲದಿದ್ದ ಡಾಂಗೆ ಕೂಟ, ಇಂಥ ಅಪಾಯಕಾರಿ ಕೆಲಸದಲ್ಲಿ ಸರ್ಕಾರಕ್ಕೆ ನೆರವಾಯಿತು ಎಂದು ತರಾಟೆಗೆ ತೆಗೆದುಕೊಂಡಿತು. ಆದರೆ ಕಮ್ಯುನಿಸ್ಟ್ ಪಕ್ಷದ ಪ್ರಯತ್ನಗಳಿಗೆ ಕಾರ್ಮಿಕ ವರ್ಗ ಹಾಗೂ ಒಟ್ಟಾರೆಯಾಗಿ ಜನತೆ ಸ್ಪಂದಿಸಿದೆ ಎನ್ನುವುದು ಇನ್ನೊಮ್ಮೆ ಸ್ಪಷ್ಟವಾಗಿ ಸಾಬೀತಾಗಿದೆ ಎಂದು ಸುಂದರಯ್ಯ ಹೇಳಿದ್ದರು. ನಮ್ಮ ಪಕ್ಷ ಜನತೆಗೆ ಇನ್ನೂ ಹತ್ತಿರವಾಗಲಿದೆ. ನಮ್ಮ ರಾಜಕೀಯ ಹಾಗೂ ಇತರ ಪ್ರಗತಿಪರ ಕೆಲಸ ಕಾರ್ಯಗಳಿಂದ ಭಾರತದ ಬಹುತೇಕ ಜನರನ್ನು ಪ್ರತಿಗಾಮಿ ಶಕ್ತಿಗಳಿಂದ ದೂರ ಮಾಡಲು ನಾವು ಸಮರ್ಥರಾಗುತ್ತೇವೆ ಎಂಬ ಅದಮ್ಯ ವಿಶ್ವಾಸವನ್ನು ಕಾಂ. ಸುಂದರಯ್ಯ ತಮ್ಮ ಹೇಳಿಕೆಯಲ್ಲಿ ವ್ಯಕ್ತಪಡಿಸಿದ್ದಲ್ಲದೆ ಮುಂಬರುವ ದಿನಗಳಲ್ಲಿ ನಾವು ಇನ್ನಷ್ಟು ಬಲಗೊಳ್ಳುತ್ತೇವೆ ಎಂದು ಹೇಳಿದ್ದರು.

ಏಳನೇ ಮಹಾಧಿವೇಶನ 41 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು. ಒಂಬತ್ತು ಸದಸ್ಯರ ಪೊಲಿಟ್‌ಬ್ಯೂರೋವನ್ನು ರಚಿಸಲಾಯಿತು ಹಾಗೂ ಕಾ. ಪಿ.ಸುಂದರಯ್ಯ ಸರ್ವಾನುಮತದಿಂದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕೇಂದ್ರ ಸಮಿತಿಗೆ ಆಯ್ಕೆಯಾದ ಸದಸ್ಯರು: ಮುಜಫರ್ ಅಹಮದ್, ಪ್ರಮೋದ್ ದಾಸ್‌ಗುಪ್ತಾ, ಹರೇಕೃಷ್ಣ ಕೋನಾರ್ ಮತ್ತು ಜ್ಯೋತಿಬಸು(ಪಶ್ಚಿಮ ಬಂಗಾಳ), ಪಿ.ಸುಂದರಯ್ಯ, ಎಂ.ಬಸವಪೊನ್ನಯ್ಯ, ಹನುಮಂತ ರಾವ್, ಎನ್.ಪ್ರಸಾದ್ ರಾವ್ (ಆಂಧ್ರಪ್ರದೇಶ), ಇ.ಎಂ.ಎಸ್.ನಂಬೂದರಿಪಾಡ್, ಎ.ಕೆ.ಗೋಪಾಲನ್, ಇ.ಕೆ.ನಾಯನಾರ್, ಅಚ್ಯುತಾನಂದನ್ (ಕೇರಳ), ಹರಿಕಿಷನ್ ಸಿಂಗ್ ಸುರ್ಜಿತ್, ಜಗಜಿತ್ ಸಿಂಗ್ 'ಲೈಲಾಪುರಿ (ಪಂಜಾಬ್), ಪಿ.ರಾಮಮೂರ್ತಿ, ಎಂ.ಆರ್. ವೆಂಕಟರಾಮನ್, ಬಾಲಸುಬ್ರಹ್ಮಣ್ಯಂ, ಎನ್.ಶಂಕರಯ್ಯ(ತಮಿಳುನಾಡು), ಅಚಿಂತ್ಯ ಭಟ್ಟಾಚಾರ್ಯ(ಅಸ್ಸಾಂ), ರಾಮಚಂದ್ರ ಷರಾಫ್(ಜಮ್ಮು ಮತ್ತು ಕಾಶ್ಮೀರ), ಎಸ್.ಬಿ.ಶ್ರೀವಾಸ್ತವ(ಬಿಹಾರ), ಶಂಕರ ದಯಾಳ್ ತಿವಾರಿಷ ಶಿವಕುಮಾರ ಮಿಶ್ರ(ಉತ್ತರ ಪ್ರದೇಶ), ದಿನಕರ ಮೆಹ್ತ(ಗುಜರಾತ್), ವನಮಾಲಿ ದಾಸ್(ಒರಿಸ್ಸಾ), ಬಿ.ಟಿ.ರಣದಿವೆ, ಕೊಲ್ಹಟ್ಕರ್ ಮತ್ತು ಪರುಳೇಕರ್ (ಮಹಾರಾಷ್ಟ್ರ)

ಕೇಂದ್ರ ನಿಯಂತ್ರಣ ಆಯೋಗ: ಅಬ್ದುಲ್ ಹಲಿಂ, ಡಾ.ಭಾಗ್‌ಸಿಂಗ್ ಮತ್ತು ಸಿ.ವೆಂಕಟರಾಮನ್

ಪೊಲಿಟ್‌ಬ್ಯೂರೋ: ಪಿ.ಸುಂದರಯ್ಯ, ಇ.ಎಂ.ಎಸ್.ನಂಬೂದರಿ ಪಾಡ್, ಪಿ.ರಾಮಮೂರ್ತಿ, ಪ್ರಮೋದ್ ದಾಸ್‌ಗುಪ್ತ, ಎಂ.ಬಸವಪೊನ್ನಯ್ಯ, ಎ.ಕೆ.ಗೋಪಾಲನ್, ಹರಿಕಿಷನ್ ಸಿಂಗ್ ಸುರ್ಜಿತ್, ಜ್ಯೋತಿಬಸು ಮತ್ತು ಬಿ.ಟಿ.ರಣದಿವೆ

ಮಹಾಧಿವೇಶನದ ಘೋಷಣೆ

1964 ನವೆಂಬರ್ 7 ರಂದು ಏಳನೇ ಮಹಾಧಿವೇಶನ ಮುಕ್ತಾಯವಾಯಿತು. ಅಧಿವೇಶನದ ನಂತರ ಹೊರಡಿಸಲಾದ ಘೋಷಣೆಯನ್ನು ನಾನಿಲ್ಲಿ ಪ್ರಸ್ತಾವಿಸುತ್ತೇನೆ.

ಏಳನೇ ಮಹಾಧಿವೇಶನದ ಘೋಷಣೆ ಹೀಗಿದೆ: "ಸಮಾವೇಶದಲ್ಲಿ ಪಾಲ್ಗೊಂಡ ಎಲ್ಲರೂ ಕಮ್ಯುನಿಸ್ಟ್ ಚಳುವಳಿಯ ನೈಜ ಪ್ರತಿನಿಧಿಗಳು ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ಏಳನೇ ಮಹಾಧಿವೇಶನ ಘೋಷಿಸುತ್ತದೆ. ತನ್ನನ್ನು ಭಾರತ ಕಮ್ಯುನಿಸ್ಟ್ ಪಕ್ಷ ಎಂದು ಹೇಳಿಕೊಳ್ಳಲು ಡಾಂಗೆ ಬಣಕ್ಕೆ ಯಾವುದೇ ಹಕ್ಕಿಲ್ಲ.

"ದೇಶಾದ್ಯಂತದ 1,04,421 ಸದಸ್ಯರನ್ನು ಪ್ರತಿನಿಧಿಸಿ ಒಟ್ಟು 422 ಪ್ರತಿನಿಧಿಗಳು ಭಾಗವಹಿಸಿದ್ದರು. ಇದ್ದು ಆರನೇ ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದ ಒಟ್ಟು ಸದಸ್ಯರ ಶೇಕಡ 60 ರಷ್ಟು ಆಗುತ್ತದೆ.

"ಮಹಾಧಿವೇಶನಕ್ಕೆ ಮುಂಚೆ ಪ್ರಾದೇಶಿಕ, ಜಿಲ್ಲೆ ಮತ್ತು ಪ್ರಾಂತ ಮಟ್ಟಗಳಲ್ಲಿ ಸಮ್ಮೇಳನಗಳನ್ನು ನಡೆಸಲಾಯಿತು. 19 ರಾಜ್ಯ ಘಟಕಗಳ ಪೈಕಿ 14 ಘಟಕಗಳು ಈ ಮಹಾಧಿವೇಶನದಲ್ಲಿ ಭಾಗವಹಿಸಿವೆ ಎನ್ನುವುದು ಪರಿಶೀಲನೆಯಿಂದ ಗೊತ್ತಾಗಿದೆ. ಡಾಂಗೆ ಬಣದೊಂದಿಗೆ ಕೈಜೋಡಿಸಿದ್ದ ಒಂಬತ್ತು ಕೂಡ ಈ ಮಹಾಧಿವೇಶನದಲ್ಲಿ ಪಾಲ್ಗೊಂಡಿದೆ.

"ಈ ಮಹಾಧಿವೇಶನದಲ್ಲಿ ಪಾಲ್ಗೊಳ್ಳದಿರುವ ಬಹುತೇಕ ಜನರು ತಾವು ಡಾಂಗೆ ಬಣದ ಸದಸ್ಯರೆಂದೇನೂ ಹೇಳಿಕೊಂಡಿಲ್ಲ ಎನ್ನುವ ವಿಚಾರವೂ ನಮಗೆ ಗೊತ್ತಿದೆ. ಡಾಂಗೆ ಬಣದ ಜತೆಗಿರುವ ಸದಸ್ಯರು ತಮ್ಮ ನಿಲುವನ್ನು ಪರಿಶೀಲಿಸುತ್ತಾರೆಂಬ ಖಾತರಿ ನಮಗಿದೆ. ಡಾಂಗೆ ನಿಷ್ಠರ ಪರಿಷ್ಕರಣಾದಿ ನೀತಿಗಳ ವಿರುದ್ಧದ ಪ್ರಥಮ ಹಂತದ ಹೋರಾಟ ಈ ಮಹಾಧಿವೇಶನದೊಂದಿಗೆ ಆರಂಭವಾಗಿದೆ...

1965 ಮಾರ್ಚ್‌ನಲ್ಲಿ ನಡೆಯಬೇಕಾದ ಕೇರಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಮ್ಮ ಹೊಸ ಪಕ್ಷಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಎಂದು ನಾಮಕರ ಮಾಡಲು ನಾವು ನಿರ್ಧರಿಸಿದೆವು.

ಸೆರೆಮನೆಯಲ್ಲಿ ನಾಯಕರು

ಲೆಕ್ಕವಿಲ್ಲದಷ್ಟು ಕಮ್ಯುನಿಸ್ಟ್ ನಾಯಕರು ಮತ್ತು ಕಾರ್ಯಕರ್ತರು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ವಿಚಾರಣೆಯಿಲ್ಲದೆ ಜೈಲುಗಳಲ್ಲಿ ಕೊಳೆಯುತ್ತಿದ್ದರು. ಪಾಲಿಟ್‌ಬ್ಯೂರೋದ ಬ್ಬನೇ ಒಬ್ಬ ಸದ್ಯನ ಸೆರೆಮನೆಯ ಹೊರಗೆ ಇರಲಿಲ್ಲ. ಪ.ಬಂಗಾಳ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಮೋದ್ ದಾಸ್ ಗುಪ್ತಾ ಡಂಡಂ ಜೈಲಿನಲ್ಲಿ ತೀವ್ರ ಅಸ್ವಸ್ತರಾದರು. ಆದರೆ ಅವರ ಚಿಕಿತ್ಸೆಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ದಾಸ್‌ಗುಪ್ತಾ ಮಾತ್ರವೇ ಅಲ್ಲದೆ ಸರಳುಗಳ ಹಿಂದಿದ್ದ ಅನೇಕ ಮುಖಂಡರು ಅಸ್ವಸ್ತರಾಗಿದ್ದರು. ಅವರಿಗೆ ಉತ್ತಮ ಚಿಕಿತ್ಸೆಯ ಅವಶ್ಯಕತೆ ಇತ್ತು.

ಆದರೆ ಹೃದಯಹೀನ ಕಾಂಗ್ರೆಸ್ ಸರ್ಕಾರ ಇಷ್ಟನ್ನು ಮಾಡಲಿಲ್ಲ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆ ಜತೆಯಲ್ಲಿ ನಾವು ಕೈದಿಗಳ ರಾಜಕೀಯ ಸ್ಥಾನಮಾನದ ವಿಚಾರದಲ್ಲಿ ಇನ್ನೊಂದು ಚಳುವಳಿಯನ್ನು ಆರಂಭಿಸಿದೆವು.

ವಿಶಾಲವಾದ ಪ್ರಜಾಸತ್ತಾತ್ಮಕ ಚಳುವಳಿ ನಡೆಸಲು ಪಕ್ಷದ ಕೇಂದ್ರ ಸಮಿತಿ ಕರೆ ನೀಡಿತು. 1966 ಫೆಬ್ರವರಿ 25 ರಂದು ರಾಷ್ಟ್ರವ್ಯಾಪಿ ಪ್ರತಿಭಟನಾ ದಿನವನ್ನು ಆಚರಿಸಲಾಯಿತು.

ದೇಶಹಿತೈಷಿ ಮೇಲೆ ಆಕ್ರಮಣ

ಅದಕ್ಕೆ ಒಂದು ದಿನದ ಮುಂಚೆ, ಪಶ್ಚಿಮ ಬಂಗಾಳ ಸರಕಾರ ಎಂದಿನಂತೆ ವ್ಯಾಪಕ ಬಂಧನ ಕಾರ್ಯಾಚರಣೆ ನಡೆಸಿತು. ಈ ಬಾರಿ, 'ದೇಶಹಿತೈಷಿ' ಪತ್ರಿಕೆ ಕೂಡ ಅದರ ಕೆಂಗೆಣ್ಣಿಗೆ ಗುರಿಯಾಯಿತು. ಆಗ, ನಮ್ಮ ಮುಖವಾಣಿಯಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಈ ಪತ್ರಿಕೆಮಾತ್ರ. ಅದರ ಸಂಪಾದಕ ಮಂಡಳಿಯ ಸದಸ್ಯರಾದ ಸುಧೆಂಗ್ಶು ದಾಸ್‌ಗುಪ್ತಾ ಮತ್ತು ಸುಶಿಲಾಲ್ ಚೌಧರಿ ಒಂದು ವರ್ಷದ ಹಿಂದೆಯೇ ಬಂಧಿತರಾಗಿದ್ದರು. ಈ ಬಾರಿ, ಪತ್ರಿಕೆಯ ಮ್ಯಾನೇಜರ್ ನಿರಂಜನ್ ಬೋಸ್ ಮತ್ತು ಇನ್ನೊಬ್ಬ ಅಧಿಕಾರಿ ಸಂತೋಷ ಚಟರ್ಜಿಯನ್ನು ಬಂಧಿಸಲಾಯ್ತು.

ಸೆರೆಯಲ್ಲೇ ಉಪವಾಸ

ಮರುದಿನ ರಾಜಕೀಯ ಕೈದಿಗಳು ಸೆರೆಮನೆ ಆವರಣದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ನಾನು ಪ್ರೆಸಿಡೆನ್ಸಿ ಜೈಲಿನಿಂದ ಅಂದಿನ ಮುಖ್ಯಮಂತ್ರಿ ಪ್ರಫುಲ್ಲ ಸೇನ್‌ರಿಗೆ ಒಂದು ಪತ್ರ ಬರೆದೆ. ಅದರ ಪ್ರತಿಯನ್ನು ಪ್ರಧಾನಿಗೂ ಕಳಿಸಲಾಯಿತು.

ರಾಷ್ಟ್ರೀಯ ಭದ್ರತಾ ಕಾಯಿದೆ(ಎನ್‌ಎಸ್‌ಎ) ಅನ್ವಯ ಬಂಧಿಸಿದ್ದಕ್ಕೆ ಆಕ್ರೋಶ, ಪ್ರತಿಪಕ್ಷಗಳ ಜತೆ ಸರಕಾರ ಸರಿಯಾಗಿ ವರ್ತಿಸದಿರುವುದಕ್ಕೆ ವಿರೋಧ ಪತ್ರದ ಸಾರಾಂಶವಾಗಿತ್ತು. ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆಯನ್ನು ತಡೆಯುವ ಬದಲು ಅದರ ವಿರುದ್ಧ ಚಳವಳಿ ನಡೆಸಿದ ಜನರ ವಿರುದ್ಧ ಎಸ್‌ಎಸ್‌ಎ ಬಳಸಿದ್ದಕ್ಕೆ ನಾನು ಪತ್ರದಲ್ಲಿ ತೀವ್ರ ವಿರೋದ ವ್ಯಕ್ತಪಡಿಸಿದೆ. ಆದರೆ, ಸರಕಾರದ ದಮನಕಾರಿ ಕ್ರಮಗಳನ್ನು ಸ್ವತಃ ಕೆಲವು ಕಾಂಗ್ರೆಸ್ಸಿಗರು ಹಾಗೂ ಎಲ್ಲ ಪ್ರತಿಪಕ್ಷಗಳು, ಗಣ್ಯ ನಾಗರೀಕರು ಹಾಗೂ ಸಾರ್ವಜನಿಕರು ಖಂಡಿಸಿದ್ದಕ್ಕೆ ನಾನು ಸಂತೋಷ ವ್ಯಕ್ತಪಡಿಸಿದೆ.

ಗೋಲಿಬಾರ್ : ಹಲವರ ಸಾವು

ಮಾರ್ಚ್ 10 ಕ್ಕೆ ಪಶ್ಚಿಮ ಬಂಗಾಳದಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ನೀಡಿದೆವು. 'ದೇಶ ಹಿತೈಷಿ' ಯ ಸಂಪಾದಕೀಯ ಮಂಡಳಿಯ ಮುಖ್ಯಸ್ಥ ಮೊಹಿತ್ ಮೈತ್ರ ಮತ್ತು ಇತರ ಎಡಪಂಥೀಯ ಮುಖಂಡರನ್ನು ಸರಕಾರ ಬಂಧಿಸಿತು.

ಮುಷ್ಕರದ ದಿನ ಹಲವು ಕಡೆಗಳಲ್ಲಿ ಪೋಲೀಸರು ಯದ್ವಾತದ್ವಾ ಗೋಲೀಬಾರ್ ನಡೆಸಿದು. ಅನೇಕ ಜನರು ಸತ್ತರು, ಹಲವು ಮಂದಿ ಗಾಯಗೊಂಡರು. ಇದರಿಂದಾಗಿ ರಾಜಕೀಯ ಕೈದಿಗಳ ಬಿಡುಗಡೆಯ ಬೇಡಿಕೆಗೆ ಮಹತ್ವದ ಆಯಾಮ ಬಂತು. ಹೆಚ್ಚುತ್ತಿರುವ ಒತ್ತಡದ ಪರಿಣಾಮವಾಗಿ ಮುಖ್ಯಮಂತ್ರಿ ಪ್ರಫುಲ್ಲ ಸೇನ್ ಕೆಲವು ನಾಯಕರನ್ನು ಬಿಡುಗಡೆ ಮಾಡಿದರು. ಬಿಡುಗಡೆಯಾದವರಲ್ಲಿ ನಾನೂ ಇದ್ದೆ. ಆದರೆ ಸರಕಾರ ನಮ್ಮ ಬೇಡಿಕೆಗಳನ್ನು ನಿರ್ಲಕ್ಷಿಸುವುದನ್ನು ಮುಂದುವರಿಸಿತು. ಏಪ್ರಿಲ್ 6 ರಂದು ಮುಷ್ಕರಕ್ಕೆ ಕರೆ ನೀಡಿದವು.

ಆಹಾರ ಬಿಕ್ಕಟ್ಟು ಹಾಗೆ ಮುಂದುವರಿಯಿತು. ಆತ್ಮಹತ್ಯೆ ಮತ್ತು ಹಸಿವಿನ ಸಾವಿನ ವರದಿಗಳು ಗ್ರಾಮಾಂತರ ಪ್ರದೇಶಗಳಿಂದ ಹರಿದು ಬರುತ್ತಲೇ ಇತ್ತು. ಇಂಥ ದುರಂತಗಳನ್ನು ತಡೆಯಲು ಯಾವುದೇ ಕ್ರಮಗಳನ್ನು ಕೈಗೊಳ್ಳಲು ಕಾಂಗ್ರೆಸ್ ಸರಕಾರ ವಿಫಲವಾಗಿತ್ತು. ಈ ವೇಳೆಗಾಗಲೇ, ಬೆಲೆಯೇರಿಕೆ ಮತ್ತು ಆಹಾರ ಬಿಕ್ಕಟ್ಟಿನ ಪರಿಣಾಮ ಇಡೀದೇಶದ ಗಮನಕ್ಕೆ ಬಂದಿತ್ತು.

ಪಡಿತರ ವ್ಯವಸ್ಥೆ ಕೂಡ ಮುರಿದು ಬಿದ್ದಿತ್ತು. ಸಮಸ್ಯೆಯನ್ನು ಬಗೆಹರಿಸುವ ಬದಲು ರಾಜ್ಯ ಸರಕಾರ ಒಂದರ ಮೇಲೆ ಇನ್ನೊಂದು ದಮನಕಾರಿ ಕ್ರಮಗಳನ್ನು ಜನರ ಮೇಲೆ ಹೇರಿತು.

1966 ರ ಆಹಾರ ಚಳುವಳಿ ವೇಳೆ ಬಸೀರ್‌ಹೌಸ್‌ನಲ್ಲಿ ಪೋಲೀಸ್ ಗೋಲಿಬಾರಿಗೆ ನೂರುಲ್‌ಇಸ್ಲಾಂ ಎಂಬಾತನ ಬಲಿ. ಬದುರಿಯಾದಲ್ಲಿ ಅಲಿ ಹಫೀಜ್ ಮತ್ತು ಕಾಳುಮಂಡಲ್ ಮೃತಪಟ್ಟರು. ಸುಖೇನ್ ಮುಖರ್ಜಿ, ಬಬ್ಲುದಾಸ್, ಆನಂದ ಹೈಕ್, ರಂಜನ್ ದತ್ತ, ನಾರಾಯಣ ಸಾಧುಖಾನ್, ರಬಿನ್ ಪಾಲ್ ಮತ್ತು ಎಸ್.ಪಿ.ಸಿಂಗ್ ಕೂಡ ಹುತಾತ್ಮರಾದರು. ಇವರೆಲ್ಲರೂ ಬಹುತೇಕ ಒಂದೋ ಹುಡುಗರಾಗಿದ್ದರು ಅಥವಾ ಯುವಕರಾಗಿದ್ದರು,1966 ರ ಮೊದಲ ನಾಲ್ಕುತಿಂಗಳಲ್ಲಿ ರಾಜಕೀಯ ಕೈದಿಗಳ ಬಿಡುಗಡೆ ಚಳುವಳಿ ಮತ್ತು ಆಹಾರ ಚಳುವಳಿಯನ್ನು ದಮನಿಸುವ ಹೆಸರಿನಲ್ಲಿ ಪೋಲೀಸರು 50 ಕ್ಕೂ ಹೆಚ್ಚು ಆಂದೋಲನಕಾರರನ್ನು ಕೊಂದು ಹಾಕಿದರು. ಇದಲ್ಲದೆ ನಮ್ಮ ಬೆಂಬಲಿಗರ ಮನೆಗಳ ಮೇಲೆ ದಾಳಿ ಮತ್ತು ಶೋಧನೆ ದಿನನಿತ್ಯದ ದೃಶ್ಯವಾಗಿತ್ತು. ಹೆಂಗಸರು ಮತ್ತು ಮಕ್ಕಳನ್ನು ಕೂಡ ಬಿಡಲಿಲ್ಲ. ಇಷ್ಟೆಲ್ಲ ಆದರೂ ಸಾರ್ವಜನಿಕರು ಹೂಡಿದ್ದ ಆಂದೋಲನದ ಅಲೆಯನ್ನು ತಡೆಯಲು ಕಾಂಗ್ರೆಸ್ ಆಡಳಿತಗಾರರಿಗೆ ಆಗಲಿಲ್ಲ.

(ಮುಂದುವರಿಯುವುದು)

ಚೆಲುವ ಕನ್ನಡ ನಾಡಿಗಾಗಿ

ಎಸ್.ಸೂರ್ಯನಾರಾಯಣರಾವ್

ಮಹಾತ್ಮಗಾಂಧಿಯವರು ಹಾಜರಿದ್ದ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲೇ ಭಾಷಾವಾರು ರಾಜ್ಯ ವಿಂಗಡಣೆಯ ಕೂಗು ಎದ್ದಿತು. ನಂತರ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವೂ ಭಾಷಾವಾರು ರಾಜ್ಯಗಳ ರಚನೆಗೆ ಮುಂದಾಗಲಿಲ್ಲ. ಭಾಷಾವಾರು ರಾಜ್ಯಕ್ಕಾಗಿ ಆಂಧ್ರದಲ್ಲಿ ಪ್ರಬಲವಾದ ಚಳುವಳಿ ನಡೆದು, ಪೊಟ್ಟಿ ಶ್ರೀರಾಮುಲು ಅಮರಣಾಂತ ಉಪವಾಸ ಕೈಗೊಂಡು ಹುತಾತ್ಮರಾದರು. ನಂತರ ಚಳುವಳಿಯು ಬಿರುಗಾಳಿಯಂತೆ ಎಲ್ಲೆಡೆ ಹಬ್ಬಿತು. ಚಳುವಳಿಯ ವೇಗವನ್ನು ತಡೆಯಲಾರದೆ ಕೇಂದ್ರದ ಕಾಂಗ್ರೆಸ್ ಸರ್ಕಾರ ಭಾಷಾವಾರು ರಾಜ್ಯವಿಂಗಡನೆಗೆ ಒಪ್ಪಿತು.

ಇಎಂಎಸ್-ಏಕೆಜಿ ನೇತೃತ್ವದಲ್ಲಿ ಐಕ್ಯ ಕೇರಳಕ್ಕಾಗಿ, ಪೊಟ್ಟಿ ಶ್ರೀರಾಮುಲು ನೇತೃತ್ವದಲ್ಲಿ ಆಂಧ್ರಪ್ರದೇಶಕ್ಕಾಗಿ, ನಿಜಲಿಂಗಪ್ಪ ಮೊದಲಾದವರ ನೇತೃತ್ವದಲ್ಲಿ ವಿಶಾಲ ಕರ್ನಾಟಕಕ್ಕಾಗಿ ಚಳುವಳಿ ನಡೆಯಿತು. ಈ ಎಲ್ಲದರ ಪರಿಣಾಮವಾಗಿ 1950 ರಲ್ಲಿ ಕರ್ನಾಟಕ ಏಕೀಕರಣವಾಯಿತು. ಕರ್ನಾಟಕದ ಹೆಸರು ಮೈಸೂರು ರಾಜ್ಯವೆಂದಿರಬೇಕೆಂದು ಕೂಗೆಬ್ಬಿಸಿದರು. ಆದರೆ ಜನರ ಪ್ರತಿಭಟನೆಯಿಂದ ಅದು ನಡೆಯಲಿಲ್ಲ. ಹುಬ್ಬಳ್ಳಿ ರಾಜದಾನಿಯಾಗಬೇಕೆಂದು ಕೆಲವರು ಚಳುವಳಿ ಹೂಡಿದರು. ಆ ಹೋರಾಟ ಸಫಲವಾಗಲಿಲ್ಲ.

ರಾಜ್ಯಗಳ ವಿಂಗಡಣೆಯಾಗಿ 44 ವರ್ಷಗಳು ಕಳೆದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ಹಾಗೂ ಅಭಿವೃದ್ಧಿ ಯೋಜನೆಗಳ ವಿಫಲತೆಯಿಂದ ಕರ್ನಾಟಕದ ಉತ್ತರ ಕರ್ನಾಟಕ, ಹೈದ್ರಾಬಾದ್-ಕರ್ನಾಟಕ, ಮತ್ತು ಕೊಡಗು ಅಭಿವೃದ್ಧಿ ಕಾರ್ಯಗಳಲ್ಲಿ ಹಿಂದುಳಿದು 'ಪ್ರತ್ಯೇಕತೆ'ಯ ಕೂಗು ಆಗಿಂದ್ದಾಗ್ಗೆ ಬರುತ್ತಿದೆ. ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿ ಇದ್ದರೂ ಸಹ ಕೆಲವರು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೆ ವಿನಃ, ಅಭಿವೃದ್ಧಿಯ ಬಗ್ಗೆ ಗಮನಹರಿಸಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಕೆಲವು ಸಂಘಟನೆಗಳು ನವೆಂಬರ್ 1 ರಿಂದ 1 ತಿಂಗಳು. ಈಗ 2 ತಿಂಗಳವರೆಗೂ ಕೆಲ ಕಾರ್ಯಕ್ರಮ ಹಮ್ಮಿಕೊಂಡು ಸಂಗೀತ, ನಾಟಕದಂತಹ ಮನರಂಜನೆ ಕಾರ್ಯಕ್ರಮ ಹಾಗೂ ಕೆಲವರನ್ನು ಸನ್ಮಾನಿಸುತ್ತ ಬಂದಿವೆ. ಆದರೆ ಈ ಯಾವ ಕಾರ್ಯಕ್ರಮಗಳು ಕರ್ನಾಟಕದ ಅಭಿವೃದ್ಧಿಗಾಗಿ ಕಾರ್ಯಕ್ರಮ ಅಥವಾ ಯೋಜನೆಗಳಾಗಲಿ ಅವುಗಳ ಮುಂದೆ ಇಲ್ಲ. ಇಂದು ರಾಜ್ಯೋತ್ಸವ ಕೆಲವರಿಗೆ ದಂಧೆಯಾಗಿದೆ. ರಾಜ್ಯ ಸರ್ಕಾರಸಹ ಇದಕ್ಕೆ ಸಹಕಾರ ನೀಡುತ್ತಿದೆ. ಐಕ್ಯ ಕೇರಳದಲ್ಲಾಗಲೀ, ಮಹಾರಾಷ್ಟ್ರದಲ್ಲಾಗಲೀ ಇಲ್ಲವೇ ಆಂಧ್ರಪ್ರದೇಶ ದಲ್ಲಾಗಲೀ ಈ ದಂಧೆ ನಡೆಯುತ್ತಿಲ್ಲ. ಆದರೆ, ರಾಜ್ಯೋತ್ಸವದ ದಿನ ರಾಜ್ಯದ ಸಮಗ್ರ ಅಭಿವೃದ್ಧಿ ಬಗ್ಗೆ ಹಾಗೂ ಜನರ ಜೀವನ ಪರಿಸ್ಥಿತಿಯ ಬಗ್ಗೆ ಚರ್ಚಿಸುವ ಹಾಗೂ ಯೋಜನೆ ರೂಪಿಸುವ ವೇದಿಕೆಯಾಗಬೇಕಿದೆ. ಕೃಷ್ಣರ ಸರ್ಕಾರ ಸಹ ರಾಜ್ಯದ ಬೆಳವಣಿಗೆ ಹಾಗೂ ಅಭಿವೃದ್ಧಿ ಬಗ್ಗೆ ವಿಚಾರ ಸಂಕಿರಣವನ್ನಾಗಲಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಯೋಜನೆ ರೂಪಿಸದೆ ಕೇವಲ ಸಮಾಜದ ಕೆಲವು ಗಣ್ಯರಿಗೆ, ಸಾಹಿತಿಗಳಿಗೆ ಸನ್ಮಾನ ಮಾಡುವ ಮೂಲಕ ರಾಜ್ಯೋತ್ಸವ ಕಾರ್ಯಕ್ರಮ ಕೊನೆಗೊಳ್ಳುತ್ತಿದೆ.

ಉತ್ತರ ಕರ್ನಾಟಕ, ಕೊಡಗು, ಹೈದ್ರಾಬಾದ ಕರ್ನಾಟಕದಲ್ಲಿ ಪ್ರತ್ಯೇಕತೆಯ ಕೂಗು ತಡೆಗಟ್ಟಬೇಕಾದಲ್ಲಿ ಆ ಪ್ರದೇಶದ ಅಭಿವೃದ್ಧಿಗೆ ಸಾಕಷ್ಟು ಸಂಪನ್ಮೂಲ ಒದಗಿಸಿ ತ್ವರಿತವಾಗಿ ಆ ಪ್ರದೇಶದ ಅಭಿವೃದ್ಧಿಯಾದಲ್ಲಿ ಈ ಕೂಗುಗಳನ್ನು ತಡೆಗಟ್ಟಲು ಸಾಧ್ಯ.

ಕರ್ನಾಟಕ ರಾಜ್ಯ ಉದಯವಾಗಿ 44 ವರ್ಷಗಳು ಕಳೆದರು ಆಡಳಿತ ಭಾಷೆಯಾಗಿ ಕನ್ನಡ ಜಾರಿಯಾಗಿಲ್ಲ. ಎಲ್ಲ ಕನ್ನಡಿಗರನ್ನು ವಿದ್ಯಾವಂತರನ್ನಾಗಿಸುವ ಬಗ್ಗೆ ಕ್ರಮ ಕೈಗೊಂಡಿಲ್ಲ. ಗ್ರಾಮಾಂತರದಲ್ಲಿ ದೊಡ್ಡ ಪ್ರಮಾಣದಲ್ಲಿ ಅನಕ್ಷರಸ್ಥರಿದ್ದಾರೆ. ಕನ್ನಡ ಸಾಹಿತ್ಯವನ್ನು ಸಾಮಾನ್ಯ ಜನ ಸವಿಯಬೇಕಾದಲ್ಲಿ ಅವರ ಆರ್ಥಿಕ ಮತ್ತು ಜೀವನ ಪರಿಸ್ಥಿತಿ ಸುಧಾರಣೆಯಾಗಬೇಕು. ಕರ್ನಾಟಕ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಪಾಳೇಗಾರಿ ಮೌಲ್ಯಗಳು ಜೀವಂತ ಇವೆ. ಇದರಪರಿಣಾಮವಾಗಿ ದಲಿತರ ಮೇಲೆ ಆಗಿಂದ್ದಾಗ್ಗೆ ಹಲ್ಲೆ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ.

ಈ ವರ್ಷದ ಕರ್ನಾಟಕ ರಾಜ್ಯೋತ್ಸವ ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳು ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯೂಟಿಓ ಮತ್ತು ಗ್ಯಾಟ್ ಒಪ್ಪಂದಕ್ಕೆ ತಾಳ ಹಾಕುವ ಯೋಜನೆಗಳಿಂದಾಗಿ ರೈತರ ಬೆಳೆಗಳಿಗೆ ಬೆಲೆ ಕುಸಿದು, ಅಗತ್ಯವಾದ ಬೆಂಬಲಬೆಲೆ ಸಿಗದಿರುವುದರಿಂದ ಜೊತೆಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಕಳಪೆ ಗೊಬ್ಬರ ಬೀಜ, ಕ್ರಿಮಿನಾಶಕಗಳ ಹಾವಳಿಯಿಂದ ರೈತ ಆತ್ಮಹತ್ಯೆ ಹಾದಿ ಹಿಡಿಯುವಂತಾಗಿದೆ. ಇದು ಸಾಲದೆಂಬಂತೆ ಐಎಂಎಫ್, ವಿಶ್ವಬ್ಯಾಂಕ್ ನಿರ್ದೇಶನದ ಮೇರೆಗೆ ಸಣ್ಣ ಕೈಗಾರಿಕೆಗಳಿಗಿದ್ದ ರಕ್ಷಣೆ ತೆಗೆದು ಆಮದು ಸುಂಕ ತೆಗೆದು ಸಣ್ಣ ಸಣ್ಣ ಕೈಗಾರಿಕೆಗಳು ಮುಚ್ಚುವ ಸ್ಥಿತಿ ಬಂದಿದೆ.

ಭಾಷಾವಾರು ಪ್ರಾಂತ್ಯಗಳನ್ನು ಒಡೆಯಲು ಕೇಂದ್ರದ ಬಿಜೆಪಿ ಸರ್ಕಾರ ಯತ್ನಿಸುತ್ತಿದ್ದು ಎಚ್ಚರ ಅಗತ್ಯ

ದೇಶದಲ್ಲಿ ಹಾಗೂ ರಾಜ್ಯದಲ್ಲಿ ಹೆಚ್ಚು ಉದ್ಯೋಗ ನೀಡುವ ಉದ್ದಿಮೆಯೇ ಸಣ್ಣ ಕೈಗಾರಿಕೆ ಇಂದು ಮುಚ್ಚುವ ಸ್ಥಿತಿಯಲ್ಲಿರುವುದರಿಂದ ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿದೆ. ಸರ್ಕಾರಗಳ ಖಾಸಗಿಕರಣಗಳ ನೀತಿಯಿಂದಾಗಿ ರಾಜ್ಯದ ಹೆಮ್ಮೆಯ ಕೆ.ಜಿ.ಎಫ್., ಶಿವಮೊಗ್ಗ ಜಿಲ್ಲೆಯ ಉಕ್ಕಿನ ಕಾರ್ಖಾನೆ, ಸಾವಿರಾರು ಕುಟುಂಬಗಳಿಗೆ ಬೆಳಕು ನೀಡುವ ಮೈಸೂರು ಲ್ಯಾಂಪ್ಸ್, ಇತ್ಯಾದಿ ಕಾರ್ಖಾನೆಗಳು ಮುಚ್ಚುವ ಹಂತದಲ್ಲಿವೆ. ಗಾಯದ ಮೇಲೆ ಬರೆ ಎಳೆದ ಹಾಗೆ ಪೆಟ್ರೋಲಿಯಂ ಉತ್ಪನ್ನಗಳ ದುಬಾರಿ ಬೆಲೆ, ಅಗತ್ಯ ವಸ್ತುಗಳ ವಿತರಣೆಯಲ್ಲಿ ಮೋಸ, ಜನರನ್ನು ಸಾವಿನ ದವಡೆಗೆ ತಳ್ಳದೆ, ಕರ್ನಾಟಕದ ಜನತೆ ರಾಜ್ಯೋತ್ಸವ ಆಚರಿಸುವಂತಾಗಲು ಕನ್ನಡ ಭಾಷೆಯ ಬೆಳವಣಿಗೆ ಜೊತೆಗೆ ಗ್ರಾಮೀಣ ಜನತೆಯ ಜೀವನ ಹಸನಾಗಲು, ಅವರ ಕೊಳ್ಳುವ ಶಕ್ತಿ ಹೆಚ್ಚಾಗಲು ಅಗತ್ಯವಾದ ಭೂಸುಧಾರಣೆ, ಸಣ್ಣ ಕೈಗಾರಿಕೆಗಳಿಗೆ ಅಗತ್ಯ ರಕ್ಷಣೆ, ಗ್ರಾಮಾಂತರ ಪ್ರದೇಶದಲ್ಲಿರುವ ಕೃಷಿ ಕಾರ್ಮಿಕರಿಗೆ ಸರ್ಕಾರದಿಂದ ಪ್ರೋತ್ಸಾಹ, ಅವರ ಕೂಲಿಯ ಹೆಚ್ಚಳ ಅದೇ ರೀತಿ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಪರಿಸ್ಥಿತಿ ಸುಧಾರಿಸಲು ಕನಿಷ್ಟ ಕೂಲಿ ಪರಿಷ್ಕರಣೆ, ಮಹಿಳೆಯರು ಹಾಗೂ ದಲಿತರ ಮೇಲಿನ ಅತ್ಯಾಚಾರ, ಹಿಂಸೆ ತಡೆಗಟ್ಟಿ, ಸಾಮಾನ್ಯ ಹಾಗೂ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಡೊನೇಷನ್ ರದ್ಧತಿ, ಶುಲ್ಕ ಕಡಿತ, ಶಿಕ್ಷಣ ಖಾಸಗೀಕರಣ ಮಾಡುವ ಮಠಗಳ ಮೇಲೆ ನಿಯಂತ್ರಣ, ಯುವ ಜನರ ಕೈಗೆ ಕೆಲಸ, ಅದಕ್ಕೆ ಬೇಕಾದ ಯೋಜನೆ ಮಾಡಬೇಕಾಗಿದೆ. ಇದಕ್ಕಾಗಿ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ಅದಕ್ಕಾಗಿ ದುಡಿಯುತ್ತಿರುವ ಸಾಮೂಹಿಕ ಸಂಘಟನೆಗಳು ಎಚ್ಚೆತ್ತು ಐಕ್ಯ ಹೋರಾಟ ಮಾಡುವ ಮೂಲಕ ಜನವಿರೋಧಿ ನೀತಿ ಬದಲಿಸಲು ಪ್ರತಿಜ್ಞೆಗೈದು ರಾಜ್ಯೋತ್ಸವವನ್ನು ಆಚರಿಸಬೇಕೆಂಬುದು ನಮ್ಮ ಆಶಯ.

ಆತ್ಮಹತ್ಯೆ ಈಗ ಆಲೂಗಡ್ಡೆ ರೈತರ ಸರದಿ

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಆತ್ಮಹತ್ಯೆಗೆ ಕಾರಣ ಹುಡುಕಹೊರಟರೆ ಆತನ ಅಥವಾ ಅವಳ ವೈಯಕ್ತಿಕ ಸಮಸ್ಯೆ, ಜೀವನದಲ್ಲಿ ಆದ ಜಿಗುಪ್ಸೆ, ಅವರ ಸೋಲುಗಳ ಸುತ್ತ ಸುತ್ತುತ್ತದೆ.

ಆದರೆ ಒಬ್ಬ ರೈತನ ಆತ್ಮಹತ್ಯೆಯನ್ನು ಪ್ರಸ್ತುತ ಸಂದರ್ಭದಲ್ಲಿ ನೋಡಿದಾಗ ನಮ್ಮದೇಶದ ಆರ್ಥಿಕ, ರಾಜಕೀಯ ವ್ಯವಸ್ಥೆಯ ಸುತ್ತ ಸುತ್ತಬೇಕಾಗುತ್ತದೆ. ಕಾರಣ ರೈತ ಈ ಸಮಾಜದ ಉತ್ಪಾದಕ ವ್ಯವಸ್ಥೆಯ ಮುಖ್ಯಕೊಂಡಿಯಾಗಿದ್ದಾನೆ.

ಇವತ್ತಿನ ಉದಾರೀಕರಣ, ಜಾಗತೀಕರಣ ಮತ್ತು ಮುಕ್ತ ವ್ಯಾಪಾರದ ಆಮದು ನೀತಿಯ ಫಲವಾಗಿ ಕೃಷಿ ಕ್ಷೇತ್ರದ ಮೇಲೆ ಹೆಚ್ಚಿರುವ ಧಾಳಿಗಳು ಒಂದೆರಡಲ್ಲ. ಪ್ರಸ್ತುತ ವ್ಯವಸಾಯ ಮಾಡುವುದು ಒಂದು ದುಬಾರಿ ಉದ್ಯಮವಾಗಿದ್ದು ಅಲ್ಲಿ ಬಂಡವಾಳ ಹೂಡಲು ದೇಶೀ ಹಾಗೂ ವಿದೇಶಿ ಬಂಡವಾಳಿಗರು ಬರಬೇಕಾಗಬಹುದು.

ಕಳೆದ ವರ್ಷ ಉತ್ತರಕರ್ನಾಟಕದಲ್ಲಿ ತೊಗರಿಬೇಳೆ ಬೆಳೆಗಾರರು ಸರಣಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಬೆನ್ನಲ್ಲೇ ಹಾಸನಜಿಲ್ಲೆಯ ಆಲೂಗಡ್ಡೆ ಬೆಳೆಗಾರನ ಆತ್ಮಹತ್ಯೆ ಪ್ರಕರಣ ಬೆಳಕಿಗೆ ಬಂದಿರುವುದು ಕಾಕತಾಳೀಯವೇನಲ್ಲ. ಈ ಪ್ರಕರಣ ನಮ್ಮ ಸರ್ಕಾರಗಳು ಅನುಸರಿಸುತ್ತಿರುವ ಮುಕ್ತ ಆರ್ಥಿಕ ನೀತಿಗೆ ಕೈಗನ್ನಡಿಯಂತಿದೆ.

ಹಾಸನ ಜಿಲ್ಲೆಯ ಬೇಲೂರಿನಿಂದ ಕೇವಲ 3 ಕಿ.ಮಿ. ದೂರದಲ್ಲಿರುವ ಬೆಂಟೇನಹಳ್ಳಿ ಗ್ರಾಮ ಪಂಚಾಯ್ತು ವ್ಯಾಪ್ತಿಗೆ ಬರುವ ಮುದಿಗೆರೆ ಗ್ರಾಮದ ರೈತ ಪುಟ್ಟೇಗೌಡ(55) ಎಂಬ ವ್ಯಕ್ತಿಯ ಆತ್ಮಹತ್ಯೆ ಜಿಲ್ಲೆಯ ಆಲೂಗಡ್ಡೆ ಬೆಳೆಗಾರರ ದುಸ್ಥಿತಿಗೆ ಒಂದು ಕೆಟ್ಟ ಉದಾಹರಣೆಯಾಗಿದೆ.

ದಿ. 30.10.2000 ಸೋಮವಾರ ಆತ್ಮಹತ್ಯೆಯಿಂದ ಸತ್ತ ರೈತ ಪುಟ್ಟೇಗೌಡರ ಪ್ರಕರಣ ಒಂದು ಮಾಮೂಲಿ ಆತ್ಮಹತ್ಯೆ ಪ್ರಕರಣದಂತೆ ಪೋಲೀಸ್ ಕಡತಗಳಲ್ಲಿ ದಾಖಲಾಗಿ ಮರೆಯಾಗುತ್ತಿದೆ. ಪತ್ರಿಕೆಯಲ್ಲಿ ಸುದ್ದಿ ಓದಿದ ಮೇಲೆ ಡಿವೈಎಫ್ಐ ನ ಮುಖಂಡರು ಸ್ಥಳಕ್ಕೆ ಬೇಟಿ ನೀಡಿದಾಗ ನೊಂದ ಕುಟುಂಬ ಯಜಮಾನನ ಸಾವಿನ ಆಘಾತದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ.

ರೈತ ಪುಟ್ಟೇಗೌಡ 2 ಗಂಡು ಮತ್ತು 1 ಹೆಣ್ಣುಮಗಳ ತಂದೆಯಾಗಿದ್ದು ಜೊತೆಗೆ ಪತ್ನಿ ನೀಲಮ್ಮ, 70 ವರ್ಷದ ತಾಯಿ ಪುಟ್ಟಮ್ಮ ಹಾಗೂ ಮೊದಲ ಮಗನ ಹೆಂಡತಿ ಮತ್ತು ಮಗು ಹೊಂದಿದ್ದು ವಯಸ್ಸಿಗೆ ಬಂದ ಮಗಳನ್ನು ಮದುವೆ ಮಾಡುವ ಜವಾಬ್ದಾರಿಯಿತ್ತು.

ಆತನ ಕುಟುಂಬ ನಿರ್ವಹಣೆಗೆ ಇದ್ದದ್ದು 3 ಎಕರೆ ಭೂಮಿ ಮಾತ್ರ. ಇಡೀ ಕುಟುಂಬದ ವ್ಯವಹಾರ ಪುಟ್ಟೇಗೌಡರದ್ದಾಗಿತ್ತು. ಈ ಕುಟುಂಬದಲ್ಲಿ ಹೇಳಿಕೊಳ್ಳುವಂತಹ ವಿದ್ಯಾವಂತರು ಒಬ್ಬರು ಇಲ್ಲ. ಪುಟ್ಟೇಗೌಡರು ಒಟ್ಟು ತನ್ನ ಕುಟುಂಬದ ಜವಾಬ್ದಾರಿ ಹೊತ್ತು ಇತರರಿಗೆ ಯಾವುದೇ ತೊಂದರೆ ಕೊಡದೆ, ತನಗೆ ಎಷ್ಟೇ 'ಜಂಜಾಟಗಳಿದ್ದರೂ ಮನೆಯವರಿಗೆ ತಿಳಿಸದೇ ಎಲ್ಲವನ್ನೂ ನಿರ್ವಹಿಸಿಕೊಂಡು ಕಷ್ಟಪಟ್ಟು ದುಡಿಯುತ್ತಿದ್ದು ಜೊತೆಗೆ ಸಣ್ಣ ಪುಟ್ಟ ಖರ್ಚಿಗೆ ಸಂತೆಯಲ್ಲಿ ಎತ್ತಿನ ವ್ಯಾಪಾರವನ್ನೂ ಕೂಡ ಮಾಡುತ್ತಿದ್ದರು.

ತನ್ನ ವ್ಯವಸಾಯವನ್ನೇ ನಂಬಿ, ವ್ಯವಸಾಯಕ್ಕಾಗಿ ಮತ್ತು ಕುಟುಂಬದ ನಿರ್ವಹಣೆಗಾಗಿ ಆತ ಮಾಡಿದ ಸಾಲ ಆತ ದುರಂತದಲ್ಲಿ ಸಾಯುವಂತೆ ಮಾಡಿತು. ಇರುವ ತುಂಡು ಭೂಮಿಯಲ್ಲಿ ಜೀವನ ನಿರ್ವಹಣೆ ನಡೆಯದಿದ್ದಾಗ ಕೆಲದಿನಗಳ ಹಿಂದೆ ಸಾಲ ಮಾಡಿ ಒಂದು ಎಕರೆ ಜಮೀನು ಕೊಂಡಿದ್ದರು. ಅಷ್ಟರಲ್ಲಾಗಲೇ ಪ್ರತಿವರ್ಷ ಆಲೂಗಡ್ಡೆ ಬೆಳೆಯಲು ಹಣವೂಡಿ ಸರಿಯಾದ ಬೆಲೆ ಸಿಗದೆ ಸಾಲದ ಹೊರೆಯಿಂದ ತತ್ತರಿಸುವ ಪರಿಸ್ಥಿತಿ ಇತ್ತು. ಆದರೆ ಆತನಿಗೆ ತಾನು ಉತ್ತಮ ಬೆಳೆ ಬೆಳೆದು ಸಾಲ ತೀರಿಸುವೆನೆಂಬ ವಿಶ್ವಾಸವಿತ್ತು.

ಅದೇ ರೀತಿ ಈ ಬಾರಿಯೂ ತನ್ನ ಜಮೀನು ಜೊತೆಗೆ ಬೇರೆ ಜಮೀನನ್ನು ಗುತ್ತಿಗೆ ಪಡೆದು ತಲಾ 800 ರೂ.ಗಳಂತೆ ಸುಮಾರು 20 ಚೀಲ ಆಲೂಗಡ್ಡೆ ಬಿತ್ತನೆ ಮಾಡಿ ಕಷ್ಟಪಟ್ಟು ವ್ಯವಸಾಯವನ್ನು ಮಾಡಿದರು. ಈ ಮಧ್ಯೆ ಸಾಲದವರ ಕಿರುಕುಳ ಅತಿಯಾಗಿ ಒಂದೆರಡುಬಾರಿಯಂತೂ ಗ್ರಾಮೀಣ ಬ್ಯಾಂಕ್‌ನವರು ಇವರು ತೆಗೆದುಕೊಂಡಿದ್ದ ಎತ್ತಿನಗಾಡಿ ಸಾಲ 16000 ರೂ. ವಸೂಲಾತಿಗೆ ಮನೆ ಬಾಗಿಲಿಗೆ ಬಂದು ಜಪ್ತಿ ಮಾಡುವ ಬೆದರಿಕೆಯನ್ನು ಹಾಕಿದ್ದರು. ಇವೆಲ್ಲದಕ್ಕೂ ಆಲೂಗಡ್ಡೆ ಬೆಳೆ ತೋರಿಸಿ ತನ್ನ ಮಾನವನ್ನು ಕಾಪಾಡಿಕೊಂಡಿದ್ದರು.

ಆದರೆ ನಮ್ಮ ಸಾಮಾಜಿಕ ಪರಿಸ್ಥಿತಿ ಹಾಗಿಲ್ಲವೇ! ಆತನ ದುರಾದೃಷ್ಟಕ್ಕೆ ಕಳಪೆ ಬೀಜ ಬಿತ್ತನೆಯಾಗಿ 200 ಚೀಲ ಬೆಳೆ ಬರುವ (ಇಳುವರಿ) ಜಾಗದಲ್ಲಿ ಕೇವಲ 20 ಚೀಲ ದೊರೆತು ಭೂಮಿಗೆ ಹಾಕಿದಷ್ಟೇ ಮರಳಿ ಪಡೆದಂತಾಯಿತು. ಇದರಿಂದ ಆತನ

ಪುಟ 9 ಕ್ಕೆ




ಆತ್ಮಹತ್ಯೆ ಮಾಡಿಕೊಂಡ ಪುಟ್ಟೇಗೌಡನ ಕುಟುಂಬ

ಕೇರಳ ಸಾರಾಯಿ ದುರಂತ

ಕರ್ನಾಟಕ ಸಚಿವ ಟಿ.ಜಾನ್ ಶಾಮೀಲು

ಕೇರಳದ ಕೊಲ್ಲಂನಲ್ಲಿ 35 ಜನರನ್ನು ಬಲಿ ತೆಗೆದುಕೊಂಡ ಅಮಾನವೀಯ ಅಕ್ರಮ ಸಾರಾಯಿ ದುರಂತದ ಹಿಂದಿರುವ ಶಕ್ತಿಗಳು, ಮುಖಗಳು ಒಂದೊಂದಾಗಿ ಹೊರಬರುತ್ತಿವೆ. ಕೆಲವರು ಕೇರಳದಿಂದ ತಲೆ ತಪ್ಪಿಸಿಕೊಂಡಿದ್ದು, ಕರ್ನಾಟಕದಲ್ಲಿ ನುಸುಳಿರುವುದಾಗಿ ಪೋಲೀಸರು ಶಂಕಿಸಿದ್ದಾರೆ. ಈ ಪ್ರಕರಣದಲ್ಲಿ ಆಡೂರು ಕ್ಷೇತ್ರದ ಶಾಸಕ, ಕೇರಳ ಪ್ರ.ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಆಡೂರು ಪ್ರಕಾಶ್ ಭಾಗಿಯಾಗಿರುವುದು ವರದಿಯಾಗಿದೆ. ಅವರು ಹೊಂದಿರುವ ಬಾರ್ ಒಂದರ ಮೂಲಕ ಅಕ್ರಮಸಾರಾಯಿ ಹಾಗೂ ಮಧ್ಯಗಳ ವ್ಯವಹಾರ ನಡೆಸುತ್ತಿದ್ದರೆಂದು ತಿಳಿದಿದೆ ಮತ್ತು ಹಲವರ ಹೆಸರಿನಲ್ಲಿ ಅನೇಕ ಬಾರ್‌ಗಳು, ಸಾರಾಯಿ ಅಂಗಡಿಗಳು ಚಲಾವಣೆಯಲ್ಲಿವೆ. ಕೆಲವು ದಿನಗಳ ಹಿಂದೆ ಸರ್ವೆ ಕಛೇರಿಯ ಉದ್ಯೋಗಿ ರಾಧಾಕೃಷ್ಣ ಪಿಳ್ಳೆ(30) ಮೇಲ್ವಾಣಿಸಿದ ಬಾರ್‌ನಲ್ಲಿ ಕುಡಿದ ರಮ್‌ನಿಂದ ಸಾವಿಗೀಡಾದುದು, ಇತರೆ ಮೂವರು ಇನ್ನೂ ವೈದ್ಯಕೀಯ ಚಿಕಿತ್ಸೆಗೊಳಗಾಗಿದ್ದಾರೆ.

ಇ.ಕೆ.ಎನ್.ರಾಜನ್



ಸಚಿವ ಟಿ.ಜಾನ್

ಕೊಲ್ಲಂನ ದುರಂತದಲ್ಲಿ ಮುಖ್ಯ ಪಾತ್ರಧಾರಿಗಳಾಗಿರುವ ಮಣಿಚೆಯನ್ ಸಹೋದರರಿಗೆ, ಕಾಂಗ್ರೆಸ್‌ನ ಮಾಜಿ ಸಚಿವರೊಬ್ಬರು ಹಾಗೂ ಅಂಡಮಾನ್‌ನ ಗವರ್ನರಾಗಿದ್ದವರೊಬ್ಬರ ಕೃಪಾಶಿರ್ವಾದ ವಿರುವುದು ಬಹಿರಂಗಗೊಂಡಿದೆ. ಇತ್ತೀಚೆಗೆ ಡಿವೈಎಫ್‌ಐ ಕಾರ್ಯಕರ್ತರು ಪಾಲ್ಘಾಟ್‌ನ ಚೆಕ್‌ಪೋಸ್ಟ್‌ನಲ್ಲಿ ಲಿಕ್ಕರ್‌ನ ರಾಸಾಯನಿಕ ತನಿಖೆಗೆ ಸ್ಯಾಂಪಲ್ಸ್ ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸಲೇಬೇಕೆಂದು ಪಿಕೆಟಿಂಗ್ ನಡೆಸಿದ್ದಾರೆ, ಅಧಿಕಾರಿಗಳು ಒಪ್ಪಿ ಕ್ರಮ ವಹಿಸಿದ್ದಾರೆ.

ಈ ಇಡೀ ಪ್ರಕರಣದಲ್ಲಿ ಕರ್ನಾಟಕದ ಸಚಿವರು ಹಾಗೂ ಇತರರ ಪಾತ್ರ ಹೊರಬಂದಿದೆ.

ಕೇರಳದ ಕೊಲ್ಲಂನಲ್ಲಿ ಇತ್ತೀಚಿನ ವಿಷಪೂರಿತ ಸಾರಾಯಿ ದುರಂತಕ್ಕೆ ಕಾರಣರಾದ ಸಾರಾಯಿ ಲಾಬಿಯ ಮಾಫಿಯಾ ಕೂಟದಲ್ಲಿ ಕರ್ನಾಟಕದ ವಿಮಾನಯಾನ ಮಂತ್ರಿಯಾದ ಟಿ.ಜಾನ್ ಹಾಗೂ ಕಾಂಗ್ರೆಸ್ ಪಕ್ಷದ ಅಖಿಲ ಭಾರತ

ಆರೋಪಿ ರಫಿಯನ್ನು ಅಡಗಿಸಿಡಲಾಗಿದೆ ಎನ್ನಲಾದ ಬೆಂಗಳೂರಿನ ನಲ್ಪಾಡ್ಸ್ ಹೋಟೆಲ್



ಜಂಟಿಕಾರ್ಯದರ್ಶಿ ಹಾಗೂ ಕೇರಳದ ಲೋಕಸಭಾ ಸದಸ್ಯ ರಮೇಶ್ ಚೆನ್ನಿತಲೆ ಪ್ರಮುಖರಾಗಿರುವುದು ಬೆಳಕಿಗೆ ಬಂದಿದೆ. ಇವರು ಕೇರಳದ ಪ್ರಮುಖ ಸ್ಪಿರಿಟ್ ಕಳ್ಳ ಸಾಗಾಣಿಕೆದಾರನಾದ ಎ.ಎಂ.ರಫಿ ಇವರ ವ್ಯವಹಾರದ ಪಾಲುದಾರರಾಗಿದ್ದಾರೆ. ಈ ದುಷ್ಟಕೂಟ ಮಾರಾಟ ಮಾಡಿದ ವಿಷಪೂರಿತ ಸಾರಾಯಿ ಕುಡಿದ ಜನರು ಆಸ್ಪತ್ರೆಗೆ ದಾಖಲಾದ ವಿಷಯ ತಿಳಿದ ಕೂಡಲೇ ಲೋಕಸಭಾ ಸದಸ್ಯ ರಮೇಶ್ ಚೆನ್ನಿತಲೆ ದೆಹಲಿಯಿಂದ ಕೇರಳಕ್ಕೆ ದಾವಿಸಿ ಬಂದು ಪ್ರಮುಖ ಆರೋಪಿ ಎ.ಎಂ.ರಫಿಯನ್ನು ಸುರಕ್ಷಿತವಾಗಿ ಕರ್ನಾಟಕದ ಭೂಗದಲೋಕದಲ್ಲಿ ಅಡಗಿಸಿ ಇಡುವ ವ್ಯವಸ್ಥೆ ಮಾಡಿರುತ್ತಾರೆ. ರಫಿಯ ಸ್ಪಿರಿಟ್ ಕಳ್ಳಸಾಗಾಣಿಕೆ ವ್ಯವಹಾರಕ್ಕೆ ಕರ್ನಾಟಕ ಸೇರಿದಂತೆ ನೆರೆಯ ರಾಜ್ಯಗಳಲ್ಲಿ ನೆಲೆ ಮಾಡಿಕೊಡುವಲ್ಲಿ ಎಐಸಿಸಿ ಅಖಿಲ ಭಾರತ ಜಂಟಿ ಕಾರ್ಯದರ್ಶಿ ಹಾಗೂ ಲೋಕಸಭಾ ಸದಸ್ಯ ರಮೇಶ್ ಚೆನ್ನಿತಲೆ ಇವರ ಪಾತ್ರ ಬಹಳ ದೊಡ್ಡದಿದೆ. ಕೇರಳದ ಮೂಲದವರಾದ ಹಾಗೂ ಡಿಸ್ಟಲರಿ ಒಡೆಯರಾದ ಕರ್ನಾಟಕದ ಮಂತ್ರಿಯಾದ ಟಿ.ಜಾನ್ ಸ್ಪಿರಿಟ್ ಕಳ್ಳಸಾಗಾಣಿಕೆದಾರ ರಫಿಯ ಬಲಗೈ ಬಂಟರಾಗಿರುತ್ತಾರೆ.

ಕಾಳು, ಮೆಣಸು ವ್ಯಾಪಾರಕ್ಕಾಗಿ ತಮ್ಮ 17ನೇ ವಯಸ್ಸಿನಲ್ಲಿ ಕೊಡಗು ಜಿಲ್ಲೆಯ ಬೆಟ್ಟಗಳಿಗೆ ಪಾದಾರ್ಪಣೆ ಮಾಡಿದ ಟಿ.ಜಾನ್ ಇಂದು ಖಾದಿ ಉಡುಪಿನ ಬೆಂಬಲದಿಂದ ರಾಜ್ಯದ ಲಿಕ್ಕರ್ ಲಾಬಿಯಲ್ಲಿ ಸ್ಥಾನ ಹೊಂದಿದ್ದಾರೆ.. ಕಾಳು, ಮೆಣಸು ವ್ಯಾಪಾರದ ಲಾಭದಿಂದ ಇವರು ಮುಂದೆ ಕೊಡಗು ಜಿಲ್ಲೆಯ ಹಲವಾರು ಕಾಫಿತೋಟಗಳ ಮಾಲೀಕರಾದರು, ಜೊತೆಯಲ್ಲಿ ಲೋಕೋಪಯೋಗಿ ಇಲಾಖೆ ಕೆಲಸದ ಗುತ್ತಿಗೆದಾರರು ಆಗಿದ್ದರು. ನಂತರದಲ್ಲಿ ಮುಂದೆ ಸ್ಪಿರಿಟ್ ವ್ಯಾಪಾರಕ್ಕೆ ಕಾಲಿರಿಸಿದರು. ಮುಂದೆ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ ಟಿ.ಜಾನ್ ಕೊಡಗು ಜಿಲ್ಲಾ ಮಾಲೀಮಾಳ ಅಸೋಸಿಯೇಷನ್ ಅಧ್ಯಕ್ಷರು, ಕೊಡಗು ಮೈನಾರಿಟಿ ಸೆಲ್ ಅಧ್ಯಕ್ಷರು ಹಾಗೂ ಮಡಿಕೇರಿ ನಗರಸಭೆಯ ಉಪಾಧ್ಯಕ್ಷರು ಸಹ ಆಗಿದ್ದರು. ಈ ರಂಗಗಳಲ್ಲಿ ಅನುಭವ ಪಡೆದ ಟಿ.ಜಾನ್ ಮುಂದೆ 1999 ರಲ್ಲಿ ಕರ್ನಾಟಕ ವಿಧಾನಸಭೆ ಪ್ರವೇಶಿಸಿದರು. ನೂರಾರು ವಾಹನಗಳು ರಾಜ್ಯದಲ್ಲಿ ಇವರ ಪರವಾಗಿ ಸಂಚರಿಸುತ್ತದೆ. ಟಿ.ಜಾನ್‌ರವರ ವಾಹನಗಳಿಗೆ ಕರ್ನಾಟಕದ ಎಲ್ಲಾ ಚೆಕ್‌ಪೋಸ್ಟ್‌ಗಳು ಸ್ವಯಂಚಾಲಿತವಾಗಿ ತೆರೆದುಕೊಳ್ಳುತ್ತವೆ. ಇವರ ಒಡೆತನದ ಬೆಂಗಳೂರಿನ ಬನ್ನೇರುಘಟ್ಟದ ರಸ್ತೆಯಲ್ಲಿ 23 ಎಕರೆ ಪ್ರದೇಶದಲ್ಲಿರುವ ಟಿ.ಜಾನ್ ಕಾಲೇಜ್ ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ಸಂಯೋಜಿತ ವಾಗಿದೆ. ಇದಲ್ಲದೆ ಎರ್ನಾಕುಲಂನಲ್ಲಿ ಕಾಲೇಜ್ ಆಫ್ ಫ್ಯಾಷನ್ ಡಿಸೈನಿಂಗ್ ಎಂಬ ಕಾಲೇಜ್ ಆರಂಭಿಸಿರುತ್ತಾರೆ. ಕೇರಳದ ತಿರುವನಂತಪುರಂ ಜಿಲ್ಲೆಯಲ್ಲಿರುವ ಕುಮರಕಂನಲ್ಲಿ 12 ಕೋಟಿ ರೂಪಾಯಿ ಖರ್ಚಿನಲ್ಲಿ ಲೇಕ್‌ರಿಸಾರ್ಟ್ ಪ್ರೈವಟ್ ಲಿ. ಎಂಬ ಸಂಸ್ಥೆ ಹುಟ್ಟು ಹಾಕಿ ಪ್ರವಾಸೋದ್ಯಮರು ಉದ್ದಿಮೆಗೆ ಕಾಲಿಸಿರಿಸಿದ್ದಾರೆ.

ಈ ಪ್ರಮುಖ ಉದ್ಯಮಗಳಿಗಿಂತ ಹೆಚ್ಚು ಲಾಭ ತರುವ ಉದ್ಯಮ ಭೂಗತ ವ್ಯಾಪಾರದ ಉದ್ಯಮ, ಟಿ.ಜಾನ್‌ರವರ ವ್ಯವಹಾರದ ಮೂಲ ಬೇರುಗಳು ದೆಹಲಿಯಿಂದ ಹಿಡಿದು ರಾಷ್ಟ್ರದ ಹಲವಾರು ಪ್ರಮುಖ ನಗರಗಳವರೆಗೆ ಹರಡಿ ಬೇರೂರಿದೆ.

ಸ್ಪಿರಿಟ್ ಕಳ್ಳಸಾಗಾಣಿಕೆ ದಾರ ರಫಿಯ ಕಳ್ಳ ಸ್ಪಿರಿಟ್ ವ್ಯಾಪಾರ ಕೇರಳದಲ್ಲಿ ಎ.ಕೆ. ಆಂಟನಿಯವರ ಅಧಿಕಾರದ ಸಮಯದಲ್ಲಿ ಆರಂಭ ವಾಯಿತು. 1995-96 ರ ಕಾಲದಲ್ಲಿ ತಿರುವನಂತಪುರಂ ಜಿಲ್ಲೆಯಲ್ಲಿ ಸಿಟಿಲೈಟ್ ಎಂಬ ಬಾರ್ ಆರಂಭಿಸಿದ ರಫಿಗೆ ಅಂದು ಬಾರ್ ಆರಂಭಿಸಲು ಅನುಮತಿ ಕೊಡಬಾರದು ಎಂದು ಅಂದು ಅಬಕಾರಿ ಇಲಾಖೆ ಅಧಿಕಾರಿಗಳ ಆದೇಶ ತಳ್ಳಿ ಹಾಕಿ ಅಂದಿನ ಯುಡಿಎಫ್ ಸರ್ಕಾರ ಪರವಾನಗಿ ನೀಡಿತು. ಈ ಬಾರ್‌ನಿಂದ ರಫಿಯ ಕಳ್ಳ ಸಾರಾಯಿ ವ್ಯವಹಾರ ಆರಂಭಗೊಂಡಿತು.

ಮಂತ್ರಿ ಟಿ.ಜಾನ್‌ರವರು ಕರ್ನಾಟಕದಲ್ಲಿ ಮೂರು ಸಾರಾಯಿ ಡಿಸ್ಟಿಲರಿಗಳ ಒಡೆಯರಾಗಿರುತ್ತಾರೆ. ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ ಟಿ.ಜಾನ್ ಡಿಸ್ಟಲರಿ ಹೆಸರಿನಲ್ಲಿ ಒಂದು, ಜಾನ್‌ರವರ ರಾಜಕೀಯ ಮುಖ್ಯಕ್ಷೇತ್ರ ಕೊಡಗಿನಲ್ಲಿ ಹಾಗೂ ಬೆಂಗಳೂರು ಸಮೀಪದ ದೊಡ್ಡಬಳ್ಳಾಪುರದಲ್ಲಿ ಎರಡು ಡಿಸ್ಟಲರಿಗಳಿವೆ. ಮಲೆಯಾಳಂ ಮನೋರಮಾ ಗುಂಪಿನ ವ್ಯವಹಾರವನ್ನು ಕರ್ನಾಟಕದಲ್ಲಿ ಬೆಳೆಸುವಲ್ಲಿ ಟಿ.ಜಾನ್‌ರವರ ಪಾತ್ರ ಬಹಳ ದೊಡ್ಡದು. ಇಂಟಗ್ರೇಟ್ ಫೈನಾನ್ಸ್ ಎಂಬ ಹಣಕಾಸು ಸಂಸ್ಥೆ ಮಲೆಯಾಳಂ ಮನೋರಮಾ ಗುಂಪಿಗೆ ಸೇರಿದ್ದಾಗಿದೆ. ಈ ಸಂಸ್ಥೆಗೆ ಕೋಟ್ಯಾಂತರ ರೂಪಾಯಿ ಠೇವಣಿ ಕೊಡಿಸುವಲ್ಲಿ ಇವರ ಪಾತ್ರ ಪ್ರಮುಖವಾದದ್ದು. ಚಿಕ್ಕಮಗಳೂರು ಜಿಲ್ಲೆಯ ಬಾಳೆ ಹೊನ್ನೂರಿನಲ್ಲಿ ಕಾಫಿ ಎಸ್ಟೇಟ್‌ಗಳಲ್ಲಿಯೂ ಟಿ.ಜಾನ್‌ರವರ ಪಾಲುದಾರಿಕೆ ಇದೆ. ಬೆಂಗಳೂರಿನ ಕನ್ನಿಂಗ್ ಹ್ಯಾಂ ರಸ್ತೆ ಹಾಗೂ ಲಾಲ್‌ಬಾಗ್ ರಸ್ತೆಯಲ್ಲಿ ಎಂ.ಆರ್.ಎಫ್. ಹೆಸರಿನಲ್ಲಿ ದೊಡ್ಡ ಬಿಲ್ಡಿಂಗ್‌ಗಳನ್ನು ಖರೀದಿಸಿದ್ದು ಇವುಗಳಲೆಲ್ಲ ಕಳ್ಳ ಸ್ಪಿರಿಟ್ ಹಣದ ಪಾಲು ಮುಖ್ಯವಾಗಿದೆ. ಕಾಂಗ್ರೆಸ್ ಟಿಕೆಟ್‌ನಲ್ಲಿ ಸ್ಪರ್ಧಿಸಿ ಹೆಚ್ಚಿನ ಬಹುಮತದಲ್ಲಿ ಶಾಸಕನಾಗಿ ಆರಿಸಿ ಬಂದಿರುವ ಟಿ.ಜಾನ್‌ರವರ ಸ್ಪಿರಿಟ್ ಹಣದ ಕೈವಾಡ ಮುಖ್ಯವಲ್ಲವೇ?

ವಿಷಪೂರಿತ ಸಾರಾಯಿ ದುರಂತಕ್ಕೆ ಕಾರಣಕರ್ತರನ್ನು ಮುಚ್ಚಿಟ್ಟಿರುವುದು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೇ ಕಾಸರಗೋಡು ಜಿಲ್ಲೆಯವರಾದ ಹಾಗೂ ಕರ್ನಾಟಕದ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷರಾದ ಎಸ್.ಎ.ಹ್ಯಾರಿಸ್‌ರವರ ಒಡೆತನದಲ್ಲಿರುವ ಮೂರು ಪ್ರಮುಖ ಹೋಟೆಲ್‌ಗಳಲ್ಲಿ ಒಂದಾದ ನಲಪಾಡ ಗ್ರೂಪಿನ ಬೆಂಗಳೂರಿನ ಹೈಗ್ರೌಂಡ್ಸ್ ಬಳಿಯಿರುವ ಹೋಟೆಲ್ ಬೆಂಗಳೂರು ಇಂಟರ್‌ನ್ಯಾಷನಲ್‌ನಲ್ಲಿ ಇಂದು ಆರೋಪಿ ಎ.ಎಂ. ರಫಿಯನ್ನು ಅಡಗಿಸಿಡಲಾಗಿದೆ ಎಂಬ ಸುದ್ದಿ ಇದೆ. ಈ ಎಸ್.ಎ.ಹ್ಯಾರಿಸ್, ಟಿ.ಜಾನ್ ಹಾಗೂ ರಮೇಶ್ ಚೆನ್ನಿತಲ ಇವರು ಬಹಳ ಆತ್ಮೀಯ ಸ್ನೇಹಿತರು. ವಿಷಪೂರಿತ ಸಾರಾಯಿ ದುರಂತದ ನಂತರ ಲೋಕಸಭಾ ಸದಸ್ಯ ರಮೇಶ್ ಚೆನ್ನಿತಲ, ಮಂತ್ರಿ ಟಿ.ಜಾನ್ ಹಾಗೂ ರಾಜ್ಯದ ಯುವ ಕಾಂಗ್ರೆಸ್ ಅಧ್ಯಕ್ಷ ಹ್ಯಾರಿಸ್ ಬೆಂಗಳೂರಿನಲ್ಲಿ ಸೇರಿ ಗುಪ್ತ ಮಾತುಕತೆ ನಡೆಸಿರುತ್ತಾರೆಂದು ಗುರುತಿಸಲಾಗಿದೆ.

ಕಳ್ಳ ಸಾರಾಯಿ ಲಾಭಿಯ ಜೊತೆ ಕಾಂಗ್ರೆಸ್ ಮುಖಂಡರ ಕೈವಾಡಬಗ್ಗೆ ಒಂದು ವಿಶೇಷ ಪೋಲೀಸ್ ತಂಡದ ಮೂಲಕ ತನಿಖೆ ನಡೆಸುವುದಾಗಿ ಕೇರಳದ ಮುಖ್ಯ ಮಂತ್ರಿ ಇ.ಕೆ.ನಾಯನಾರ್ ಹೇಳಿದ್ದಾರೆ. ಅಕ್ರಮ ದಂಧೆಗಳ ತಾಣಗಳ ಮೇಲೆ ದಾಳಿ ನಡೆಯುತ್ತಿದೆ. ಇದಕ್ಕೆ ಜನತೆ ಪೂರ್ಣ ಸಹಕಾರಬೇಕೆಂದು ನ್ಯಾಯಮೂರ್ತಿ ಕೋರಿದ್ದಾರೆ. ವಿಷ ಸಾರಾಯಿ ದುರಂತಕ್ಕೆ ಗುಪ್ತ ರಾಜಕೀಯ ಕೈವಾಡವಿದೆ ಎಂದು ಮುಖ್ಯಮಂತ್ರಿ ಹೇಳಿರುತ್ತಾರೆ. ಮುಂಬರುವ ವಿಧಾನಸಭೆ ಚುನಾವಣೆಗೆ ಕೇವಲ ಆರು ತಿಂಗಳಿರುವ ಸಂದರ್ಭದಲ್ಲಿ ಈ ದುರಂತ ನಡೆದಿದೆ. ಈ ಕೈವಾಡದ ಹಿಂದೆ ಯಾರದೋ ಚಾಣಾಕ್ಷತನ ಇದೆ ಎಂದು ಹೇಳಿರುವ ನಾಯನಾರ್ ಹೆಚ್ಚಿನ ವಿವರಗಳನ್ನು ಈಗ ಬಹಿರಂಗಗೊಳಿಸುವುದಿಲ್ಲ ಎಂದಿದ್ದಾರೆ. ಎರಡು ಐಜಿಪಿಗಳ ನೇತೃತ್ವದಲ್ಲಿ ಈ ಬಗ್ಗೆ ಎರಡು ವಿಭಾಗಗಳಾಗಿ ತನಿಖೆ ನಡೆಸಲು ಎಲ್.ಡಿ.ಎಫ್. ಸರ್ಕಾರ ತೀರ್ಮಾನಿಸಿದೆ. ಸರ್ವಪಕ್ಷಗಳ ಸಭೆಯನ್ನು ಮುಖ್ಯಮಂತ್ರಿಗಳು ಕರೆದಿದ್ದಾರೆ.

ಈ ನಡುವೆ ಕೇರಳದ ಯು.ಡಿ.ಎಫ್. ಜನರ ಗಮನವನ್ನು ಬೇರೆ ಕಡೆ ಸೆಳೆಯಲು ಹಾಗೂ ಮುಖ್ಯ ಆರೋಪಿಗಳಿಗೆ ಸಹಾಯ ಮಾಡುವ ರೀತಿಯಲ್ಲಿ ಒಂದು ದಿನ ಹರತಾಳ ನಡೆಸಿದೆ. ಈ ಹರತಾಳದ ದಿನ ಹಲವಾರು ಕಡೆ ಕಲ್ಲು ತೂರಾಟ ನಡೆದಿದೆ.

ಈ ಪ್ರಕರಣದಲ್ಲಿ ಭಾಗಿಯಾದ ಆರೋಪಿತರಾಗಿರುವ ಸಚಿವ ಜಾನ್ ಕೇವಲ ಪತ್ರಿಕಾಗೋಷ್ಠಿ ಮೂಲಕ ಅಲ್ಲಗೆಳೆದರೆ ಸಾಲದು. ತಾನು ಹೇಗೆ ದೋಷಮುಕ್ತನೆಂದು ಸಾಬೀತುಪಡಿಸಬೇಕು. ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು ಈ ಕಳಂಕಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮವಹಿಸಬೇಕು.

ಸಾರಾಯಿ ದುರಂತದಲ್ಲಿ ಮಡಿದವರ ದುರಂತ ಸ್ಥಳಕ್ಕೆ ಮುಖ್ಯಮಂತ್ರಿ ಇ.ಕೆ.ನಾಯನಾರ್




ಐತಿಹಾಸಿಕ ವಿಶೇಷ ಸಮ್ಮೇಳನ

ಇದೊಂದು ಐತಿಹಾಸಿಕ ಘಟನೆ. ಭಾರತದ ಇತಿಹಾಸದಲ್ಲಿನ ವಿಶಿಷ್ಟ ಅಧ್ಯಾಯ. 1964 ರಲ್ಲಿ ಭಾರತದ ಕ್ರಾಂತಿಯ ಯಶಸ್ವಿ ಹಾದಿಯನ್ನು ನಿಖರವಾಗಿ ಗುರುತಿಸಿದ 36 ವರ್ಷಗಳ ನಂತರ ಈಗ ಬದಲಾದ ಸನ್ನಿವೇಶದಲ್ಲಿ ಸಿಪಿಐ(ಎಂ) ತನ್ನ ಕಾರ್ಯಕ್ರಮವನ್ನು ಸಮಕಾಲೀಕನಗೊಳಿಸಿದ್ದು ಈ ವಿಶೇಷ ಸಮ್ಮೇಳನದಲ್ಲಿ... ಈ ಸಮ್ಮೇಳನ ಸಂಘಟಿಸಲಾಗುವ ಸುದ್ದಿ ಪ್ರಕಟಿಸಿದ ತಕ್ಷಣದಿಂದಲೇ ದೇಶ-ವಿದೇಶಗಳ, ಬಂಡವಾಳಗಾರರ ಸುದ್ದಿ ಮಾಧ್ಯಮಗಳು ಕಪೋಕಲ್ಪಿತ ಸಂಗತಿಗಳನ್ನು ಹೆಣಯತೊಡಗಿದವು. ಉದ್ದೇಶವನ್ನು ವಿಕೃತಗೊಳಿಸ ಬಯಸಿದವು. ಇದರ ಮಹತ್ವವನ್ನು ಮಸುಕುಗೊಳಿಸಲೆತ್ನಿಸಿದವು. ಇಡೀ ಸಮ್ಮೇಳನದ ಚರ್ಚೆಯೇ ಕೇಂದ್ರದಲ್ಲಿ ಸರ್ಕಾರದಲ್ಲಿ ಅಧಿಕಾರ ವಹಿಸಿಕೊಳ್ಳುವ ಬಗ್ಗೆಯೇ... ಎಂದು ಬಿಂಬಿಸಿದರು.(ಕ್ರಾಂತಿಯ ಬಗ್ಗೆ ಜನರಿಗೆ ತಿಳಿದು ಹೋದರೆ ಹೇಗೆ?) ಆದರೆ ಸಮ್ಮೇಳನದ ಅಜೆಂಡಾವೇನೂ ಬದಲಾಗಲಿಲ್ಲ. 36 ವರುಷಗಳ ನಂತರದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಮೂಲಭೂತ ಅಂಶಗಳನ್ನು ಮರುದೃಢಪಡಿಸಿ, ಆಂತರಿಕ ಚರ್ಚೆಗಳಿಂದ ಮೂಡಿದ ಹೊಸ ಅಂಶಗಳಿಂದ ಸಶಕ್ತವಾಯಿತು.

"ಪಕ್ಷದ ಮೊದಲ ಮಹಾಧಿವೇಶನ ನಡೆದಾಗ ನಾನು ಸೆರೆಮನೆಯಲ್ಲಿ ಬಂಧಿಯಾಗಿದ್ದೆ. ನಂತರದ ಎಲ್ಲಾ ಮಹಾಧಿವೇಶನಗಳಲ್ಲಿ ಪಾಲ್ಗೊಳ್ಳುವ ಅವಕಾಶ ನನಗೆ ದೊರೆತಿದೆ. ಆದರೆ ಈ ವಿಶೇಷ ಸಮ್ಮೇಳನಕ್ಕೆ ತನ್ನದೇ ಆದ ಮಹತ್ವವಿದೆ" ಎನ್ನುತ್ತಾರೆ ಹಿರಿಯ ಸಂಗಾತಿ ಹರ್ಕಿಶನ್ ಸಿಂಗ್ ಸುರ್ಜಿತ್.

ಅಕ್ಟೋಬರ್ 20 ರಿಂದ 23, 2000 ತಿರುವನಂತಪುರದಲ್ಲಿ ನಡೆದ ಈ ವಿಶೇಷ ಸಮ್ಮೇಳನದಲ್ಲಿ ಭಾಗಿಯಾದ ಪ್ರತಿನಿಧಿಗಳು 393. ಸಮ್ಮೇಳನದ ಪೂರ್ವಭಾವಿಯಾಗಿ ಕರಡುವರದಿಯ ಮೇಲೆ ದೇಶಾದ್ಯಂತ ನಡೆದ ಚರ್ಚೆಗಳಲ್ಲಿ ಬಂದ ತಿದ್ದುಪಡಿಗಳು 5725. ಹಾಗೂ 530 ಸಲಹೆಗಳು. ಇದರಲ್ಲಿ 160 ತಿದ್ದುಪಡಿಗಳನ್ನು ಕೇಂದ್ರ ಸಮಿತಿಯು ಸ್ವೀಕರಿಸಿ, ಅಂಗೀಕಾರಕ್ಕಾಗಿ ಸಮ್ಮೇಳನದ ಮುಂದೆ ಮಂಡಿಸಿತು. ಅಲ್ಲದೇ ಪ್ರತಿನಿಧಿಗಳು ಸಹ 230 ತಿದ್ದುಪಡಿ ಹಾಗೂ 2 ಸಲಹೆಗಳನ್ನು ನೀಡದ್ದು,



ಇವೆಲ್ಲವುಗಳನ್ನು ಸಮ್ಮೇಳನ ಚರ್ಚಿಸಿ ಕೆಲವನ್ನು ಅಂಗೀಕರಿಸಿತು. ಈ ಎಲ್ಲಾ ಮಥನದ ನಂತರ ಸಕಾಲಿಕಗೊಳಿಸಿದ ಕರಡು ಕಾರ್ಯಕ್ರಮವು

ಪುಟ 9 ಕ್ಕೆ

ಭಾರತದ ಸಮಾಜವಾದಕ್ಕೆ ಹಾದಿ

ಜನತಾ ಪ್ರಜಾಪ್ರಭುತ್ವದೆಡೆ ಮುನ್ನಡೆ

ಸೀತಾರಾಂ ಯೆಚೂರಿ

ಯಾವ ಪತ್ರಿಕೆಗಳನ್ನು ತೆರೆದರೂ ಒಂದೇ ಸುದ್ದಿ. ಯಾವ ದೂರದರ್ಶನ ಚಾನಲ್ ತಿರುಗಿಸಿದರೂ ಒಂದೇ ಸುದ್ದಿ. ಆಕಾಶವಾಣಿಯಲ್ಲೂ ಅದೇ ಸುದ್ದಿ. ಸಿಪಿಐ(ಎಂ)ನ ವಿಶೇಷ ಮಹಾಧಿವೇಶನದ ಸುದ್ದಿ. 2000 ನೇ ಇಸವಿ ಅಕ್ಟೋಬರ್ 20 ರಿಂದ 23 ರವರೆಗೆ ತಿರುವನಂತಪುರದಲ್ಲಿ ನಡೆದ ಈ ವಿಶೇಷ ಮಹಾಧಿವೇಶನದಲ್ಲಿ ಸಿಪಿಐ(ಎಂ) ಸಮಕಾಲೀನಗೊಳಿಸಿದ ಕಾರ್ಯಕ್ರಮವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.



ರಾಷ್ಟ್ರೀಯ ಮಾಧ್ಯಮಗಳ ಅಪ್ಪಟ ಅವಿವೇಕ ಮತ್ತು ಹಗೆತನ

ಅವಧಿಯುದ್ದಕ್ಕೂ ಸಿಪಿಐ(ಎಂ) ಒಳಗೆ ಸತತವಾಗಿ ಚರ್ಚೆ ನಡೆಯುತ್ತಿದ್ದಾಗ ರಾಷ್ಟ್ರೀಯ ಮಾಧ್ಯಮದ ಪ್ರತಿಕ್ರಿಯೆಗಳು ವಿಷಯಗಳ ಕುರಿತು ಸಂಪೂರ್ಣ ಅಜ್ಞಾನವನ್ನು ತೋರುವುದರಿಂದ ಹಿಡಿದು ಅನಿರ್ಬಂಧಿತ ಹಗೆತನವನ್ನು ಮೆರೆಯುವವರೆಗೆ ಇದ್ದವು. ವಾಸ್ತವದಲ್ಲಿ, ಸಿಪಿಐ(ಎಂ)ನ ಗುರಿ ಏನಿರಬೇಕು ಎನ್ನುವುದನ್ನು ಅವರೇ ಬುದ್ಧಿವಾದ ಹೇಳುವಂತಹ ಪ್ರಯತ್ನಗಳು ನಡೆದವು. ಬಂಡವಾಳಶಾಹಿ ಅಧಿಪತ್ಯವನ್ನು ಕಿತ್ತೊಗೆಯುವ ಕ್ರಾಂತಿಕಾರಕ ವಿಷಯವೊಂದನ್ನು ಬಿಟ್ಟು ಬೇರೆ ಯಾವ ವಿಚಾರವನ್ನು ಸಿಪಿಐ(ಎಂ) ಚರ್ಚೆ ನಡೆಸಬೇಕು ಎಂಬ ಸಲಹೆಗಳನ್ನು ನೀಡುತ್ತಾ ತಾವು ಯಾವ ವರ್ಗದ ಪರ ತುತ್ತೂರಿ ಊದುತ್ತಿದ್ದೇವೆಯೆನ್ನುವುದನ್ನು ಪತ್ರಿಕೆಗಳು ಜಗಜ್ಜಾಹೀರುಪಡಿಸಿದವು.

ಬಂಡವಾಳಶಾಹಿಗಳು ಮತ್ತು ಅವರ ಬಾಡಿಗೆ ಲೇಖಕರು ಹಗಲೂ ಇರುಳೂ ತಮ್ಮ ಬರವಣಿಗೆಗಳ ಮೂಲಕ ಬಯಸಿದ್ದೇನೆಂದರೆ ಅವರ ಅಧಿಪತ್ಯವನ್ನು ಕಿತ್ತೊಗೆಯಲು ಪ್ರಯತ್ನಿಸದೆ ಈಗಿರುವ ಬಂಡವಾಳಶಾಹಿ ಆಳ್ವಿಕೆಯನ್ನು ಭಾರತದಲ್ಲಿ ಸುಧಾರಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಪಕ್ಷದ ಕಾರ್ಯಕ್ರಮವನ್ನು ಸಿಪಿಐ(ಎಂ) ಪರಿಷ್ಕರಿಸಬೇಕು ಎಂದು.

ಸಿಪಿಐ(ಎಂ) ಸಮಾಜವಾದಿ ಪ್ರಜಾಪ್ರಭುತ್ವ ಪಕ್ಷವಾಗಿ ಮಾರ್ಪಾಟಾಗಬೇಕೆಂಬುದು ಅವರ ಆಶಯ. ಅಂದರೆ ಈ ಶೋಷಣೆಯ ವರ್ಗ ಆಳ್ವಿಕೆ ನಿರಂತರವಾಗಿ ಮುಂದುವರಿಯಲು ಸಿಪಿಐ(ಎಂ) ಕೈಜೋಡಿಸಬೇಕೆಂಬುದೇ ಅದರ ಅರ್ಥ!

ಈ ವಿಶೇಷ ಮಹಾಧಿವೇಶನದ ಮಹತ್ವ ಇರುವುದೇ ಇಲ್ಲಿ. ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರಿ ಸಿದ್ಧಾಂತಗಳಿಗೆ ತಪ್ಪು ತಿಳಿಯಲು ಅವಕಾಶವೇ ಇಲ್ಲದಂತೆ ಅಂಟಿಕೊಂಡೇ ಸಿಪಿಐ(ಎಂ) ತನ್ನ ಕಾರ್ಯಕ್ರಮ ಸಮಕಾಲೀನಗೊಳಿಸಿದೆ.

ಮಾರ್ಕ್ಸ್‌ವಾದಿ ದ್ವಂದ್ವಮಾನ ತತ್ವದ ಜೀವಂತ ತಿರುಳೇ ವಾಸ್ತವಿಕ ಪರಿಸ್ಥಿತಿಯ ವಸ್ತುನಿಷ್ಠ ವಿಶ್ಲೇಷಣೆ ಎಂಬ ತಿಳುವಳಿಕೆಯನ್ನು ಪುನರುಚ್ಚರಿಸಿದ ಪಕ್ಷವು ವಿಶ್ವದಲ್ಲಿ ಹಾಗೂ ಭಾರತದಲ್ಲಿ ಬಂಡವಾಳದಲ್ಲಿ ಆದ ಗಾಢವಾದ ಬದಲಾವಣೆಯನ್ನು ಸಮಕಾಲೀನಗೊಳಿಸಿದ ಕಾರ್ಯಕ್ರಮವು ವಿಶ್ಲೇಷಿಸಿದೆ.

ಇಂದಿನ ವಿಶ್ವ ಬಂಡವಾಳಶಾಹಿಯ ಪ್ರಮುಖ ಲಕ್ಷಣವೆಂದರೆ ಹಣಕಾಸು ಬಂಡವಾಳದ ಅಂತರರಾಷ್ಟ್ರೀಕರಣ. ಇದರ ಪರಿಣಾಮಗಳನ್ನು ಸವಿಸ್ತಾರವಾಗಿ ಪಕ್ಷದ 16ನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಹೇಳಲಾಗಿದೆ. ತನ್ನ ಅನಿರ್ಬಂಧಿತ ಚಲನೆಯಿಂದಾಗಿ ದೇಶ ದೇಶಗಳ ನಡುವಿನ ಗಡಿಗಳನ್ನು ಒಡೆದು ಹಾಕಲು ಅದು ನಡೆಸುತ್ತಿರುವ ಧಾಳಿಯ ಪ್ರಯತ್ನ, ಅದರ ಜಾಗತಿಕ ಹರಿವಿನ ಗುಣ ಮತ್ತು ಮೂರನೇ ಜಗತ್ತಿನ ಆರ್ಥಿಕತೆಯ ಮೇಲೆ ವೈರ ಸಾಧಿಸಿ ಹಾಳು ಮಾಡಲು ಅದಕ್ಕಿರುವ ಶಕ್ತಿ.

ಆದಾಗ್ಯೂ ಇದು 1980ರಲ್ಲಿ ಇದ್ದಕ್ಕಿದ್ದ ಹಾಗೆ ಹೊರಹೊಮ್ಮಿದ ಬೆಳವಣಿಗೆಯೇ? ಅದಕ್ಕೆ ತದ್ವಿರುದ್ಧವಾಗಿ, ಬಂಡವಾಳಶಾಹಿಯು ಬೆಳೆಯುತ್ತಾ ಹೋದ ಹಾಗೆ, ಅನಿವಾರ್ಯವಾಗಿ ಬಂಡವಾಳದ ಕ್ರೋಢೀಕರಣ ಮತ್ತು ಕೇಂದ್ರೀಕರಣದ ಕಡೆಗೆ ಅದು ಚಲಿಸಿಯೇ ಚಲಿಸುತ್ತದೆ ಎಂಬ ಸತ್ಯವನ್ನು ಮಾರ್ಕ್ಸ್‌ವಾದವೆಂಬ ವಿಜ್ಞಾನವು ನಮಗೆ ಹೇಳಿಕೊಟ್ಟಿದೆ. ವೈಯಕ್ತಿಕ ಬಂಡವಾಳಿಗರು ಬಂಡವಾಳವನ್ನು ಒಟ್ಟುಗೂಡಿಸುವ ಪ್ರಕ್ರಿಯೆಯ ಮೂಲಕ ಇದು ಉಂಟಾಗುತ್ತದೆ. ಒಬ್ಬ ಬಂಡವಾಳಗಾರ ಅದನ್ನು ಒಟ್ಟುಗೂಡಿಸುವುದು ಅವನೊಬ್ಬ ಸಂಪತ್ತನ್ನು ಕೂಡಿಹಾಕುವ ಅತಿ ಲಾಲಸೆಯ ಜಿಪುಣನಾಗಿರುವುದಕ್ಕಲ್ಲ. ಅವನು ಹಾಗೆ ಬಂಡವಾಳ ಒಟ್ಟುಗೂಡಿಸದೇ ಹೋದರೆ ಬಂಡವಾಳಗಾರರ ನಡುವಿನ ಸ್ಪರ್ಧೆಯಿಂದಾಗಿ ಪಕ್ಕಕ್ಕೆ ತಳ್ಳಲ್ಪಡುತ್ತಾನೆ. ಆದ್ದರಿಂದ ಬಂಡವಾಳ ಒಟ್ಟುಗೂಡಿಸುತ್ತಾನೆ. ವ್ಯವಸ್ಥೆ ಒಬ್ಬ ವೈಯಕ್ತಿಕ ಬಂಡವಾಳಗಾರನನ್ನು ಬಂಡವಾಳ ಒಟ್ಟುಗೂಡಿಸಲು ಬಲತ್ಕರಿಸುತ್ತದೆ, ಇಲ್ಲದಿದ್ದರೆ ಪಕ್ಕಕ್ಕೆ ಸರಿಸಲ್ಪಡುತ್ತಾನೆ. ಈ ಬಲಾತ್ಕಾರವೇ ಕೆಲವೇ ಕೆಲವರ ಕೈಯಲ್ಲಿ ಬಂಡವಾಳದ ಕ್ರೋಢೀಕರಣ ಮತ್ತು ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ. ಸಮಯ ಕಳೆದ ಹಾಗೆ ಕೆಲವೇ ಕೆಲವು ಆದರೆ ದೊಡ್ಡ ದೊಡ್ಡ ಬಂಡವಾಳಗಾರರು ಮಾತ್ರ ಇರುತ್ತಾರೆ.

ಈ ವೈಜ್ಞಾನಿಕ ವಿಶ್ಲೇಷಣೆಯೇ ಸಂಕ್ಷಿಪ್ತವಾಗಿ, ಕೆಲವೇ ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿ ಆಸ್ತಿಗಳ ಅಗಾಧ ಕ್ರೋಢೀಕರಣ ಆಗುವುದನ್ನು ವಿವರಿಸುತ್ತದೆ. ಇಂದು ದೈತ್ಯರೂಪದ ಕಂಪನಿಗಳ ನಡುವೆ ಸತತವಾಗಿ ಆಗುತ್ತಿರುವ ಬೃಹತ್ ಸಮ್ಮೇಳನಗಳೇ ಇದಕ್ಕೆ ಸಾಕ್ಷಿ.


ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಈ ಅನಿವಾರ್ಯತೆಯೇ ಇಷ್ಟು ಅಗಾಧ ಮೊತ್ತದ (1998 ರಲ್ಲಿ ವಿಶ್ವದ ಹಣಕಾಸು ಮಾರುಕಟ್ಟೆಯಲ್ಲಿ ಪ್ರತಿದಿನ 20 ನೂರು ದಶಲಕ್ಷ ಡಾಲರ್‌ನಷ್ಟು ಹಣ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಹಸ್ತಾಂತರವಾಗಿದೆ ಎಂದು ಅಂದಾಜು ಮಾಡಲಾಗಿದೆ) ಹಣಕಾಸು ಬಂಡವಾಳದ ಕ್ರೋಢೀಕರಣದ ಹೊರಹೊಮ್ಮುವಿಕೆಗೆ ಕಾರಣವಾಗಿದೆ. ಇದೇ ರೀತಿಯಲ್ಲಿ, ಅಂಥ ಬಂಡವಾಳದ ಕ್ರೋಢೀಕರಣವನ್ನು ಕೈಗಾರಿಕ ಬಂಡವಾಳ ಮತ್ತು ವಿಶ್ವ ವ್ಯಾಪಾರದಲ್ಲೂ ನಾವು ಕಾಣಬಹುದು. ವಿಶ್ವದ 3/4 ಕ್ಕಿಂತಲ ಹೆಚ್ಚಿನ ಉತ್ಪಾದನೆ ಮತ್ತು ವ್ಯಾಪಾರವನ್ನು ಇಂದು ಕೆಲವೇ ಬಹುರಾಷ್ಟ್ರೀಯ ಕಂಪನಿಗಳು ನಿಯಂತ್ರಿಸುತ್ತಿವೆ.

ಈ ಬಂಡವಾಳದ ಹಿತಾಸಕ್ತಿಗಾಗಿಯೇ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯು ವಿಶೇಷವಾಗಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅದಕ್ಕೆ ಸರಿಸಮನಾಗಿದ್ದ ಸಮಾಜವಾದಿ ಶಕ್ತಿಯ ಗೈರುಹಾಜರಿಯ ಪ್ರಯೋಜನವನ್ನು ಪಡೆದುಕೊಂಡು ಮೂರನೇ ಜಗತ್ತಿನ ದೇಶಗಳನ್ನು ತನ್ನ ಆರ್ಥಿಕ ಗುಲಾಮರನ್ನಾಗಿಸಿಕೊಳ್ಳಲು ಒಂದು ವಿಶ್ವವ್ಯವಸ್ಥೆಯನ್ನು ಹೇರುವ ಗುರಿ ಹೊಂದಿದೆ. ಅಭಿವೃದ್ಧಿಶೀಲ ಜಗತ್ತನ್ನು ಆರ್ಥಿಕವಾಗಿ ಪುನರ್‌ವಸಾಹತೀಕರಣ ಮಾಡಿಕೊಳ್ಳಲೋಸುಗ ಹೂಡಿರುವ ಸಂಚಿನ ಸಾಧನವಾಗಿ ಐಎಂಎಫ್, ವಿಶ್ವಬ್ಯಾಂಕ್ ಮತ್ತು ವಿಶ್ವವ್ಯಾಪಾರ ಸಂಘಟನೆಗಳನ್ನು ಬಳಸಿಕೊಳ್ಳುತ್ತಿದೆ.

ಮಾರ್ಕ್ಸ್‌ವಾದ ಸತ್ತುಹೋಗಿದೆ ಅಥವಾ ಅಪ್ರಸ್ತುತ ಎಂಬುದನ್ನೆಲ್ಲ ನಾವು ನಂಬಬೇಕೆಂದು ಸಾಮ್ರಾಜ್ಯಶಾಹಿ ಹೊಗಳುಭಟ್ಟರು ಬಯಸುತ್ತಾರೆ. ಆದರೆ ಅದಕ್ಕೆಲ್ಲಾ ಹೊರತಾಗಿ ಮಾರ್ಕ್ಸ್‌ವಾದವೊಂದೇ ಇಂದಿನ ಪ್ರಪಂಚದಲ್ಲಿ ಅರಿಯಲು ಸಾಧ್ಯವಾಗುವ ತಾತ್ವಿಕ ನಿಲುವನ್ನು, ನೆಲೆಗಟ್ಟನ್ನು ಒದಗಿಸುತ್ತಿದೆ ಎಂಬುದು ಅಪ್ಪಟ ಸತ್ಯ.

ಪುಟ 11 ಕ್ಕೆ

ವಿದ್ಯುತ್ ಬಳಕೆದಾರರಿಗೆ ಬರೆ




ವಿಶ್ವಬ್ಯಾಂಕ್, ಐ.ಎಂ.ಎಫ್. ಮತ್ತು ವಿಶ್ವವ್ಯಾಪಾರಿ ಸಂಘಟನೆ ಶರತ್ತುಗಳಿಗೆ ತಲೆಬಾಗಿರುವ ಬಿಜೆಪಿ ನಾಯಕತ್ವದ ಕೇದ್ರ ಸರ್ಕಾರ ಒಂದುಕಡೆ ತನ್ನ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿಯುವಂತೆ ಮಾಡುತ್ತಿದ್ದರೆ, ಮತ್ತೊಂದು ಕಡೆ ವಿದ್ಯುತ್, ರಸಗೊಬ್ಬರ ಇತ್ಯಾದಿ ಕೃಷಿ ಸಾಮಗ್ರಿಗಳಿಗೆ ನೀಡುವ ಸಬ್ಸಿಡಿ, ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಕಡಿತ ಮಾಡುತ್ತಾ, ಎಲ್ಲಾ ಕೃಷಿ ಸಾಮಗ್ರಿಗಳು ವಿಪರೀತ ದುಬಾರಿಯಾಗಿ ರೈತರು ಆತ್ಮಹತ್ಯೆಗಳಿಗೆ ಮೊರೆ ಹೋಗುವಂತ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ.

ಇದರ ಭಾಗವಾಗಿಯೇ ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಲು ನಿರ್ಧರಿಸಿ ಇದನ್ನು ಜಾರಿ ಮಾಡಲು ಕೇಂದ್ರೀಯ ವಿದ್ಯುತ್ ನಿಯಂತರ್ಣ ಆಯೋಗ (ಸಿ.ಇ.ಆರ್.ಸಿ.)ವನ್ನು ರಚಿಸಿದೆ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು, ವಿದ್ಯುತ್ ಕ್ಷೇತ್ರವನ್ನು ಆದಷ್ಟು ಬೇಗ ಖಾಸಗೀಕರಣಗೊಳಿಸಬೇಕೆಂಧು ಒತ್ತಡವನ್ನು ಹೇರುತ್ತಿದೆ.

13 ದಿನ ಅಧಿಕಾರ ನಡೆಸಿದ ಬಿಜೆಪಿ ಕೇಂದ್ರ ಸರ್ಕಾರ, ಅಧಿಕಾರ ಕಳೆದುಕೊಳ್ಳುವ ಕೆಲವು ನಿಮಿಷಗಳ ಮುಂಚಿತವಾಗಿ ಮಹಾರಾಷ್ಟ್ರದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಬಂದಿದ್ದ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿ ಎನ್ರೋನ್‌ಗೆ ಶೇ 16 ಲಾಭವನ್ನು ನೀಡುವ ಪ್ರತಿ ಖಾತರಿ ಒಪ್ಪಂದಕ್ಕೆ ಸಹಿ ಮಾಡುವುದರ ಮೂಲಕ ದೇಶದ ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಕರಾಳ ಅಧ್ಯಾಯವನ್ನು ಶುರು ಮಾಡಿತು. ದೇಶದ ಅಭಿವೃದ್ಧಿಗೆ ಅತ್ಯಂತ ಮಾರಕವಾದ ಈ ಒಪ್ಪಂದ ಈಗ ಸರ್ಕಾರದ ನೀತಿ ಎನ್ನುವಂತಾಗಿದೆ. ದೇಶದ ಸಾವಿರಾರು ಕೋಟಿಗಳನ್ನು ಲೂಟಿ ಮಾಡಲು ಖಾಸಗಿ ಕಂಪನಿಗಳಿಗೆ ಅಧಿಕಾರವನ್ನು ನೀಡಿದಂತೆ ಆಗಿದೆ.

ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳಿಂದ ದಿಕ್ಕೆಟ್ಟು ದಿವಾಳಿಯಾಗುತ್ತಿರುವ ಸ್ಥಿತಿಯಲ್ಲಿ ಕೃಷಿಕನಿಗೆ ಕನಿಷ್ಟ ಪರಿಹಾರಗಳನ್ನು ನೀಡುವ ಬದಲು ಎಸ್.ಎಂ.ಕೃಷ್ಣನ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಘಾರಕವಾಗುವಂತಹ ಅಂಶಗಳಿಂದ ಕೂಡಿರುವ ಸುಮಾರು 6500 ಕೋಟಿ ರೂ. ಸಾಲ ಪಡೆಯುವ ಒಪ್ಪಂದವನ್ನು ವಿಶ್ವಬ್ಯಾಂಕ್ ಅಧ್ಯಕ್ಷನ ಜೊತೆ ಮಾಡಲು ತುದಿಗಾಲಿನ ಮೇಲೆ ನಿಂತಿದೆ. ಮತ್ತು ವಿಶ್ವಬ್ಯಾಂಕ್ ಶರತ್ತುಗಳನ್ನು ಪೂರೈಸುವ ಮೊದಲ ಹಂತವಾಗಿ ಕರ್ನಾಟಕ ವಿದ್ಯುತ್ ಮಂಡಳಿ(ಕೆಇಬಿ)ಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕೆಪಿಟಿಸಿಎಲ್)ವಾಗಿ ಮಾರ್ಪಡಿಸಿ ವಿದ್ಯುತ್ ಉತ್ಪಾದನೆ, ಸರಬರಾಜು, ವಿತರಣೆ, ದರಗಳ ನಿಗದಿ ಇತ್ಯಾದಿ ಎಲ್ಲಾ ಅಂಶಗಳನ್ನು ತೀರ್ಮಾನ ಮಾಡುವ ಪರಮಾಧಿಕಾರ ಉಳ್ಳ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆ.ಇ.ಆರ್.ಸಿ.)ವನ್ನು ರಚಿಸಿ ಖಾಸಗೀಕರಣಗೊಳಿಸಲು ವೇದಿಕೆಯನ್ನು ಸಿದ್ಧ ಮಾಡಿದ್ದಾರೆ. ನವೆಂಬರ್ 7 ರ ಒಪ್ಪಂದವನ್ನು ತಡೆಯಲು ಸಾಧ್ಯವಾಗದಿದ್ದರೆ, ಆಂಧ್ರ ಪ್ರದೇಶದ ರೀತಿಯಲ್ಲಿ . ವಿಶ್ವಬ್ಯಾಂಕ್‌ನ ಶರತ್ತುಗಳಂತೆ ಉತ್ಪಾದನೆ, ಪ್ರಸರಣೆ ಮತ್ತು ಸರಬರಾಜನ್ನು ಪ್ರತ್ಯೇಕಗೊಳಿಸಿ, ಮೂರು ಹಂತಗಳಲ್ಲಿಯೂ ಖಾಸಗೀಯವರನ್ನು ಆಹ್ವಾನಿಸಲಾಗುವುದು. ಈ ಮೂರು ಹಂತಗಳಲ್ಲಿ ಬೇರೆ ಬೇರೆ ಕಂಪನಿಗಳು ಬಂದು, ಉತ್ಪಾದನೆಗೆ ಶೇ 16 ರಷ್ಟು ಲಾಭ, ಪ್ರಸರಣಕ್ಕೆ ಶೇ 16 ರಷ್ಟು ಲಾಭ ಮತ್ತು ಸರಬರಾಜಿಗೆ ಸುಮಾರು ಶೇ 16 ಮತ್ತು ಪ್ರಸರಣೆ ಮತ್ತು ಸರಬರಾಜು ನಷ್ಟದ ಹೆಸರಿನಲ್ಲಿ ಶೇ 25 ರಷ್ಟು ಲಾಭ ಪಡೆಯುವ ರೀತಿಯಲ್ಲಿ ಒಪ್ಪಂದಗಳು ಆಗಿ, ವಿದ್ಯುತ್ ಗ್ರಾಹಕನಿಗೆ ಸೇರುವ ಹಂತದಲ್ಲಿ ಒಂದು ಯೂನಿಟ್‌ಗೆ ಸುಮಾರು 8-10 ರೂ. ದರ ಬೀಳಲಿದೆ ಇಂತಹ ಒಪ್ಪಂದಗಳಿಗೆ ರಾಜ್ಯ ಸರ್ಕಾರ ಮುಂದಾಗಿದೆ. ಉದಾ: ಮಂಗಳೂರಿನ ತಣ್ಣೀರು ಬಾವಿ ವಿದ್ಯುತ್ ಉತ್ಪಾದನೆಯನ್ನು ವಿದೇಶಿ ಕಂಪನಿಗೆ ನೀಡಲಾಗಿದ್ದು, ಆ ಕಂಪನಿಯಿಂದ ಯುನಿಟ್ ವಿದ್ಯುತ್‌ನ್ನು 4.50 ರೂ. ಕೊಂಡುಕೊಳ್ಳಲು ಒಪ್ಪಂದವಾಗಿದೆ. ಇವರಿಗೆ ಶೇ 16 ಲಾಭದ ಖಾತರಿಯನ್ನು ನೀಡಲಾಗಿದೆ. 4.50 ರೂ. ಯುನಿಟ್ ವಿದ್ಯುತ್ ಪ್ರಸರಣಕ್ಕೆ 4.50 ರೂ ರಂತೆ ಪ್ರಸರಣೆ ಮಾಡುವ ಇನ್ನೊಂದು ಕಂಪನಿಗೆ ಲಾಭದ ಖಾತರಿ ಮತ್ತು ಸರಬರಾಜಿಗೆ ಶೇ 16 ರಷ್ಟು ಲಾಭ ಹಾಗೂ ಪ್ರಸರಣೆ, ಸರಬರಾಜು ನಷ್ಟ ಸುಮಾರು ಶೇ 25 ರಷ್ಟು ಸೇರಿದರೆ ಒಂದು ಯುನಿಟ್ ವಿದ್ಯುತ್ ಗ್ರಾಹಕನಿಗೆ ತಲುಪುವಾಗ 10.07 ರೂ. ಆಗುತ್ತದೆ. ರಾಜ್ಯ ಸರ್ಕಾರದ ಸಂಸ್ಥೆಯಾದ ಕರ್ನಾಟಕ ವಿದ್ಯುತ್ ನಿಗಮವು ಯಾವುದೇ ಶರತ್ತುಗಳಿಲ್ಲದೆ ತೀರ ಕಡಿಮೆ ದರದಲ್ಲಿ ವಿದ್ಯುತ್ ಉತಾದನೆ ಮಾಡಲು ಸಿದ್ಧವೆಂದು ಪದೇ ಪದೇ ಹೇಳುತ್ತಿದ್ದರೂ ಸರಕಾರ ಕೆ.ಪಿ.ಸಿ.ಗೆ ಉತ್ಪಾದನೆ ವಹಿಸಲು ಸಿದ್ಧವಿಲ್ಲ. ಉದಾ:ಆಲಮಟ್ಟಿಯಲ್ಲಿ ವಿದ್ಯುತ್ ಉತ್ಪಾದನೆ ಮಾಡಲು, ಕೆ.ಪಿ.ಸಿ.ಯ ಕೋರಿಕೆಯನ್ನು ತಳ್ಳಹಾಕಿ ಖಾಸಗಿ ಕಂಪನಿಯಾದ ಚಾಮುಂಡಿಗೆ 14070 ಕೋಟಿಗೆ ಪ್ರಾಥಮಿಕ ತಿಳುವಳಿಕೆಯ ಒಪ್ಪಂದವನ್ನು ಮಾಡಿದ್ದರು. 2 ಬಾರಿ ಇವರ ಒಪ್ಪಂದವನ್ನು ನವೀಕರಿಸಲಾಯ್ತು. ಆದರೂ ಕೆಲಸವನ್ನು ಕೈಗೆತ್ತಿಕೊಳ್ಳದಿರುವ ಸಂದರ್ಭದಲ್ಲಿ ಮತ್ತೆ ಅವರಿಗೆ 3ನೇ ಬಾರಿ ಒಪ್ಪಂದವನ್ನು ನವೀಕರಣ ಮಾಡಿದರೆ ಕಾನೂನಿನ ಸಮಸ್ಯೆಗಳು ಬರಬಹುದು ಮತ್ತು ಸಿಗಬೇಕಾದ ಕಮಿಷನ್‌ನಲ್ಲಿ ಏನೋ ವ್ಯತ್ಯಾಸವಾಗಿ, ನಿರಂತರವಾಗಿ ಈ ಯೋಜನೆಯನ್ನು ತನಗೆ ಕೇಳುತ್ತಿದ್ದ ಕೆಪಿಸಿಗೆ ಖಾಸಗಿ ಕಂಪನಿಗೆ ನೀಡಲಾಗಿದ್ದ ವೆಚ್ಚದ ಅರ್ಧದಷ್ಟು ಕಡಿಮೆ ವೆಚ್ಚದಲ್ಲಿ 14070 ಕೋಟಿಗೆ ಬದಲಿಗೆ ಕೇವಲ 7020 ಕೋಟಿಗೆ ಯೋಜನೆ ಪೂರೈಸುವ ಒಪ್ಪಂದವನ್ನು ಮಾಡಲಾಗಿದೆ. ಹೀಗೆ ಕೆಪಿಸಿ ದೇಶದಲ್ಲಿಯೇ ಅತಿ ಉತ್ತಮ ಸಂಸ್ಥೆಯಾಗಿದ್ದರೂ ಅದಕ್ಕೆ ನೀಡಬೇಕಾದ ಕನಿಷ್ಟ ಬೆಂಬಲ, ಸಹಕಾರವನ್ನು ಸರ್ಕಾರ ಕೊಡುತ್ತಿಲ್ಲ, ಬದಲಿಗೆ ಕೆಪಿಸಿಎಲ್ ಮತ್ತು ಕೆಪಿಟಿಸಿಎಲ್ ನ್ನು ನುಂಗಿ ನೀರು ಕುಡಿಯಲು ಬೇಕಾದ ಧೋರಣೆಯನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆ. ಮತ್ತು ಕೆಪಿಸಿ ಮತ್ತು ಕೆಪಿಟಿಸಿಎಲ್ ಅಸಮರ್ಥ, ಅಪ್ರಯೋಜಕ ಸಂಸ್ಥೆಗಳಿಂದ ಪ್ರಚಾರ ಮಾಡುತ್ತಾ, ಖಾಸಗೀಕರಣವೇ ಇದಕ್ಕೆ ಇರುವ ಪರಿಹಾರವೆಂದು ಜನರನ್ನು ನಂಬಿಸಲು ಹೊರಟಿದೆ. ವಾಸ್ತವವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಸಗಿ ಕಂಪನಿಗಳಿಗೆ ಈಗ ನೀಡುತ್ತಿರುವ ರಿಯಾಯಿತಿ ಮತ್ತು ಉತ್ತೇಜನವನ್ನು ಈ ಸಂಸ್ಥೆಗಳಿಗೆ ನೀಡಿದರೆ, ಈ ಸಂಸ್ಥೆಗಳು ತೀರ ಕಡಿಮೆ ದರದಲ್ಲಿ ವಿದ್ಯುತ್‌ನ್ನು ಒದಗಿಸಲು ಸಿದ್ದ ಇವೆ. ಸರ್ಕಾರಗಳು ಇಂತಹ ಬೆಂಬಲವನ್ನು ನೀಡುತ್ತಿಲ್ಲ ಮಾತ್ರವಲ್ಲ ರಾಜ್ಯದಲ್ಲಿ ಕೆಪಿಟಿಸಿಎಲ್‌ಗೆ ನೀಡಬೇಕಾದ ಬಾಕಿಯನ್ನು ರಾಜ್ಯ ಸರ್ಕಾರ ಪಾವತಿ ಮಾಡಿಲ್ಲ. ರೈತರ ಬಾಕಿ ಬಗ್ಗೆ ಬೊಬ್ಬೆ ಹೊಡೆಯುವ ರಾಜ್ಯ ಸರ್ಕಾರವೇ ಕೆಪಿಟಿಸಿಎಲ್ ಗೆ ಅತಿ ದೊಡ್ಡ ಬಾಕಿದಾರ ಸುಮಾರು 1300 ಕೋಟಿ ರೂ. ವಿದ್ಯುತ್ ಬಾಕಿಯನ್ನು ಕೆಪಿಟಿಸಿಎಲ್ ಗೆ ಪಾವತಿ ಮಾಡದೇ ಹತ್ತಾರು ವರ್ಷಗಳಿಂದ ಸತಾಯಿಸುತ್ತಿದೆ. ಇದರ ಜೊತೆಗೆ ಗ್ರಾಮೀಣ ವಿದ್ಯುತೀಕರಣಕ್ಕಾಗಿ ಕೆಪಿಟಿಸಿಎಲ್ ಗೆ ರಾಜ್ಯ ಸರ್ಕಾರ ನೀಡಬೇಕಾದ ಸಬ್ಸಿಡಿ ಸುಮಾರು 2,100 ಕೋಟಿ ರೂ. ಹೀಗೆ ಸುಮಾರು 3500 ಕೋಟಿ ಬಾಕಿ ಉಳಿಸಿಕೊಂಡಿರುವ ಸರ್ಕಾರ, ಬಡವರು, ರೈತರು ನೀಡಬೇಕಾದ ಬಾಕಿಯನ್ನು ಪಾವತಿ ಮಾಡದಿದ್ದರೆ ಜೈಲಿಗೆ ಕಳುಹಿಸುವ ಬಗ್ಗೆ ಮಾತನಾಡುತ್ತಿರುವುದು ತೀರ ವಿಚಿತ್ರವಾಗಿದೆ.



ಇಂತಹ ಅಸಮರ್ಥ ಸರ್ಕಾರ ಜನರ ಶ್ರಮದಿಂದ ನಿರ್ಮಾಣ ಮಾಡಿರುವ ವಿದ್ಯುತ್ ಕ್ಷೇತ್ರವನ್ನು ಲಾಭಕೋರ ಖಾಸಗಿ ಕಂಪನಿಗಳಿಗೆ ವಹಿಸುವ ತೀರ್ಮಾನಗಳನ್ನು ಮಾಡುತ್ತಿದೆ. ಜೊತೆಗೆ ವಿದ್ಯುತ್ ಉತ್ಪಾದನೆ ಸರಬರಾಜು, ಪ್ರಸರಣಾ ವೆಚ್ಚ ಹೆಚ್ಚಾಗುತ್ತಿದೆಯೆಂದು ವಿದ್ಯುತ್ ದರಗಳ ಏರಿಕೆಗೆ ಮುಂದಾಗುತ್ತಿದೆ. ವಾಸ್ತವವಾಗಿ ರಾಜ್ಯದ ಶರವಾತಿ ಮತ್ತು ನಾಗಝರಿಯ ಜಲವಿದ್ಯುತ್ ಯೋಜನೆಗಳಿಂದ ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ 45 ರಷ್ಟು ತೀರ ಕಡಿಮೆ ವೆಚ್ಚದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಶರಾವತಿಯ ಉತ್ಪಾದನಾ ವೆಚ್ಚ ಯುನಿಟ್‌ಗೆ 12.5 ಪೈಸೆಯಾದರೆ ನಾಗಝರಿಯ ವೆಚ್ಚ 56 ಪೈಸೆ ಅಂದರೆ ಸರಾಸರಿ ವೆಚ್ಚ 35 ಪೈಸೆಗೆ ರಾಜ್ಯದ ಅರ್ಧದಷ್ಟು ಉತ್ಪಾದನೆ ನಡೆಯುತ್ತಿದೆ. ಇದು ಜನರ ಶ್ರಮದಿಂದ ಪ್ರಕೃತಿಯ ಸಹಾಯದೊಂದಿಗೆ ನಡೆಯುತ್ತಿರುವ ಉತ್ಪಾದನೆ, ಇಂದುರಾಜ್ಯದ ಪಂಪ್‌ಸೆಟ್ ಬಳಕೆದಾರರು, ಗೃಹಬಳಕೆದಾರರು ಬಳಸುವ ವಿದ್ಯುತ್ ಈ 2 ಯೋಜನೆಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ ನಷ್ಟೇ. ಅವರಿಂದ ಕೃಷಿ ಮತ್ತು ಗೃಹ ಬಳಕೆದಾರರಿಗೆ ಯಾವುದೇ ದರಗಳನ್ನು ಹೆಚ್ಚಿಸದೇ ವಿದ್ಯುತ್‌ನ್ನು ರಿಯಾಯಿತಿ ದರಗಳಲ್ಲಿ ನೀಡಬಹುದಾಗಿದೆ. ಆದರೆ ಸರ್ಕಾರ, ವಿಶ್ವ ಬ್ಯಾಂಕನ್ನು ತೃಪ್ತಿಪಡಿಸಲು ವಿದ್ಯುತ್ ದರ ಏರಿಕೆ, ಸುಮಾರು 18-20 ವರ್ಷಗಳ ಬಾಕಿಯೆಂದು ಯಾವುದೇ ವಿವರವಿಲ್ಲದ ಒಟ್ಟು ಮೊತ್ತದ 20-25,000 ರೂ. ವಸೂಲಿ, ವಿದ್ಯುತ್ ಸಂಪರ್ಕಕ್ಕಾಗಿ ದುಬಾರಿ ಶುಲ್ಕ ಸಂಗ್ರಹ, ಭಾಗ್ಯಜ್ಯೋತಿಯಂತಹ ಸೌಲಭ್ಯ ಹೊಂದಿದ ಬಡವರಿಗೆ ದರ ಏರಿಕೆ, ಇತ್ಯಾದಿ ಕ್ರಮಗಳಿಗೆ ಮುಂದಾಗುತ್ತಿದೆ.

ಸರ್ಕಾರದ ಈ ಜನವಿರೋಧಿ ಕ್ರಮಗಳನ್ನು ವಿರೋಧಿಸಿ ವಿಶಾಲವಾದ ಹೋರಾಟಗಳನ್ನು ರೂಪಿಸಲು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ತೀರ್ಮಾನಿಸಿದೆ. ಪಕ್ಷಾತೀತವಾಗಿ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಸಮಾವೇಶಗಳನ್ನು ಸಂಘಟಿಸಿ, ಹೋರಾಟ ಸಮಿತಿಗಳನ್ನು ರಚಿಸಿ, ಪ್ರಥಮ ಹಂತವಾಗಿ ನವೆಂಬರ್-7,2000 ದಿಂದ ಬೆಂಗಳೂರಿನ ಕಾವೇರಿ ಭವನದ ಎದುರು ಅನಿರ್ದಿಷ್ಟ ಧರಣಿಯನ್ನು ನಡೆಸಲು ತೀರ್ಮಾನಿಸಿದೆ.

ರಾಜ್ಯ ಸರ್ಕಾರ, ಈ ಬೇಡಿಕೆಗಳ ಬಗ್ಗೆ ಚರ್ಚಿಸಿ ಸಮಸ್ಯೆ ಇತ್ಯರ್ಥ ಮಾಡದಿದ್ದರೆ ಹೋರಾಟವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರಗೊಳಿಸಲು ಉದ್ದೇಶಿಸಲಾಗಿದೆ.

ಕೃಷಿ ಮತ್ತು ಭಾಗ್ಯಜ್ಯೋತಿ ಬಳಕೆದಾರರಿಂದ ಆರಂಭವಾಗಿರುವ ಈ ಹೋರಾಟವನ್ನು ಇನ್ನಷ್ಟು ವಿಶಾಲಗೊಳಿಸಿ, ಕೈಗಾರಿಕೆ ಇತ್ಯಾದಿ ಎಲ್ಲಾ ಕ್ಷೇತ್ರದ ಗ್ರಾಹಕರು, ಕೆ.ಪಿ.ಟಿ.ಸಿ.ಎಲ್. ಮತ್ತು ಕೆ.ಪಿ.ಸಿ.ಯ ಅಧಿಕಾರಿಗಳು ಹಾಗು ನೌಕರರು ವರ್ಗ ಮತ್ತು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಆಂಧ್ರಪ್ರದೇಶದ ಮಾದರಿಯಲ್ಲಿ ನಿರಂತರ ಸಮರಶೀಲವಾದ ಹೋರಾಟಗಳನ್ನು ಕಟ್ಟಬೇಕಿದೆ. ಈ ಚಳುವಳಿಯನ್ನು ರಾಜ್ಯಮಟ್ಟದಲ್ಲಿ ಸಮನ್ವಯಗೊಳಿಸುವ ಅವಶ್ಯಕತೆಯಿದೆ.

- ಜಿ.ಸಿ.ಬಯ್ಯಾರೆಡ್ಡಿ

ವಿಶ್ವ ಬ್ಯಾಂಕ್ ಅಧ್ಯಕ್ಷನ ಭೇಟಿಯನ್ನು ವಿರೋಧಿಸಿ ಮತ್ತು ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನವೆಂಬರ್ 7 ರಿಂದ 13 ರವರೆಗೆ ಕೆ.ಪಿ.ಟಿ.ಸಿ.ಎಲ್ ಕಛೇರಿ, ಕಾವೇರಿ ಭವನದ ಎದುರು ರಾಜ್ಯಮಟ್ಟದ ರೈತ ಕೂಲಿಕಾರರ ಅನಿರ್ದಿಷ್ಟ ಸಾಮೂಹಿಕ ಧರಣಿ ನಡೆಯಲಿದೆ. ನ. 7 ರಂದು ಬೆಂಗಳೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಂದ ಆಗಮಿಸುವ ಸಾವಿರಾರು ರೈತ-ಕೂಲಿಕಾರರು ನಗರದಲ್ಲಿ ಮೆರವಣಿಗೆ ನಡೆಸಿ ಧರಣಿಯನ್ನು ಆರಂಭಿಸುವರು. ಆ ನಂತರ ದಿನಾಂಕ 8-ಬಳ್ಳಾರಿ, ಚಿತ್ರದುರ್ಗ; 9-ಬಿಜಾಪುರ, ಬೆಳಗಾಂ, ಹಾವೇರಿ; 10-ದಕ್ಷಿಣ ಕನ್ನಡ, ರಾಯಚೂರು, ಕೊಪ್ಪಳ ಜಿಲ್ಲೆ ಹೀಗೆ ಪ್ರತಿದಿನ ಒಂದೆರಡು ಜಿಲ್ಲೆಗಳಿಂದ ಆಗಮಿಸುವ ರೈತ ಕೂಲಿಕಾರರು ತಮ್ಮ ಬೇಡಿಕೆಗಳನ್ನು ಇತ್ಯರ್ಥ ಮಾಡುವ ತನಕ ಧರಣಿಯನ್ನು ಮುಂದುವರಿಸುವರು.

ಮುಖ್ಯಮಂತ್ರಿ ಸ್ಥಾನ: ಜ್ಯೋತಿಬಸು ಬಿಡುಗಡೆ

ಜ್ಯೋತಿಬಸುರವರಿಗೆ ಅವರ ಆರೋಗ್ಯದ ಪ್ರಸಕ್ತ ಸ್ಥಿತಿಯಲ್ಲಿ ಸರಕಾರಿ ಕೆಲಸದ ಹೊರೆಯನ್ನು ಇನ್ನು ಮುಂದೆಯೂ ಹೊರಲು ಸಾಧ್ಯವಿಲ್ಲವಾದ್ದರಿಂದ ಅವರನ್ನು ಮುಖ್ಯಮಂತ್ರಿಯ ಜವಾಬ್ದಾರಿಯಿಂದ ಮುಕ್ತಗೊಳಿಸಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಒಪ್ಪಿದೆ. **ಜ್ಯೋತಿಬಸುರವರಿಗೆ 87 ವರ್ಷ. ಇನ್ನು ಮುಂದೆ ಅವರ ಶಕ್ತಿ-ಸಾಮರ್ಥ್ಯಗಳನ್ನು ಪಶ್ಚಿಮ ಬಂಗಾಳದಲ್ಲಿಯೂ, ಅಖಿಲ ಭಾರತ ಮಟ್ಟದಲ್ಲೂ ಪಕ್ಷ ಬಳಸಿಕೊಳ್ಳುತ್ತದೆ.** ತಕ್ಷಣದ ಒಂದು ಕಾರ್ಯಭಾರ ಎಂದರೆ ಕೇವಲ ಆರು ತಿಂಗಳೊಳಗೇ ವಿಧಾನಸಭಾ ಚುನಾವಣೆಗಳಲ್ಲಿ ನಡೆಯಲಿರುವ ರಾಜಕೀಯ ಸಮರ.

ಪಶ್ಚಿಮ ಬಂಗಾಳದಲ್ಲಿ ಬದಲಾವಣೆ ಸರಾಗವಾಗಿ ನಡೆದದ್ದು, ಉಪಮುಖ್ಯಮಂತ್ರಿಯಾಗಿದ್ದ ಬುದ್ಧದೇಬ್ ಭಟ್ಟಾಚಾರ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡದ್ದು ಕಮ್ಯುನಿಸ್ಟ್ ವಿರೋಧಿ ವಲಯಗಳಲ್ಲಿ ತೀವ್ರ ನಿರಾಸೆ ತಂದಿದೆ. ಕಳೆದ ಕೆಲವು ತಿಂಗಳಲ್ಲಿ ಬಂಗಾಳಿ ಭಾಷೆಯ ಬಾಡಿಗೆ ಪತ್ರಿಕೆಗಳು 'ಉತ್ತರಾಧಿಕಾರಕ್ಕೆ ಹೋರಾಟ', 'ವಿಪರೀತ ಸ್ಪರ್ಧೆ' ಇತ್ಯಾದಿ ಕಥೆಗಳಿಂದಲೇ ತುಂಬಿಹೋಗುತ್ತಿದ್ದವು. ನಿಜ ಸಂಗತಿಯೆಂದರೆ ಕಳೆದ ವರ್ಷ ಜ್ಯೋತಿ ಬಸುರವರ ಆರೋಗ್ಯವನ್ನು ಗಮನಿಸಿ ಪಕ್ಷ ಅವರು ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ ಎಂದು ನಿರ್ಧರಿಸಿತು. ಬುದ್ಧದೇವ್ ಭಟ್ಟಾಚಾರ್ಯರನ್ನು ಮುಖ್ಯಮಂತ್ರಿಯಾಗಿ ಮಾಡಿ, ಅಂತಿಮವಾಗಿ ಅವರೇ ಮುಖ್ಯಮಂತ್ರಿ ಸ್ಥಾನ ವಹಿಸುತ್ತಾರೆ ಎಂದು ನಿರ್ಧರಿಸಲಾಯಿತು.

ಅತ್ತ ದೊಡ್ಡ ಬಂಡವಾಳಿಗರ ಮಾಧ್ಯಮದಲ್ಲಿ ಮುಖ್ಯಮಂತ್ರಿ ಪದವಿಯಿಂದ ಜ್ಯೋತಿಬಸುರವರ ನಿವೃತ್ತಿಯನ್ನು ತುಚ್ಛೀಕರಿಸುವ ಪ್ರಯತ್ನ ನಡೆಯಿತು. ರಾಜ್ಯ ಸರಕಾರದ ಮುಖ್ಯಸ್ಥನಾಗಿ 23 ವರ್ಷಗಳ ಕಾಲದ ಅವರ ಕಾರ್ಯನಿರ್ವಹಣೆಯ ಒಂದು ಗಂಭೀರ ವಿಮರ್ಶೆಯನ್ನು ಮಾಡಲು ಕೂಡಾ ಅದು ಸಿದ್ಧವಾಗಿಲ್ಲ. ಜ್ಯೋತಿ ಬಸು ನೇತೃತ್ವದಲ್ಲಿ ಎಡರಂಗದ ಆಳ್ವಿಕೆಯ ಟೀಕೆ ಅದರ ಸಹಜ ಕೆಲಸವಾಗಬೇಕಿತ್ತು. ಆದರೆ ಇದರಲ್ಲಿಯೂ ಒಂದು ವಿಶ್ವಾಸಾರ್ಹ ಟೀಕೆ ನಡೆಸುವುದು ಕೂಡಾ ಬಂಡವಾಳಶಾಹಿ ಮಾಧ್ಯಮಕ್ಕೆ ಆಗಿಲ್ಲ. ಜ್ಯೋತಿಬಸುರವರ ಬಗ್ಗೆ ಬರೆಯಬೇಕೆಂದಿದ್ದರೆ ವ್ಯಕ್ತಿಯನ್ನು ಆಂದೋಲನ ಮತ್ತು ಸಿದ್ಧಾಂತದಿಂದ ಬೇರ್ಪಡಿಸಿ ಅಸಂಬದ್ಧ ಹಾಗೂ ಕ್ಷಣಿಕ ವಿವರಗಳ ಮೇಲೆಯೇ ಗಮನ ಕೇಂದ್ರೀಕರಿಸುವುದೇ ಅವರಿಗೆ ಉಚಿತೆನಿಸುತ್ತದೆ. **ದೊಡ್ಡ ವ್ಯಾಪಾರಸ್ಥರ ಒಡೆತನದ ಮಾಧ್ಯಮ ಎಷ್ಟು ನಿಕೃಷ್ಟ ರೀತಿಯಲ್ಲಿ ವ್ಯಾಪಾರೀಕರಣಗೊಂಡಿದೆ, ಕ್ಷುಲ್ಲಕಗೊಂಡಿದೆ ಎಂಬುದಕ್ಕೆ ಇದಕ್ಕಿಂತ ನೇರ ಟಿಪ್ಪಣಿ ಬೇರೆ ಬೇಕಿಲ್ಲ.**

ಜ್ಯೋತಿಬಸು ನೇತೃತ್ವದ 23 ವರ್ಷಗಳ ದಾಖಲೆ ಬಗ್ಗೆ ಮಾಡಿರುವ ಟೀಕೆಯಲ್ಲಿ ಗಮನಾರ್ಹವಾದುದೆಂದರೆ ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶದಲ್ಲಿ ಕಂಡಿರುವ ಹಾಗೂ ಎಲ್ಲರೂ ಒಪ್ಪಿಕೊಂಡಿರುವ ಸತ್ಯಾಂಶಗಳನ್ನು ಕೂಡಾ ತುಚ್ಛೀಕರಿಸಿರುವುದು.

ಟೈಮ್ಸ್ ಆಫ್ ಇಂಡಿಯಾ ಸಂಪಾದಕೀಯ ಪ್ರಕಾರ "ಮಾರ್ಕ್ಸ್‌ವಾದಿಗಳು ನಡೆಸಿದ ಭೂಸುಧಾರಣೆಗಳ ಡಂಗುರ ಏನೇ ಇದ್ದರೂ ರಾಜ್ಯದ ಬಡತನ ಸೂಚ್ಯಂಕ ಶೇ. 51, ರಾಷ್ಟ್ರೀಯ ಸರಾಸರಿ ಸೂಚ್ಯಂಕ ಶೇ30"

ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕೀಯ ಹೇಳುತ್ತದೆ 'ಬಡತನರೇಖೆಯ ಕೆಳಗೆ ಇರುವ ಜನಸಂಖ್ಯೆ ಪ್ರಮಾಣದಲ್ಲಿ ಇಂದು ಪಶ್ಚಿಮಬಂಗಾಳದ ನಂತರ ಕೇವಲ ಒರಿಸ್ಸಾ ಮಾತ್ರವೇ ಇದೆ"

ಇಲ್ಲಿ ಗಮನಿಸಬೇಕಾದ ಮುಖ್ಯಅಂಶವೆಂದರೆ ಈ ಅಂಕೆ-ಸಂಖ್ಯೆಗಳನ್ನು ಉದ್ಧರಿಸಿ ಜ್ಯೋತಿಬಸುರವರ ಆಡಳಿತದಲ್ಲಿ ಎಡರಂಗ ಸರಕಾರ

ಅಪ್ರತಿಮ ದಾಖಲೆಗಳ ಎಡ ಸರ್ಕಾರ



ಜ್ಯೋತಿಬಸು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿದಿದ್ದಾರೆ. ಅತ್ಯಂತ ಫಲಪ್ರದ ಹಾಗೂ ಚಾರಿತ್ರಿಕವಾದ 23 ವರ್ಷಗಳ ಸುದೀರ್ಘ ಅವಧಿಯ ನಂತರ ಅವರು ಅಧಿಕಾರ ತ್ಯಜಿಸಿದ್ದಾರೆ. ಬೇರೆ ಯಾವ ಮುಖ್ಯಮಂತ್ರಿಯೂ ಇಷ್ಟೊಂದು ದೀರ್ಘಕಾಲ ನಿರಂತರವಾಗಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಿಲ್ಲ. ಅವರ ನೇತೃತ್ವದಲ್ಲಿ ಎಡರಂಗ ಮತ್ತು ಸಿಪಿಐ(ಎಂ) 1977 ರಿಂದ ಸತತವಾಗಿ ಐದು ಚುನಾವಣೆಗಳನ್ನು ಗೆದ್ದಿವೆ, ಪ್ರತಿ ಬಾರಿಯೂ ವಿಧಾನಸಭೆಯಲ್ಲಿ ಅಭೂತಪೂರ್ವ ಮೂರನೇ ಎರಡು ಬಹುಮತದಿಂದ ಆರಿಸಿಬಂದಿದೆ. ಇಲ್ಲಿ ಗಮನಾರ್ಹವಾದದ್ದು ಸರಕಾರದ ದೀರ್ಘಾವಧಿ ಮಾತ್ರವೇ ಅಲ್ಲ, ಎಡರಂಗ ಸರಕಾರ ಕೈಗೊಂಡ ಪ್ರಮುಖ ಕ್ರಮಗಳೂ ಅಷ್ಟೇ ಗಮನಾರ್ಹ. ಇದು ಒಂದು ವಿಶಿಷ್ಟ ಸಾಧನೆ.

ಗ್ರಾಮೀಣ ಪ್ರದೇಶಗಳಿಗೆ ಹೇಳಿಕೊಳ್ಳುವಂತಹದ್ದೇನನ್ನೂ ಮಾಡಿಲ್ಲ ಎಂದು ತೋರಿಸಿಕೊಡುವುದು. **ವಾಸ್ತವವಾಗಿ ಇಂತಹ ಸಂಪಾದಕೀಯಗಳು ಭೂಸುಧಾರಣೆ ಮತ್ತು ಭೂಮಾಲಕರ ಹಿತಾಸಕ್ತಿಗಳಿಗೆ ಬೆದರಿಕೆಯೊಡ್ಡುವ ಇತರ ಯಾವುದೇ ಕ್ರಮ ಬಗ್ಗೆ ಎಂತಹ ಬದ್ಧದ್ವೇಷ ಹೊಂದಿವೆ ಎಂಬುದನ್ನು ಎತ್ತಿ ತೋರುತ್ತವೆ.**

ಪಶ್ಚಿಮ ಬಂಗಾಳದ ಕರ್ಷಕ ಪರಿಸ್ಥಿತಿ ಬಗ್ಗೆ ಕೆಲವು ವಿವಾದಾತೀತ ತಥ್ಯಗಳು ಹೀಗಿವೆ:

. ಪೂರ್ವಭಾರತದಲ್ಲಿ ಕೃಷಿ ಉತ್ಪಾದನೆಯಲ್ಲಿ ಎಪ್ಪತ್ತರ ದಶಕಗಳ ಸ್ಥಗಿತತೆಯ ನಂತರ ಎಂಭತ್ತರ ದಶಕದಲ್ಲಿ ಒಂದು ಗಮನಾರ್ಹ ಬದಲಾವಣೆ ಸಂಭವಿಸಿತು. 1981 ರಿಂದ 1991 ರ ನಡುವೆ ಪೂರ್ವದ ರಾಜ್ಯಗಳಲ್ಲಿ ಕೃಷಿ ಉತ್ಪಾದನೆ ದರ ಹೆಚ್ಚಿತು. ಇದು ಅತಿ ಹೆಚ್ಚು ಬೆಳೆದದ್ದು ಪಶ್ಚಿಮ ಬಂಗಾಳದಲ್ಲಿ ಕೃಷಿಯಲ್ಲಿ ನಿವ್ವಳ ಮೌಲ್ಯ ಸೇರ್ಪಡೆ ದರ 1970 ರ ದಶಕದಲ್ಲಿ ಶೇ 7.32 ಇದ್ದದ್ದು 1980 ರ ದಶಕದಲ್ಲಿ ಶೇ 6.85 ಆಯಿತು..

. ಭಾರತೀಯ ಆರ್ಥಿಕ ವೀಕ್ಷಣಾ ಕೇಂದ್ರದ ಒಂದು ಅಂದಾಜಿನ ಪ್ರಕಾರ 1980-81 ಹಾಗೂ 1992-93 ರ ನಡುವೆ ಆಹಾರಧಾನ್ಯ ಉತ್ಪಾದನೆಯ ಹೆಚ್ಚಳದಲ್ಲಿ 17 ಅತಿ ಹೆಚ್ಚು ಜನಸಂಖ್ಯೆಯ ರಾಜ್ಯಗಳಲ್ಲಿ ಅತಿ ಹೆಚ್ಚು ದರ ಸಾಧಿಸಿದ್ದು ಪಶ್ಚಿಮ ಬಂಗಾಳ.

. ಪಶ್ಚಿಮ ಬಂಗಾಳದ ಪ್ರಮುಖ ಬೆಳೆಯಾದ ಭತ್ತದ ಉತ್ಪಾದನೆ 1980 ರ ದಶಕದಲ್ಲಿ ಶೇ 6.4 ವಾರ್ಷಿಕ ಕರದಲ್ಲಿ ಬೆಳೆಯಿತು. 1980 ರಿಂದ 1995 ರ ಅವಧಿಯಲ್ಲಿ ಶೇ 5 ದರದಲ್ಲಿ ಬೆಳೆಯಿತು. 1980 ರಿಂದ 80 ನಡುವೆ ಇದು ಕೇವಲ ಶೇ 2.2 ದರದಲ್ಲಿ ಬೆಳೆದಿತ್ತು. ಭತ್ತದ ವಿಷಯದಲ್ಲೂ ಬೆಳವಣಿಗೆ ದರ ಹೆಚ್ಚಳಕ್ಕೆ ಬಹುಪಾಲು ಉತ್ಪಾದಕತೆಯಲ್ಲಿ ಆಗಿರುವ ಹೆಚ್ಚಳವೇ ಕಾರಣ ಎಂದು ಗಮನಿಸಲಾಗಿದೆ.

. ಪಶ್ಚಿಮ ಬಂಗಾಳದ ಅನುಭವದ ಒಂದು ಕುತೂಹಲಕಾರಿ ಮತ್ತು ಗಮನಾರ್ಹ ಸಂಗತಿಯೆಂದರೆ ಕೃಷಿ ಸಂಸ್ಥೆಗಳಲ್ಲಿ ಮತ್ತು ಸಂಬಂಧಗಳಲ್ಲಿ ಪ್ರಮುಖ ಬದಲಾವಣೆಗಳಾಗುತ್ತಿದ್ದಾಗ ಹಾಗೂ ನಂತರ ಕಂಡುಬಂದ ಹೆಚ್ಚಳ. 1970 ರ ದಶಕದಲ್ಲಿ ಗ್ರಾಮೀಣ ಪಶ್ಚಿಮ ಬಂಗಾಳದಲ್ಲಿ ನಡೆದ ಎರಡು ಮಹತ್ವದ ಸಾಮಾಜಿಕ-ರಾಜಕೀಯ ಬದಲಾವಣೆಗಳೆಂದರೆ ಭೂಸುಧಾರಣೆಗಳ ಜಾರಿ ಮತ್ತು ಗ್ರಾಮ, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಆಡಳಿತದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಪುನರ್ರಚನೆ ಮತ್ತು ಪುನರುಜ್ಜೀವನ. ಪಶ್ಚಿಮಬಂಗಾಳದಲ್ಲಿ ಎಡರಂಗ ಸರಕಾರದಡಿ ನಡೆದ ಭೂಸುಧಾರಣೆಗಳ ಎರಡು ಪ್ರಮುಖ ಅಂಶಗಳೆಂದರೆ ಗೇಣಿದಾರಿಕೆ ಸುಧಾರಣೆ (ಆಪರೇಷನ್ ಬರ್ಗಾ) ಮತ್ತು ಭೂಮಿಯ ಮರುಹಂಚಿಕೆ ಭಾರತದಲ್ಲಿ ಹಂಚಿಕೆಯಾದ ಒಟ್ಟು ಮಿಗುತೆ ಭೂಮಿಯಲ್ಲಿ ಶೇ 20 ಕೇವಲ ಪಶ್ಚಿಮ ಬಂಗಾಳವೊಂದರಲ್ಲೇ ಆಗಿದೆ. ಗ್ರಾಮೀಣ ಪಶ್ಚಿಮ ಬಂಗಾಳದ ಎರಡನೇ ಪ್ರಮುಖ ಬದಲಾವಣೆಯೆಂದರೆ 1977 ರಲ್ಲಿ ಸ್ಥಳೀಯ ಆಡಳಿತದ ಪುನರ್ರಚನೆ. 1978 ರಿಂದ ಪ್ರತಿ ಐದು ವರ್ಷಕ್ಕೊಮ್ಮೆ ಪಂಚಾಯತಿ ಸಂಸ್ಥೆಗಳಿಗೆ ಚುನಾವಣೆಗಳು ನಡೆದಿವೆ. ಈ ಹಿಂದೆ ಜಿಲ್ಲಾ ಮಟ್ಟದ ಅಧಿಕಾರಶಾಹಿಗಳಿಗಿದ್ದ ಜವಾಬುದಾರಿಗಳನ್ನು 1978 ರಿಂದ ಪಂಚಾಯತುಗಳು ವಹಿಸಿಕೊಂಡಿವೆ. ಜಿಲ್ಲೆಗಳಿಗೆ ಹಂಚುವ ಹಣದ ಬಾಬ್ತು ಒಟ್ಟು ರಾಜ್ಯ ಯೋಜನಾ ಬಾಬ್ತಿನ ಶೇ 50 ಆಗಿದೆ.

. ದೊಡ್ಡ ಬಂಡವಾಳಶಾಹಿಗಳ ಸಂಬಳ ತಿನ್ನುವ ಸಂಪಾದಕರು ಏನೇ ಹೇಳಿದರೂ ವಾಸ್ತವವಾಗಿ ಪಶ್ಚಿಮ ಬಂಗಾಳದಲ್ಲಿ ಬಡತನ ಪ್ರಮಾಣ ಗಮನಾರ್ಹವಾಗಿ ಇಳಿದಿದೆ. 1977-78 ರಲ್ಲಿ ಬಡತನದ ರೇಖೆಯ ಕೆಳಗಿನ ಜನಸಂಖ್ಯೆಯ ಪ್ರಮಾಣ ಶೇ 56.25 ಇತ್ತು. 1997 ರಲ್ಲಿ ಇದು ಶೇ 26.93. ಅಖಿಲ ಭಾರತ ಮಟ್ಟದಲ್ಲಿ ಈ ಶೇಕಡಾವಾರು 35.78.

. ರಾಷ್ಟ್ರೀಯ ಮಾದರಿ ಸರ್ವೆ(ಎನ್.ಎಸ್.ಎಸ್) ಯ ಆಹಾರ ಮತ್ತು ಪೋಷಕಾಂಶ ಬಳಕೆ ಕುರಿತ ಅಂಕಿ-ಅಂಶಗಳ ಪ್ರಕಾರ ಕಳೆದ ಎರಡು ದಶಕಗಳಲ್ಲಿ ಭಾರತದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸರಾಸರಿ ಕ್ಯಾಲರಿ ಬಳಕೆ ಪ್ರಮಾಣ ನಿರಂತರವಾಗಿ ಇಳಿಯುತ್ತಿದೆ. 1973 ರಿಂದ 1993 ರ ನಡುವಿನ ಈ ಒಟ್ಟಾರೆ ಪ್ರವೃತ್ತಿಗೆ ಒಂದು ಅಪವಾದವೆಂದರೆ ಪಶ್ಚಿಮ ಬಂಗಾಲ(ಇನ್ನೊಂದು ಕೇರಳ). ಈ ಎರಡು ರಾಜ್ಯಗಳಲ್ಲಿ ಕ್ಯಾಲರಿ ಬಳಕೆ ಅಂದರೆ ಪೋಷಕ ಆಹಾರ ಬಳಕೆ ಸತತವಾಗಿ ಏರಿಕೆ ಕಂಡಿದೆ.

ಇದೀಗ ಜ್ಯೋತಿಬಸು ನೇತೃತ್ವದ ಎಡರಂಗ ಸರಕಾರದ ಅಸಾಧಾರಣ ಸಾಧನೆ

ಧರ್ಮನಿರಪೇಕ್ಷ ನೀತಿಯನ್ನು ರಕ್ಷಿಸುವಲ್ಲಿಯಂತೂ ಎಡರಂಗ ಸರಕಾರದ ದಾಖಲೆಗೆ ಸರಿಸಾಟಿಯಾದಂತ್ತದ್ದು ಸ್ವಾತಂತ್ರ ಭಾರತದಲ್ಲಿ ಬೇರಾವುದೂ ಇಲ್ಲ. ಶ್ರೀಮತಿ ಇಂದಿರಾಗಾಂಧಿಯ ಹತ್ಯೆಯ ನಂತರ ದಿಲ್ಲಿ ಮತ್ತು ಉತ್ತರ ಭಾರತವನ್ನು ಆವರಿಸಿದ ಸಿಖ್ -ವಿರೋಧಿ ದುಷ್ಟಕಾಂಡಗಳ ವೇಳೆ ಕಲ್ಕತ್ತೆಗೆ ಅದು ಹರಡದೇ ಇದ್ದದ್ದು ಮಾತ್ರವಲ್ಲ, ತಲೆ ಎತ್ತಲು ಕೂಡ ಸಾಧ್ಯವಾಗದ್ದು ಜ್ಯೋತಿಬಸು ಸರಕಾರ ಕೈಗೊಂಡ ದೃಢ ಕ್ರಮಗಳಿಂದಾಗಿ. ಅದೇ ರೀತಿ ಅಡ್ವಾಣಿ ರಥಯಾತ್ರೆ ಹಲವು ರಾಜ್ಯಗಳಲ್ಲಿ ಕೋಮುದಳ್ಳುರಿ ಹಬ್ಬಿದಾಗ ಪಶ್ಚಿಮ ಬಂಗಾಳ ಶಾಂತಿ ಮತ್ತು ಕೋಮುಸೌಹಾರ್ದದ ಕೋಟೆಯಾಗಿಯೇ ಉಳಿಯಿತು. ಇತ್ತೀಚಿನವರೆಗೂ ಗೃಹಮಂತ್ರಿಯೂ ಆಗಿದ್ದ ಜ್ಯೋತಿಬಸು ಆಡಳಿತದಲ್ಲಿ ಅಲ್ಪಸಂಖ್ಯಾತರಿಗೆ ಸದಾ ಭದ್ರತೆಯ ಭಾವನೆ ಇತ್ತು. ಬಿಜೆಪಿ ಮತ್ತು ಅದಕ್ಕೆ ತಗಲಿಸಿಕೊಂಡವರು ಮಾರ್ಕ್ಸ್‌ವಾದಿಗಳ ಬಗ್ಗೆ ವಿಶೇಷ ವೈರ ಪ್ರದರ್ಶಿಸುತ್ತಿದ್ದರೆ ಅದಕ್ಕೆ ಕಾರಣ ಕೋಮುವಾದಿ ಶಕ್ತಿಗಳನ್ನು ಎದುರಿಸುವಲ್ಲಿ ಮತ್ತು ಧರ್ಮನಿರಪೇಕ್ಷ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಜ್ಯೋತಿಬಸು ನೇತೃತ್ವದ ಎಡರಂಗ ಸರಕಾರದ ಅಚಲ ದಾಖಲೆ.

ಎಡರಂಗದ ದೀರ್ಘ ಆಳ್ವಿಕೆಯ ಮತ್ತೊಂದು ಎದ್ದು ಕಾಣುವ ಸಾಧನೆಯೆಂದರೆ ಎಲ್ಲಾ ದುಡಿಯುವ ವರ್ಗಗಳ ಹಕ್ಕುಗಳ ಕ್ರೋಢೀಕರಣ. ಕಾರ್ಮಿಕ ವರ್ಗಕ್ಕೆ ಅದರ ಹೋರಾಟಗಳಲ್ಲಿ ಸರಕಾರದಿಂದ ಒಂದು ನ್ಯಾಯಯುತ ವ್ಯವಹಾರದ ಭರವಸೆ ದೊರೆತರೆ, ಗ್ರಾಮೀಣ ಬಡವರು ಹಿಂದೆಂದೂ ಕಂಡು-ಕೇಳಿರದ ಒಂದು ಆತ್ಮವಿಶ್ವಾಸವನ್ನು ಮತ್ತು ಘನತೆಯನ್ನು ಪಡೆದರು.

ಈ ಎರಡು ದಶಕಗಳ ಆಡಳಿತವನ್ನು ಜ್ಯೋತಿಬಸು ತೃಪ್ತಿಯಿಂದ ಅವಲೋಕಿಸಲು ಸಾಧ್ಯ. 1977 ರಲ್ಲಿ ಎಡರಂಗದ ಬೃಹತ್ ವಿಜಯದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಸರಕಾರದ ನೇತೃತ್ವ ವಹಿಸಿದಾಗ ಅದು ನಿರೀಕ್ಷಿಸಿದ್ದ ಅಧಿಕಾರಾವಧಿ ಬಹಳ ಸಣ್ಣದೇ. ಏಕೆಂದರೆ 1967 ಮತ್ತು 1969 ರ ಸಂಯುಕ್ತ ರಂಗ ಸರಕಾರಗಳ ಅನುಭವ ಅದರ ಕಣ್ಣ ಮುಂದಿತ್ತು. ಆದರೆ ರಾಜ್ಯದೊಳಗೆ ಭೂಸುಧಾರಣೆಗಳ ಜಾರಿಯಿಂದಾಗಿ, ಪಂಚಾಯತಿ ರಾಜ ಸಂಸ್ಥೆಗಳಿಗೆ ಅಧಿಕಾರದ ವಿಕೇಂದ್ರೀಕರಣದಿಂದಾಗಿ ಹಾಗೂ ದುಡಿಯುವ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯಿಂದಾಗಿ ಮತ್ತು ಅಖಿಲ ಭಾರತ ಮಟ್ಟದಲ್ಲಿ ತುರ್ತುಪರಿಸ್ಥಿತಿಯ ನಂತರ ಬದಲಾದ ಪರಿಸ್ಥಿತಿಯಲ್ಲಿ ಎಡರಂಗ ಸರಕಾರ ಇಷ್ಟು ದೀರ್ಘಕಾಲ ಅಧಿಕಾರದಲ್ಲಿ ಮುಂದುವರೆಯುವುದು ಸಾಧ್ಯವಾಯಿತು. ಈ ಸಂಪೂರ್ಣ ಅವಧಿಯಲ್ಲಿ ಜ್ಯೋತಿಬಸು ನೀಡಿದ ನೇತೃತ್ವ ಸರಕಾರದ ದೀರ್ಘ ಬಾಳಿಕೆಯಲ್ಲಿ ಮತ್ತು ಅದರ ಜನಬೆಂಬಲದಲ್ಲಿ ಪ್ರಧಾನ ಪಾತ್ರ ವಹಿಸಿತು.

ಬೂರ್ಜ್ವಾ ಟೀಕಾಕಾರರಿಗೆ ತಿಳಿದಿರಲಿಕ್ಕಿಲ್ಲ, ಆದರೆ ನಮಗೆ ತಿಳಿದಿದೆ ಏನೆಂದರೆ ಎಡರಂಗ ಸರಕಾರದ ಪ್ರತಿಯೊಂದು ಅಧಿಕಾರಾವಧಿ ಕೂಡಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮುನ್ನಡೆಯಿಂದ ಬೆದರಿಕೆಗೊಳಗಾದವರಿಂದ ಪ್ರತಿರೋಧದ ಅವಧಿ

ಪುಟ 12 ಕ್ಕೆ

ಜಾಗತೀಕರಣ ಮತ್ತು ಸಣ್ಣ ಕೈಗಾರಿಕೆಗಳು - ವಿಚಾರಗೋಷ್ಠಿ

ಅಕ್ಟೋಬರ್ 14 ರಂದು ಸಂಜೆ ಹುಬ್ಬಳ್ಳಿಯಲ್ಲಿ ಛೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ. "ಜಾಗತೀಕರಣದಡಿಯಲ್ಲಿ ಸಣ್ಣ ಕೈಗಾರಿಕೆಗಳ ಮುಂದಿರುವ ಸವಾಲುಗಳು ಮತ್ತು ಪರ್ಯಾಯ ನೀತಿಗಾಗಿ ಪ್ರಯತ್ನ" ಎಂದು ವಿನೂತನ ವಿಚಾರಗೋಷ್ಠಿ ನಡೆಯಿತು. ಕರ್ನಾಟಕ ಛೇಂಬರ್ ಆಫ್ ಕಾಮರ್ಸ್, ಉತ್ತರ ಕರ್ನಾಟಕದ ಸಣ್ಣ ಕೈಗಾರಿಕೆಗಳ ಸಂಘ ಮತ್ತು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಧಾರವಾಡ ಜಿಲ್ಲಾ ಘಟಕ

ಜಾಗತೀಕರಣ ಉದಾರೀಕರಣದ ನೀತಿಗಳು ಎಲ್ಲಾ ರಂಗಗಳನ್ನು ತಟ್ಟಿವೆ. ಈ ಧಾಳಿಗೆ ಸಣ್ಣ ಕೈಗಾರಿಕೆಗಳು ಹಾಗೂ ಕೃಷಿ ತತ್ತರಿಸಿತೊಡಗಿದೆ. ಆಯಾ ವಿಭಾಗಗಳಲ್ಲಿ ಇದರ ವಿರುದ್ಧ ಎಚ್ಚರಿಕೆ ಮೂಡಿ ಪ್ರತಿರೋಧವು ಬೆಳೆಯತೊಡಗಿದೆ. ವಾಣಿಜ್ಯ ಮತ್ತು ಪ್ಲಾಂಟೇಷನ್ ಉಳಿವಿಗಾಗಿ ವಿಶಾಲನೆಲೆಯ ಹೋರಾಟ ರೂಪಿಸಲು ನಡೆಸಲಾದ ಎರಡು ವಿಶಿಷ್ಟ ಪ್ರಯತ್ನಗಳು.

ಇವುಗಳ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. 'ಜಾಗತೀಕರಣ ಮತ್ತು ಸಣ್ಣ ಕೈಗಾರಿಕೆಗಳು' ಕುರಿತು ವಿ.ಜೆ.ಕೆ.ನಾಯರ್ ಮಂಡಿಸಿದ ಪ್ರಬಂಧದಲ್ಲಿ ಮುಂದುವರೆದು, ಉತ್ತರ ಕರ್ನಾಟಕ ಪ್ರದೇಶವು ಬ್ರಿಟಿಶರ ಆಕ್ರಮಣದ ಮೊದಲು ಕರಕುಶಲತೆಗೆ, ವಿವಿಧ ಕೈಗಾರಿಕಾ ಉತ್ಪಾದನೆಗಳಿಗೆ, ಆಂತರಿಕ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟುಗಳಿಗೆ, ಸಮಾಜ ಸುಧಾರಣೆಗೆ ಅಗ್ರಮಾನ್ಯ ಸ್ಥಾನ ಪಡೆದಿರುವುದನ್ನು ನೆನಪಿಸಿಕೊಟ್ಟರು. ಈ ಪ್ರದೇಶದ ಹಿಂದುಳಿಯುವಿಕೆಗೆ ಬ್ರಿಟಿಷರು ಹೇರಿದ ವಸಾಹತುಶಾಹಿಯೇ ಮುಖ್ಯಕಾರಣ ಎಂದು ತೋರಿಸಿಕೊಟ್ಟರು. ಸ್ವಾತಂತ್ರ್ಯ ಹೋರಾಟದ 'ಸ್ವದೇಶಿ' ಚಳುವಳಿ, ರೈಲ್ವೆ ಅಭಿವೃದ್ಧಿ, ಶೈಕ್ಷಣಿಕ ಪ್ರಗತಿ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಸಾರ್ವಜನಿಕ ಆಧಾರದ ಮಿಶ್ರ ಆರ್ಥಿಕ ನೀತಿ ಈ ಪ್ರದೇಶದಲ್ಲಿ ಹುಬ್ಬಳ್ಳಿ-ಧಾರವಾಡ ರಾಜ್ಯದ ಪ್ರಮುಖ ಕೈಗಾರಿಕಾ ನಗರವಾಗಿ, ಸಣ್ಣ ಕೈಗಾರಿಕೆಗಳ ಕೇಂದ್ರವಾಗಿ ಬೆಳೆದು ಬಂದಿರುವುದನ್ನು ಎತ್ತಿ ತೋರಿಸಿದರು.

ಒಟ್ಟಾರೆಯಾಗಿ ಉತ್ತರ ಕರ್ನಾಟಕದ ಹಿಂದುಳಿಯುವಿಕೆಗೆ ಮತ್ತು ಕಳೆದ ಹತ್ತು ವರ್ಷಗಳಿಂದ ಹುಬ್ಬಳ್ಳಿ-ಧಾರವಾಡ ಹೊಸ ಮಾಹಿತಿ ತಂತ್ರಜ್ಞಾನದ ಸಹಯೋಗವನ್ನು ಪಡೆಯದೆ, ಇಲ್ಲಿ ಈಗಾಗಲೇ ಇದ್ದ ಸಣ್ಣ-ದೊಡ್ಡ ಕೈಗಾರಿಕೆಗಳನ್ನು ಕಳೆದುಕೊಂಡು ಬಂಜರು ಭೂಮಿಯಂತಾಗಲು ಕಾರಣಗಳನ್ನು ತಮ್ಮ ಸ್ವಂತ ಅನುಭವದಿಂದ ವಿವರಿಸಿ ತಿಳಿಸಿದರು. ಜಾಗತೀಕರಣ ಆಧಾರಿತ ಆರ್ಥಿಕ ನೀತಿ ಉದ್ದೇಶಿತ ಯಾವುದೇ ಗುರಿ ಸಾಧಿಸಲು ವಿಫಲವಾಗಿದೆ ಎಂದರು. ಈ ನೀತಿಯ ಪ್ರಬಲ ಪ್ರತಿಪಾದಕರಾದ ಆಳುವ ಹಾಗೂ ವಿರೋಧ ಪಕ್ಷಗಳಲ್ಲಿಯೇ ಅದರ ಸಾದಕಬಾದಕಗಳ ಕುರಿತು ತೀವ್ರ ಭಿನ್ನಾಭಿಪ್ರಾಯ ತಲೆ ಎತ್ತಿದೆ ಎಂದರು.

ಈ ನೀತಿಯಿಂದಾಗಿ ಅಭಿವೃದ್ಧಿ ಕುಂಠಿತ, ಬಡತನ, ನಿರುದ್ಯೋಗ, ಅಸಮಾನತೆ, ಬೆಲೆ ಏರಿಕೆ, ಹಣದುಬ್ಬರ, ಭ್ರಷ್ಟಾಚಾರ ಮುಂದಾವುಗಳು ಹೆಚ್ಚುತ್ತಿದ್ದು, ಪ್ರತಿ ಒಂದು ಚುನಾವಣೆಯಲ್ಲಿಯೂ ಈ ನೀತಿಯನ್ನು ಜಾರಿಗೊಳಿಸುತ್ತಿರುವ ಸರಕಾರವನ್ನು ಮತದಾರರು ಕಿತ್ತೊಗೆಯುತ್ತಿರುವುದನ್ನು ವಿ.ಜೆ.ಕೆ. ತಿಳಿಸಿದರು. ಸಣ್ಣ ಕೈಗಾರಿಕಾ ಸಂಘಟನೆಗಳೂ, ಕಾರ್ಮಿಕ ಸಂಘಟನೆಗಳೂ ಸಮಾನ ಹಿತಾಸಕ್ತಿಯಿಂದ ಹಾಗೂ ಐಕ್ಯತೆಯಿಂದ ಈ ಹೊಸ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಬೇಕೆಂದೂ ದೇಶದ ಸ್ವಾವಲಂಬನೆ ಹಾಗೂ ಸಾರ್ವಭೌಮತೆ ರಕ್ಷಿಸಬಲ್ಲ ಪರ್ಯಾಯ ಆರ್ಥಿಕ ನೀತಿಗಾಗಿ ಶ್ರಮಿಸಬೇಕೆಂದು ಕರೆಕೊಟ್ಟರು.

ವರದಿ; **ಸಿ.ಆರ್.ಭಟ್**

ಮುಕ್ತ ಆಮದು ನೀತಿಯ ದಾಳಿಯಿಂದ ಸಣ್ಣ ಕೈಗಾರಿಕೆಗಳನ್ನು ರಕ್ಷಿಸಬೇಕು - ಎಸ್.ಎ. ಚರಂತಿ ಮಠ

ಜಾಗತೀಕರಣದಡಿಯಲ್ಲಿ ವಿಶ್ವವ್ಯಾಪಾರ ಸಂಸ್ಥೆಯ ಶರತ್ತಿನಂತೆ ಮುಕ್ತ ಆಮದು ನೀತಿ 2000 ದಿಂದಾಗಿ ಸಣ್ಣ ಕೈಗಾರಿಕೆಗಳಿಗೆ ಇದುವರೆಗೆ ಮೀಸಲಿಟ್ಟ 812 ಸರಕು ಸಾಮಗ್ರಿಗಳ ಉತ್ಪಾದನೆಯಲ್ಲಿ 612 ವಸ್ತುಗಳನ್ನು ಯಾವುದೇ ನಿರ್ಬಂಧ ಇಲ್ಲದೆ ಆಮದು ಮಾಡಬಹುದಾಗಿದೆ. ಇದರಿಂದಾಗಿ ದೇಶದ ಆರ್ಥಿಕದಲ್ಲಿ ಪ್ರಮುಖ ಸ್ಥಾನ ಹೊಂದಿರುವ ಸಣ್ಣಕೈಗಾರಿಕಾ ಕ್ಷೇತ್ರ ಶೀಘ್ರವಾಗಿ ವಿನಾಶದತ್ತ ತಳ್ಳಲ್ಪಡುವುದು. ಈ ಕ್ಷೇತ್ರದಲ್ಲಿ ಸಧ್ಯ 30 ಲಕ್ಷ ಘಟಕಗಳಿದ್ದು, ರೂ. 4,65,000 ಕೋಟಿ ಮೌಲ್ಯದ ಕೈಗಾರಿಕಾ ಉತ್ಪಾದನೆ ನಡೆಯುತ್ತಿದೆ (ಒಟ್ಟು ಕೈಗಾರಿಕಾ ಉತ್ಪಾದನೆಯ ಶೇ 45), ರೂ. 44,000 ಕೋಟಿಯಷ್ಟು ರಫ್ತು ಆಗುತ್ತಿದೆ. (ಒಟ್ಟು ರಫ್ತಿನ ಶೇ 35), ಸರಕಾರಕ್ಕೆ ರೂ. 51,150 ಕೋಟಿಯಷ್ಟು ತೆರಿಗೆ ಆದಾಯ ಬರುತ್ತಿದೆ. 167 ಲಕ್ಷ ಜನ ಕಾರ್ಮಿಕರು ಉದ್ಯೋಗದಲ್ಲಿದ್ದಾರೆ. ಮುಕ್ತ ಆಮದು ನೀತಿಯಿಂದ ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಬಲಿಷ್ಠ ಹಣಕಾಸು ಸಂಪನ್ಮೂಲ, ಜಾಹೀರಾತು ಜಾಲ, ತಂತ್ರಜ್ಞಾನ, ತಜ್ಞ ಆಡಳಿತ, ಮಾರುಕಟ್ಟೆ ಮಾಹಿತಿ, ಸರಕಾರದ ಸಹಾಯ ಮುಂತಾದವುಗಳಿಂದ ಸಣ್ಣ ಕೈಗಾರಿಕೆಗಳನ್ನು ಅನತಿ ಕಾಲದಲ್ಲಿಯೇ ಪೈಪೋಟಿಯಿಂದ ಮಣ್ಣು ಮುಕ್ಕಿ

ಪ್ಲಾಂಟೇಷನ್ ಉಳಿಸುವ ಹೋರಾಟ

ಜಾಗತೀಕರಣ, ಉದಾರೀಕರಣ ನೀತಿಇಂದು ನಮ್ಮದೇಶದ ಕೈಗಾರಿಕಾ ಕ್ಷೇತ್ರಗಳನ್ನು ವಿನಾಶದತ್ತ ತಳ್ಳುತ್ತಿದೆ. ಅದೇ ರೀತಿ ತೋಟಕೈಗಾರಿಕಾ ಕ್ಷೇತ್ರವು ನಾಶದ ಕಡೆಗೆ ಹೋಗುತ್ತಿದೆ. ನಮ್ಮದೇಶದಲ್ಲಿ ಚಹಾ ಉತ್ಪಾದನೆಯು ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟವಾಗಿ ಇನ್ನೂ 2 ಲಕ್ಷ ಟನ್ ರಫ್ತಿಗೆ ಉಳಿಯುತ್ತದೆ. ಹೀಗಿರುವಾಗ ಭಾರತ ಸರ್ಕಾರ ಶ್ರೀಲಂಕದೊಂದಿಗೆ ಆಮದು ಶುಲ್ಕ ಕೇವಲ ಶೇ 7.5 ನಿಗದಿ ಮಾಡಿ ಪ್ರತಿವರ್ಷ 15 ಲಕ್ಷ ಕೆ.ಜಿ. ಚಹಾ ಆಮದು ಮಾಡಿಕೊಳ್ಳುವ ಒಪ್ಪಂದ ಮಾಡಿಕೊಂಡಿದೆ. ಇದರಿಂದ ನಮ್ಮ ಚಹಾ ತೋಟಗಳು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ. ಉತ್ಪಾದನಾವೆಚ್ಚಕ್ಕಿಂತ ಕಡಿಮೆ ದರದಲ್ಲಿ ಚಹಾ ಮಾರಾಟ ಬಂದಿದ್ದು ಈಗಾಗಲೇ ತಮಿಳುನಾಡಿನ ನೀಲಗಿರಿ ಪ್ರದೇಶದಲ್ಲಿ ಬೆಳೆಗಾರರು, ಕಾರ್ಮಿಕರು ಮತ್ತಿತರರು ಸೇರಿದೊಡ್ಡ ಹೋರಾಟ ನಡೆಸುತ್ತಿದ್ದಾರೆ. ತೋಟ ಕೈಗಾರಿಕೆಯನ್ನುಳಿಸಿ, ತೋಟ ಕಾರ್ಮಿಕರನ್ನು ಉಳಿಸಿ" ಎಂಬ ಘೋಷಣೆಯೊಂದಿಗೆ ರಾಜ್ಯ ವಿವಿಧ ತೋಟಕಾರ್ಮಿಕ ಸಂಘಟನೆ ತಾ. 14.10.2000 ರಿಂದ ಚಿಕ್ಕಮಗಳೂರಿನಲ್ಲಿ ಕರೆದಿದ್ದ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಆಲ್ ಇಂಡಿಯಾ ಪ್ಲಾಂಟೇಷನ್‌ನ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾರ್ಯದರ್ಶಿ ಪಿ.ಲಾಲಾಜಿ ಬಾಬು ತಿಳಿಸಿದರು. ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಈಗಾಗಲೇ ರಬ್ಬರ್ ಸಹ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರಗಳಲ್ಲಿ ಮಾರಾಟ ಮಾಡಬೇಕಾದ ಪರಿಸ್ಥಿತಿ ಬಂದು ರಬ್ಬರ್ ತೋಟಗಳು ಬಹಳ ಸಂಕಷ್ಟದಲ್ಲಿದೆ. ಕಾಫಿ ದರ ಇಳಿದಿದೆ. ವಿಶ್ವವಾಣಿಜ್ಯ ಸಂಘಟನೆಯ ಒಪ್ಪಂದದಲ್ಲಿ ಕಾಫಿಯು ಸೇರಿದೆ. ಬ್ರೆಜಿಲ್ ಹೆಚ್ಚು ಕಾಫಿಯನ್ನು ಉತ್ಪಾದಿಸಲು ಪ್ರಾರಂಭಿಸಿದೆ. ಮುಂದೆ ನಮ್ಮದೇಶಕ್ಕೆ ಇನ್ನು ಕಡಿಮೆ ದರಕ್ಕೆ ಬ್ರೆಜಿಲ್ ಕಾಫಿ ಆಮದಾಗುವ ಸಂಬಂಧವಿದೆ. ಹಾಗೆ ಬ್ರೆಜಿಲ್ ಕಾಫಿ ಬಂದರೆ ಅಷ್ಟಿಷ್ಟು ಜೀವ ಹಿಡಿದುಕೊಂಡಿರುವ ಕಾಫಿ ಕೈಗಾರಿಕೆಯು ಚೇತರಿಸಿಕೊಳ್ಳಲಾಗದ ಪರಿಸ್ಥಿತಿ ಬರಲಿದೆ. ಇದರಿಂದ ತೋಟ ಕೈಗಾರಿಕೆಯಲ್ಲಿ ಕೆಲಸ ಮಾಡುವ ಸುಮಾರು 40 ಲಕ್ಷ ಕಾರ್ಮಿಕರು ತೀವ್ರ ಸಂಕಷ್ಟವನ್ನು ಎದುರಿಸಬೇಕಾಗಿ ಬರುತ್ತದೆಯೆಂದು ಹೇಳುತ್ತಾ ತೋಟ ಕಾರ್ಮಿಕ ಮುಖಂಡರ ಅಖಿಲ ಭಾರತ ಸಮ್ಮೇಳನದ ರಾಷ್ಟ್ರಮಟ್ಟದಲ್ಲಿ ಈ ಕೈಗಾರಿಕೆಗಳನ್ನುಳಿಸಲು ಜಂಟಿಯಾಗಿ ಹಮ್ಮಿಕೊಂಡಿರುವ ಹೋರಾಟಗಳ ವಿವರಣೆಯನ್ನು ನೀಡಿ ಕರ್ನಾಟಕದ ತೋಟ ಕಾರ್ಮಿಕರು ಹಾಗೂ ಬೆಳೆಗಾರರು ಒಟ್ಟಾಗಿ ಕೈಗಾರಿಕೆಯನ್ನುಳಿಸಲು ಹೋರಾಟಕ್ಕೆ ಮುಂದೆ ಬರಲು ಕರೆ ಕೊಟ್ಟರು.

ಇಂದು ಸೇವ್ ಪ್ಲಾಂಟೇಷನ್ ಇಂಡಸ್ಟ್ರಿ-ಸೇವ್ ವರ್ಕಿಂಗ್ ಕ್ಲಾಸ್ ಎಂಬ ಘೋಷಣೆಯ ಮುಂದೆ ಸೇವ್ ಇಂಡಿಯಾ ಎಂಬ ಘೋಷಣೆಯನ್ನು ಸೇರಿಸಬೇಕಾದ ಪರಿಸ್ಥಿತಿ ಬರುತ್ತದೆ ಎಂಬ ಎಚ್ಚರಿಕೆಯನ್ನು ದಿ ಎಸ್ಟೇಟ್ಸ್ ಸ್ಟಾಫ್ಸ್ ಯೂನಿಯನ್ ಆಫ್ ಸೌತ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಜಿ.ಜಗನ್ನಾಥನ್ ಸಮಾವೇಶದ ಮುಖ್ಯ ಅಥಿಗಳಲ್ಲಿ ಒಬ್ಬರಾಗಿ ಮಾತನಾಡುತ್ತಾ ತಿಳಿಸಿದರು.

ವಿ.ಸುಕುಮಾರ್

ಮುಖ್ಯ ಅಥಿತಿಗಳಾಗಿ ಎಐಟಿಯುಸಿಯ ರಾಜ್ಯಾಧ್ಯಕ್ಷರಾದ ಎಂ.ಸಿ.ನರಸಿಂಹನ್ ಮಾತನಾಡುತ್ತಾ ಜಾಗತೀಕರಣದಿಂದ ನಮ್ಮದೇಶ ಯಾವ ದಿಕ್ಕಿಗೆ ಹೋಗುತ್ತಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಧೋರಣೆ ಇಂದು ನಮ್ಮದೇಶ ಎಲ್ಲಾ ಕ್ಷೇತ್ರಗಳ ಕೈಗಾರಿಕೆಗಳ ನಾಶಕ್ಕೆ ನಾಂದಿಯಾಗುತ್ತದೆ. ಇಂತಹ ಸಂದರ್ಭ ತೋಟ ಕಾರ್ಮಿಕ ಸಂಘದವರು ಕರೆದಿರುವ ಈ ಸಮಾವೇಶ ಮಹತ್ವಪೂರ್ಣವಾದದ್ದು ಎಂದು ಹೇಳಿದರು.


ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಎಸ್.ಸೂರ್ಯನಾರಾಯಣ ರಾವ್ ಮತ್ತೊಬ್ಬ ಅಥಿತಿಗಳಾಗಿ ಮಾತನಾಡುತ್ತಾ ಜಾಗತೀಕರಣದ ಪರಿಣಾಮ ಇಂದು ನಮ್ಮದೇಶ ಯಾವ ದಿಕ್ಕಿಗೆ ಹೋಗುತ್ತಿದೆ ಎಂದು ಎಳೆಎಳೆಯಾಗಿ ಬಿಚ್ಚಿಟ್ಟು ಮಾತನಾಡುತ್ತಾ ಕಾಫಿ ಬೆಳೆಗಾರರಿಗೆ ಕಾರ್ಮಿಕರೆಂದರೆ ಮಡಿವಂತಿಕೆ, ಕೈಗಾರಿಕೆ ಅವನತಿ ಅಂಚಿನಲ್ಲಿರುವಾಗ ತಲೆ ಮೇಲೆ ಕೈಯಿಟ್ಟು ಕುಳಿತಿರುವ ನಿಮಗಿಂತಲೂ ಮೊದಲು ಕಾರ್ಮಿಕ ಸಂಘಗಳು ಕೈಗಾರಿಕೆ ಉಳಿವಿಗೆ ಹೋರಾಟ ಆರಂಭ ಮಾಡಿದೆ. ನೀವು ಮುಂದೆ ಬನ್ನಿ, ನೀವು ಉಳಿಯಬೇಕು, ಕೈಗಾರಿಕೆ ಬೆಳೆಯಬೇಕು, ಅದನ್ನೇ ನಂಬಿ ದುಡಿದು ತಿನ್ನುವ ಕಾರ್ಮಿಕರು ಬದುಕಬೇಕು. ಇದು ಟ್ರೇಡ್ ಯೂನಿಯನ್ ..... ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಕೈಗಾರಿಕೆ ಸರ್ವನಾಶವಾಗುತ್ತದೆ ಎಂದು ಹೇಳಿದರು.

ಹಿಂದೆ ನಾವು ಕಾರ್ಮಿಕ ಸಂಘದವರನ್ನು ಹುಲಿಗಳೆಂದು, ನಾವು ಕುರಿಗಳೆಂದು ಭಾವಿಸಿದ್ದೆವು. ಕಾರ್ಮಿಕ ನಾಯಕರು ಯಾರಾದರು ಬಂದರೆಂದರೆ ನಾವು ಹಿಂಬದಿ ಬಾಗಿಲಿನಿಂದ ತಪ್ಪಿಸಿಕೊಂಡು ಓಡಿಹೋಗುತ್ತಿದ್ದೆವು. ಆದರೆ ಈಗ ಕೈಗಾರಿಕೆಯ ಸಮಸ್ಯೆಗಳಿಗ[illegible]ರ ಕಾರ್ಮಿಕ ಮುಖಂಡರು ಮುಂದೆ ಬಂದು [illegible]ಮಾವೇಶ ನಡೆಸುತ್ತಿರುವುದು ಸ್ವಾಗತಾರ್ಹ. ನಾವು ಹಿಂದೆ ಕಾಫಿ ಮಂಡಳಿಯ ನಿಯಂತ್ರಣದ ವಿರುದ್ಧ ಹೋರಾಟ ಮಾಡಿ ನಮಗೆ ಕಾಫಿ ಮಾರಲು ಮತ್ತು ಅವಕಾಶ ಇರಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದೆವು. ಈಗ ಅದು ನಮಗೆ ಸಿಕ್ಕಿದೆ. ಆದರೆ ಕಾಫಿ ಬೆಳೆಗಾರರು ಈಗ ಅತಂತ್ರ ಸ್ಥಿತಿಯಲ್ಲಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯ ಗುಣಮಟ್ಟದಲ್ಲಿ ಸಣ್ಣ ಬೆಳೆಗಾರರಿಂದ ಕಾಫಿಯ ಸಂಸ್ಕರಣೆ, ಶೇಖರಣೆ ಸಾಧ್ಯವಿಲ್ಲ. ಆದ್ದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಕಾಫಿಗೆ ಕಡಿಮೆ ಬೆಲೆ ಸಿಕ್ಕುತ್ತಿದೆ. ಕಾಫಿ ಕ್ಯೂರಿಂಗ್‌ಗಳಲ್ಲಿ ಶೇಖರಿಸಿ ಇಟ್ಟಾಗ ಅವರಲ್ಲಿ ಅನೇಕರು ಕಾಫಿ ಬೆಳೆಗಾರರ ಕಾಫಿಯನ್ನು ನುಂಗಿ ಹಾಕಿ ಮೋಸ ಮಾಡಿ ಓಡಿಹೋಗಿದ್ದಾರೆ. ಯಾವುದೇ ನಿಯಂತ್ರಣ ಇಲ್ಲದಂತಾಗಿದೆ. ನಾವು ಹಿಂದೆ ತಪ್ಪು ಮಾಡಿದ್ದೇವೆಯೆಂದು ಮನವರಿಕೆ ಯಾಗಿದೆ. ಕಾಫಿಯನ್ನು ಕೊಂಡುಕೊಳ್ಳಲು ಕಾಫಿ ಮಂಡಳಿ ಯಾವುದಾದರೂ ಒಂದು ವ್ಯವಸ್ಥೆ ಮಾಡಬೇಕು. ಕಾರ್ಮಿಕರು ಕೈಗಾರಿಕೆಯ ಉಳಿವಿಗಾಗಿ ಹೋರಾಟಕ್ಕೆ ಮುಂದಾದಾಗ ನಾವುಹಿಂದೆ ಉಳಿಯೋದಿಲ್ಲ, ನಾವು ನಿಮ್ಮ ಜೊತೆಯಲ್ಲಿರುತ್ತೇವೆಯೆಂದು ಕಾಫಿ ಬೆಳೆಗಾರರ ಪ್ರತಿನಿಧಿಗಳಾಗಿ ಸಣ್ಣ ಬೆಳೆಗಾರರ ಸಂಘದ ಅಧ್ಯ ಬಿ.ಎಸ್.ಬಿಳಿಯಪ್ಪಗೌಡ ಮನಬಿಚ್ಚಿ ನುಡಿದರು. ಆಲ್ದೂರು ಬೆಳೆಗಾರರ ಸಂಘದ ಮೋಹನ್, ಸಿರವಾಸೆ ಬೆಳೆಗಾರರ ಸಂಘದ ಬಿ.ಎನ್. ವಿಶ್ವನಾಥ್; ಪಿ.ವಿ.ಲೋಕೇಶ್, ಕೋಮಾರ್ಕ್‌ನ ಎಸ್.ರಘು, ಕಾಫಿ ಮಂಡಳಿ ಸದಸ್ಯೆ ರಾಧ ಸುಂದರೇಶ್, ಕಾರ್ಮಿಕ ಮುಖಂಡರುಗಳಾ ವಿ.ಆಧಿಶೇಷ(INTUC), ಎಚ್.ಎಂ. ರೇಣುಕಾ ರಾಧ್ಯ(AITUC), ಯು.ಕಮಲನಾಥನ್, ಪಿ.ಜಿ. ಎಸ್. ಮಣಿ, ಎಚ್.ಎಂ.ಕಾಳಯ್ಯ(ಟ್ಬು ಮುಂತಾದವರು ಸಮಾವೇಶವನ್ನುದ್ದೇಶಿ ಮಾತನಾಡಿದು.

ಸಿಐಟಿಯುನ ವಿ.ಸುಕುಮಾರ್ ಸಮಾವೇಶದ ಮುಂದೆ ವರದಿ ಮಂಡಿಸಿ ಮಾತಾಡಿದರು. ಎಐಟಿಯುಸಿ ಮುಖಂಡ ಕೆ.ಗುಣಶೇಖ ಸ್ವಾಗತಿಸಿದರು. ಇಎಸ್‌ಎಲ್‌ಐಎಸ್‌ಐ ಕಾರ್ಯ ದರ್ಶಿ ಎಂ.ಸಿ.ಶಿವಾನಂದಸ್ವಾಮಿ ಕಾರ್ಯಕ್ರಮ ರೂಪಿಸಿದರು. ಎ.ಚಿನ್ನಪ್ಪ ವಂದಿಸಿದರು.

ಸುಮಾರು 15 ಸಂಘಗಳಿಂದ 250 ಕ್ಕೂ ಹೆ ಆಯ್ದ ಪ್ರತಿನಿಧಿಗಳು ಈ ಸಮಾವೇಶದ ಭಾಗವಹಿಸಿ, ಈಗಾಗಲೇ ಪ್ಲಾಂಟೇಷನ್ ಕಾರ್ಮಿಕರ ಮುಖಂಡರುಗಳ ಅಖಿಲ ಭಾರ ಸಮ್ಮೇಳನದಲ್ಲಿ ಹಮ್ಮಿಕೊಂಡಿರುವ ಹೋರಾಟ ಕಾರ್ಯಕ್ರಮಗಳಲ್ಲಿ ರಾಜ್ಯದ ಪ್ಲಾಂಟೇಷನ್ ಕಾರ್ಮಿಕರು ಸಕ್ರಿಯವಾಗಿ ಪಾಲ್ಗೊಳ್ಳು ತೀರ್ಮಾನ ಕೈಗೊಳ್ಳಲಾಯ್ತು. ಇದೊಂದು ಚರಿತ್ರಾರ್ಹ ಸಮಾವೇಶ.

ಸಮಾವೇಶದಲ್ಲಿ ಪಾಲ್ಗೊಂಡಿದ್ದ ಲಾಲಾಜಿ ಬಾಬು, ಸೂರಿ, ಎಂ.ಸಿ.ನರಸಿಂಹನ್ ಮತ್ತು ಕಾಫಿ ಬೆಳೆಗಾರರ ಪ್ರತಿನಿಧಿಗಳು



ತಮ್ಮ ಪ್ರಾಬಲ್ಯವನ್ನು ಮೆರಸಲಿದೆ. ಕಾರಣ ಮುಕ್ತ ಆಮದು ನೀತಿಯಿಂದ ಸಣ್ಣ ಕೈಗಾರಿಕಾ ಕ್ಷೇತ್ರವನ್ನು ಸೂಕ್ತ ಪರ್ಯಾಯ ನೀತಿ ರೂಪಿಸಿ ರಕ್ಷಿಸಬೇಕು....." ಎಂದು ಉತ್ತರ ಕರ್ನಾಟಕ ಸಣ್ಣ ಕೈಗಾರಿಕಾ ಸಂಘದ ವಕ್ತಾರರಾದ ಮತ್ತು ನಗರದ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ 'ಆದ ಎನ್.ಎ. ಚರಂತಿ ಮಠ ವಿಚಾರಗೋಷ್ಠಿಯಲ್ಲಿ ಇನ್ನೊಬ್ಬ ಮುಖ್ಯಅಥಿತಿಯಾಗಿ ಭಾಗವಹಿಸುತ್ತಾ ಕರೆ ನೀಡಿದರು.

"ದುಸ್ಥಿತಿಯಲ್ಲಿರುವ ಸಣ್ಣ ಕೈಗಾರಿಕೆಗಳು" ಎಂಬ ತಮ್ಮ ಪ್ರಬಂಧದಲ್ಲಿ ಚರಂತಿಮಠ ಜಾಗತೀಕರಣ ಎಂದರೆ ದೈತ್ಯ ಶಕ್ತಿಯ 4000 ಬಹುರಾಷ್ಟ್ರೀಯ ಕಂಪನಿಗಳ ವಿಶ್ವವ್ಯಾಪಿ ಬಂಡವಾಳ ಹೂಡಿಕೆಯ, ಉತ್ಪಾದನೆಯ, ವ್ಯಾಪಾರ ವಾಣಿಜ್ಯದ, ತಂತ್ರಜ್ಞಾನ, ಹಣಕಾಸು ಬಂಡವಾಳದ, ಅತಿಲಾಭಗಳಿಕೆಯ ಬೃಹತ್ ಜಾಲವೇ ಆಗಿದೆ ಎಂದು ತಿಳಿಸಿದರು. ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ದೇಶದ ಸರಕಾರಗಳ ಸಾರ್ವಭೌಮತೆಗೂ ಬಗ್ಗುವುದಿಲ್ಲ ಮಾತ್ರವಲ್ಲದೆ, ತಮ್ಮ ಕಬಂದಬಾಹುಗಳನ್ನು ಚಾಚುವ ಎಲ್ಲಾ ದೇಶಗಳ ಸಾರ್ವಭೌಮತೆಯನ್ನು ಅಳಿಸಿಹಾಕಿ ತಮ್ಮ ಹಿರಿಮೆಯನ್ನು ಮೆರೆಸುವಷ್ಟು ಶಕ್ತಿ ಸಂಪನ್ಮೂಲಗಳನ್ನು ಹೊಂದಿವೆ ಎಂದು ಎಚ್ಚರಿಸಿದರು. ಯಾವುದೇ ಪೂರ್ವಭಾವಿ ತಯಾರಿ ಇಲ್ಲದೆ, ರಾಷ್ಟ್ರೀಯ ಚರ್ಚೆ ಇಲ್ಲದೆ, ದಿಢೀರನೆ ಸಣ್ಣ ಕೈಗಾರಿಕಾ ಕ್ಷೇತ್ರವನ್ನು ಜಾಗತೀಕರಣದ ಬಿರುಗಾಳಿಗೆ ಗುರಿ ಮಾಡಿರುವುದಕ್ಕೆ ತಮ್ಮ ತೀವ್ರ ಆತಂಕ ವ್ಯಕ್ತಪಡಿಸಿದರು. ಕೇಂದ್ರ-ರಾಜ್ಯ ಸರಕಾರಗಳ ಕೈಗಾರಿಕಾ ನೀತಿ, ಹಣಕಾಸು ನೀತಿ, ತೆರಿಗೆ ನೀತಿ, ಇತ್ಯಾದಿ ಹೆಚ್ಚಾಗಿ ದೊಡ್ಡ ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾತ್ರ ಸಹಕಾರಿಯಾಗುವುದರ ಕುರಿತು ತಮ್ಮ ತೀವ್ರ ವಿಶಾದ ವ್ಯಕ್ತಪಡಿಸಿದರು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಸಣ್ಣ ಕೈಗಾರಿಕೆಗಳಲ್ಲಿ ಭಾರತದಂತೆ ಅಲಕ್ಷಿಸುತ್ತಿಲ್ಲ ಎಂದರು.

ಸಣ್ಣ ಕೈಗಾರಿಕಾ ಕ್ಷೇತ್ರವನ್ನು ಜಾಗತೀಕರಣ, ಮುಕ್ತ ಆಮದು ನೀತಿ ದಾಳಿಯಿಂದ ರಕ್ಷಿಸಲು ಚರಂತಿ ಮಠ ಕೆಲವು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿದರು. ಮುಖ್ಯವಾಗಿ ಸರಕಾರ ಐಎಂಎಫ್, ಜಾಗತಿಕ ಬ್ಯಾಂಕ್, ವಿಶ್ವವ್ಯಾಪಾರ ಸಂಸ್ಥೆಗಳ ಶರತ್ತುಗಳನ್ನು ಒಪ್ಪುವ ಮೊದಲು ವ್ಯಾಪಕವಾಗಿ ಸಾರ್ವಜನಿಕ ಚರ್ಚೆ ನಡೆಸಬೇಕು ಮತ್ತು ವಿವಿಧ ಹಿತಾಸಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ದೊಡ್ಡ ಕೈಗಾರಿಕೆಗಳಿಗೆ ಸಂಬಂಧಿಸಿ ಸಿಸಿಐಐ, ಎಫ್ಐಸಿಸಿ ಮುಂತಾದ ಸಂಸ್ಥೆಗಳೊಂದಿಗೆ ಸರಕಾರ ಚರ್ಚಿಸುವಂತೆ ಸಣ್ಣ ಕೈಗಾರಿಕೆಗಳ ರಾಜ್ಯ ಹಾಗೂ ಅ.ಭಾರತ ಸಂಘಟನೆಗಳೊಂದಿಗೆ ಚರ್ಚಿಸಬೇಕು. ಸಣ್ಣ ಕೈಗಾರಿಕೆಗಳಿಗೆ ಇದುವರೆಗೆ ಇದ್ದಮೀಸಲಾತಿ ಮುಂದುವರಿಯಬೇಕು. ವಿಶ್ವವ್ಯಾಪಾರ ಸಂಸ್ಥೆಯ ಶರತ್ತುಗಳಿಂದ ಈ ಕ್ಷೇತ್ರಕ್ಕೆ ಸಂಭವಿಸಬಹುದಾದ ಅನಾಹುತಗಳ ಕುರಿತು ಮತ್ತು ಈ ಕ್ಷೇತ್ರದ ಸದ್ಯದ ದುಃಸ್ಥಿತಿಯ ಕುರಿತು ಅಧ್ಯಯನ ನಡೆಸಲು ಒಂದು ವಿಶೇಷ ಆಯೋಗ ನೇಮಕ ಮಾಡಬೇಕು, ಈ ಕ್ಷೇತ್ರದಲ್ಲಿನ ಉತ್ಪಾದನೆಗಳಿಗೆ ಮತ್ತು ಅವುಗಳನ್ನು ದೇಶ ವಿದೇಶಗಳಲ್ಲಿ ಮಾರಾಟ ಮಾಡಲು ಅಗತ್ಯದ ಮೂಲಭೂತ ಸೌಕರ್ಯಗಳಾದ ಸಾರಿಗೆ, ಸಂಪರ್ಕ, ಹಣಕಾಸು, ತಂತ್ರಜ್ಞಾನ, ಆಡಳಿತ ತಜ್ಞತೆ, ಮಾರುಕಟ್ಟೆ, ಮಾಹಿತಿ ಹಾಗೂ ಪ್ರೋತ್ಸಾಹ, ಜಾಹೀರಾತು ಜಾಲ, ಇತ್ಯಾದಿಗಳನ್ನು ಸರಕಾರ ಒದಗಿಸಿ ಕೊಡಬೇಕು. ಸದ್ಯದ ಅಧಿಕಾರಶಾಹಿ ಸಡಿಲವಾಗಬೇಕು., ಉದ್ಯೋಗಾವಕಾಶ ಹೆಚ್ಚಿರುವುದಕ್ಕೆ ಹೆಚ್ಚು ಆದ್ಯತೆ ನೀಡಬೇಕು.

ಆರ್ಥಿಕ ರಂಗದಲ್ಲಿ ಶಕ್ತಿಶಾಲಿಗಳು ಮಾತ್ರ ಬದುಕಿ ಉಳಿಯಲಿ ಎಂಬ ಡಾರ್ವಿನ್ ವಾದ ಸಲ್ಲದು - ಸಿ.ಆರ್.ಭಟ್

ಪ್ರಾರಂಭದಲ್ಲಿ ಛೇಂಬರ್ ಆಫ್ ಕಾಮರ್ಸ್‌ನ ಗೌರವ ಕಾರ್ಯದರ್ಶಿ ಡಿ.ಆರ್.ಖೋಬರೆ ಸ್ವಾಗತಿಸಿದರು. ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಗೌರವ ಅಧ್ಯಕ್ಷರಾದ ಕೆ.ಟಿ.ಪವಾರ್ ಪ್ರಾಸ್ತಾವಿಕ ಮಾತನಾಡುತ್ತಾ ಸಣ್ಣ ಕೈಗಾರಿಕೆಗಳನ್ನು ಸದ್ಯದ ದುಃಸ್ಥಿತಿಯಿಂದ ಮತ್ತು ಅಸಮಾನತೆಯ ಪೈಪೋಟಿಯಿಂದ ರಕ್ಷಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರ್ಧಿಷ್ಟ ನೀತಿ ರೂಪಿಸಿ ಜಾರಿಗೊಳಿಸಲು ಒತ್ತಾಯಿಸಿದರು. ಇತ್ತೀಚಿಗಿನ ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ ಇಂಡಿಯನ್ ಪ್ಲೈವುಡ್, ಮೈಸೂರು ಕಿರ್ಲೋಸ್ಕರ್ ಸಂಸ್ಥೆಗಳೂ ಸೇರಿದಂತೆ ಹಲವಾರು ಕೈಗಾರಿಕಾ ಘಟಕಗಳು ಬಹುರಾಷ್ಟ್ರೀಯ ಸಂಸ್ಥೆಗಳ ಅಸಮಾನ ಪೈಪೋಟಿಯಿಂದ ಮುಚ್ಚಲ್ಪಟ್ಟು, ಅವುಗಳಿಗೆ ಅವಲಂಬಿಸಿರುವ ನೂರಾರು ಸಣ್ಣ ಕೈಗಾರಿಕೆಗಳೂ ದಿವಾಳಿಯಾಗಿ, ಸಾವಿರಾರು ಕಾರ್ಮಿಕರು ಬೀದಿ ಪಾಲಾದುದನ್ನು ನೆನಪಿಸಿಕೊಟ್ಟರು.

ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ ಧಾರವಾಡದ ಗೌರವಕಾರ್ಯದರ್ಶಿ ಸಿ.ಆರ್.ಭಟ್ ಮೊದಲಿಗೆ ಈ ವಿಚಾರಗೋಷ್ಠಿಯ ಉದ್ದೇಶಗಳನ್ನು ವಿವರಿಸಿ ತಿಳಿಸಿದರು. ಜಾಗತೀಕರಣದಿಂದ ದೇಶದ ಆರ್ಥಿಕ ಕ್ಷೇತ್ರದ ಮೇಲೆ ಮಾತ್ರವಲ್ಲದೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೆಯೂ ಅಹಿತಕರ ಪರಿಣಾಮವಾಗುತ್ತಿರುವುದನ್ನು ತೋರಿಸಿಕೊಟ್ಟರು. ಜಾಗತೀಕರಣದ ಸೂತ್ರಧಾರಿ ಸಂಸ್ಥೆಗಳಾದ ಐಎಂಎಫ್, ಜಾಗತಿಕ ಬ್ಯಾಂಕ್‌ಗಳಲ್ಲಿ ಅತ್ಯಂತ ಹಾಗೂ ಬಲಿಷ್ಟ ಅಮೆರಿಕ, ಬ್ರಿಟನ್, ಜರ್ಮನಿ, ಫ್ರಾನ್ಸ್, ಜಪಾನ್ ದೇಶಗಳು ಒಟ್ಟಿಗೆ ಅನುಕ್ರಮವಾಗಿ ಶೇ 41.20 ಮತ್ತು ಶೇ. 48.10 ಬಂಡವಾಳ ಹೂಡಿದ್ದು ಸಂಪೂರ್ಣ ನಿಯಂತ್ರಣಹೊಂದಿವೆ. ಭಾರತದ ಪಾಲು ಕೇವಲ ಶೇ 2.2 ಮತ್ತು ಶೇ 2.5 ಎಂದು ತಿಳಿಸಿದರು. 1994 ರಲ್ಲಿ ಡಂಕಲ್ ವರದಿಗೆ ಆಗಿನ ಕಾಂಗ್ರೆಸ್ ಕಣ್ಣುಮುಚ್ಚಿ ಸಹಿ ಹಾಕಿ ಕಾಲೂರಿ ಶರಣಾಯಿತು ಎಂದು ಈಗಿನ ವಾಣಿಜ್ಯ ಸಚಿವ ಮುರುಸೋಳಿ ಮಾರನ್ ಕಳೆದ ಜೂನ್‌ನಲ್ಲಿ ಕೈರೋದಲ್ಲಿ ಜಿ.-15 ರಾಷ್ಟ್ರಗಳ ಶೃಂಗಸಭೆಯಲ್ಲಿ ಮಾಡಿದ ಭಾಷಣದತ್ತ ಗಮನ ಸೆಳೆದರು. ದೇಶದ ಆರ್ಥಿಕ ರಂಗದಲ್ಲಿ ಪರಸ್ಪರ ಸಹಾಯ ಸಹಕಾರ, ಜನಕಲ್ಯಾಣ, ಮೂಲಭೂತ ಸೌಕರ್ಯಗಳಿಗೆ ಆದ್ಯತೇ ಇರಬೇಕೇ ಹೊರತು "ಶಕ್ತಿಶಾಲಿಗಳು ಮಾತ್ರ ಬದುಕಿ ಉಳಿಯಲಿ' ಎಂಬ ಡಾರ್ವಿನ್ ವಾದ ಸಲ್ಲದು ಎಂದರು ಸಿ.ಆರ್.ಭಟ್. ಧಾರವಾಡದಲ್ಲಿ ಜಿಲ್ಲಾ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಸಂಚಾಲಕರಾದ ಆರ್.ಎಚ್.ಆಯಿ ಕಳೆದ ಹತ್ತು ವರ್ಷಗಳಲ್ಲಿ ಜಾಗತಿಕವಾಗಿ, ಖಾಸಗೀಕರಣ, ಉದಾರೀಕರಣ ಆಧಾರಿತ ಆರ್ಥಿಕ ನೀತಿಯ ಅನಾಹುತಗಳ ವಿರುದ್ಧ ಕರ್ನಾಟಕವು ಸೇರಿದಂತೆ ದೇಶಾದ್ಯಂತ ನಡೆಸಿದ ನಿರಂತರ ಜನಾಂದೋಲನದ ಕುರಿತು ಪರಿಚಯಿಸಿದರು. ಸಣ್ಣ ಕೈಗಾರಿಕೋದ್ಯಮಗಳು ಈ ಪ್ರಮುಖ ಕ್ಷೇತ್ರದ ರಕ್ಷಣೆಗಾಗಿ ನಡೆಸುತ್ತಿರುವ ಎಲ್ಲಾ ಪ್ರಯತ್ನಗಳಿಗೆ ವೇದಿಕೆಯ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಸಣ್ಣ ಕೈಗಾರಿಕೆಗಳನ್ನು ಉಳಿಸಲು ಪ್ರಧಾನ ಮಂತ್ರಿ ಮತ್ತು ಮುಖ್ಯಮಂತ್ರಿಗಳಿಗೆ ಮನವಿ - ವಿ.ಆರ.ಮೂಲೆಕೊಪ್ಪ ಮಠ

ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್‌ನಹಿರಿಯ ಉಪಾಧ್ಯಕ್ಷರಾದ ವಿ.ಆರ್.ಮೂಲೆಕೊಪ್ಪ ಮಠ ತಮ್ಮ ಮುಕ್ತಾಯ ಭಾಷಣದಲ್ಲಿ ವಿಚಾರಗೋಷ್ಠಿಯಲ್ಲಿ ಸಣ್ಣ ಕೈಗಾರಿಕೆಗಳಕುರಿತು ನಡೆದ ಅರ್ಥಪೂರ್ಣ ಚರ್ಚೆಯಲ್ಲಿ ಪಾಲುಗೊಂಡವರನ್ನು ಅಭಿನಂದಿಸಿದರು. ಸಣ್ಣ ಕೈಗಾರಿಕೆಗಳ ಸಮಸ್ಯೆಗಳ ಹಾಗೂ ಅವುಗಳ ತುರ್ತುಪರಿಹಾರದ ಕುರಿತು ವಿಚಾರಗೋಷ್ಠಿ ಏರ್ಪಡಿಸಿದ ಮೂರು ಸಂಘಟನೆಗಳು ಜಂಟಿಯಾಗಿ ಪ್ರಧಾನ ಮಂತ್ರಿಗಳಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಬೇಕೆಂದರು. ಸಣ್ಣ ಕೈಗಾರಿಕೆಗಳ ಸಂಘದ ಬುರುಬುರೇ ವಂದನೆ ಸಲ್ಲಿಸಿದರು.

.......ಆಲೂಗಡ್ಡೆ ರೈತರ ಸರದಿ

ಪುಟ 3 ರಿಂದ

ಧೈರ್ಯವೇ ಉಡುಗಿಹೋಗಿ ಇಡೀ ನನ್ನ ಕುಟುಂಬವೇ ಬೀದಿ ಪಾಲಾಗುತ್ತದೆಂಬ ಚಿಂತೆ ಪುಟ್ಟೇಗೌಡರ ತಲೆ ಹತ್ತಿತು. ಅಷ್ಟರಲ್ಲಿ ಸಾಲಗಾರರ ಜೊತೆ ಜಗಳವಾಗಿ ಮಾನ ಕಳೆದುಕೊಂಡು ಪಂಚಾಯ್ತಿಯಲ್ಲಿ ಎರಡು ದಿನಗಳಲ್ಲಿ ಸಾಲ ಮರುಪಾವತಿ ಮಾಡಲು ನಿರ್ಧರಿಸಲಾಗಿತ್ತು. ಬ್ಯಾಂಕ್‌ನವರು ನೀಡುತ್ತಿದ್ದ ಕಿರುಕುಳ ಜಾಸ್ತಿಯಾಗಿತ್ತು. ಇದಕ್ಕೆಲ್ಲ ಕಳಶವಿಟ್ಟಂತೆ ಆಲೂಗಡ್ಡೆ ಕೇವಲ ಕ್ವಿಂಟಾಲ್‌ಗೆ 225 ರೂ.ಗಳಂತೆ ಮಾರಾಟವಾದಾಗ ಆತ ತಾನು ಸಂಪೂರ್ಣ ಮುಳುಗಿಹೋದಂತಾಗಿ ತನ್ನಮಾನ ಕಾಪಾಡಿಕೊಳ್ಳಲು ಆಲೂಗಡ್ಡೆ ವ್ಯಾಪಾರ ಮಾಡಿದ ದಿನ, ಆತ ಬೆಳೆದ ಆಲೂಗಡ್ಡೆ ಬೆಳೆ ರಾಶಿಯ ಬಳಿಯಲ್ಲಿಯೇ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು.

ಈಗ ಆತನ ಕುಟುಂಬಕ್ಕೆ ಕಾಡಿನಲ್ಲಿ ಕಣ್ಣುಕಟ್ಟಿ ಬಿಟ್ಟಂತೆ ಪರಿಸ್ಥಿತಿ ಯಾವ ವ್ಯವಹಾರವೂ ಗೊತ್ತಿರದೇ ..... ಸಾಲಗಾರರು ತಮ್ಮ ಮನೆಬಾಗಿಲನ್ನು ತಟ್ಟುತ್ತಾರೋ ಎಂಬ ಆತಂಕದಿಂದ ಬದುಕುವಂತಾಗಿದೆ. 1.5 ಲಕ್ಷ ಸಾಲವನ್ನು ಇಡೀ ಕುಟುಂಬದ ತಲೆಮೇಲೆ ಹೊರಿಸಿ ಪುಟ್ಟೇಗೌಡ ಕಣ್ಮರೆಯಾಗಿದ್ದಾರೆ.

ಇದು ಮೇಲ್ನೋಟಕ್ಕೆ ಒಂದು ಸಾಮಾನ್ಯ ಆತ್ಮಹತ್ಯೆ ಪ್ರಕರಣದಂತೆ ಕಂಡರೂ ಇನ್ನೊಂದು ರೀತಿಯಲ್ಲಿ ಇಡೀ ದೇಶದ ರೈತವರ್ಗದ ಕಣ್ಣೀರ ಕಥೆಯಂತಿದೆ. ನಮ್ಮ ಸರ್ಕಾರಗಳು ಅನುಸರಿಸುತ್ತಿರುವ ಕೃಷಿನೀತಿ ಆಮದು ನೀತಿಗಳ ಪರಿಣಾಮವನ್ನು ಬಡ ರೈತ ಕುಟುಂಬಗಳು ಎದುರಿಸುತ್ತಿವೆ. ಆಲೂಗಡ್ಡೆ ಬೆಳೆ ಹಾಸನ ಜಿಲ್ಲೆಯ ಅತಿಮುಖ್ಯ ವಾಣಿಜ್ಯ ಬೆಳೆಯಾಗಿದ್ದು, ವರ್ಷದಿಂದ ವರ್ಷಕ್ಕೆ ಇದರ ಉತ್ಪಾದನೆ ಹೆಚ್ಚುತ್ತಿದ್ದರೂ ಸಹ ಈ ಬೆಳೆಗೆ ಇನ್ನೂ ಬೆಂಬಲ ಬೆಲೆ ನಿಗದಿ ಮಾಡದೆ ಕುಳಿತಿರುವ ಸರ್ಕಾರಕ್ಕೆ ಏನನ್ನಬೇಕು? ಜೊತೆಗೆ ದುಬಾರಿ ಬೀಜ, ಬೆಳೆ ಬರದೆ ಬಂದರೂ ಬೆಲೆ ಸಿಗದೆ ಕಂಗಾಲಾಗಿರುವ ರೈತ ಕುಟುಂಬವನ್ನು ರಕ್ಷಿಸುವ ಹೊಣೆ ಸರ್ಕಾರದ್ದಲ್ಲವೇ? ಈ ಕಳಪೆ ಬೀಜ, ಗೊಬ್ಬರ, ತಯಾರಕರು, ಮಾರಾಟಗಾರರ ಮೇಲೆ ಕ್ರಮವಿಲ್ಲವೇ?

ಮಾಹಿತಿ ತಂತ್ರಜ್ಞಾನದ ಹೆಸರಿನಲ್ಲಿ ಸಾವಿರಾರು ಕೋಟಿ ಹಣ ಸುರಿಯುವ ಸರ್ಕಾರಕ್ಕೆ ಈ ಬಡ ರೈತನ ಗೋಳು ಹೇಗೆ ಕೇಳಿಸುತ್ತದೆ. ಆಲೂಗಡ್ಡೆ ಬೆಳೆಗೆ ಇನ್ನೂ ಬೆಂಬಲ ಬೆಲೆ ನಿಗದಿ ಮಾಡದೇ ಇದ್ದರೂ ರೈತ ಆಲೂಗಡ್ಡೆ ಬೆಳೆಯನ್ನು ಲಾಟರಿ ಮತ್ತು ಜೂಜುಗಳ ಹಿಂದೆ ಬಿದ್ದಂತೆ ಹಿಂಬಾಲಿಸುತ್ತಿದ್ದಾನೆ. ಇದು ಹೀಗೆ ಮುಂದುವರೆದರೆ ಪುಟ್ಟೇಗೌಡನ ಆತ್ಮಹತ್ಯೆ ಪ್ರಕರಣ ಜಿಲ್ಲೆಯ ರೈತರಿಗೆ ಮೇಲ್ಪಂಕ್ತಿಯಾಗುವುದರಲ್ಲಿ ಅನುಮಾನವೇ ಇಲ್ಲ.

ಆದ್ದರಿಂದ ಸರ್ಕಾರ ಮೃತ ಪುಟ್ಟೇಗೌಡರ ಕುಟುಂಬದ ಕಡೆಗೆ ಗಮನಹರಿಸಿ ಪರಿಹಾರ ನೀಡುವ ಅವಶ್ಯಕತೆ ಇದೆ. ಹಾಗೂ ಕೃಷಿಕ್ಷೇತ್ರದ ಮೇಲಿನ ಸಬ್ಸಿಡಿ ಹೆಚ್ಚಿಸಿ ಬೆಳೆದ ಬೆಳೆಗೆ ಬೆಂಬಲ ಬೆಲೆ ನಿಗದಿಪಡಿಸಿ ವ್ಯಾಪಾರದಲ್ಲಿ ದಲ್ಲಾಳಿಗಳ ಕಾಳ ಸಂತೆಕೋರರ ಹಸ್ತಕ್ಷೇಪ ನಿಲ್ಲಿಸದಿದ್ದರೆ ಇಂತಹ ಆತ್ಮಹತ್ಯೆ ಪ್ರಕರಣಗಳಿಂದ ಇಡೀ ರೈತ ಸಮೂಹವೇ ನರಳುವ ಹಂತ ತಲುಪುತ್ತದೆ.

ಅಲ್ಲದೇ ಇವೆಲ್ಲದರ ವಿರುದ್ಧ ನಮ್ಮ ರೈತ ವರ್ಗ ಸಂಘಟಿತರಾಗಿ ಹೋರಾಡುವ ಪರಿಸ್ಥಿತಿ ಇಂದು ಹೆಚ್ಚಿದೆ. ಇಲ್ಲದಿದ್ದರೆ ಪ್ರತಿಯೊಂದು ಕುಟುಂಬದಲ್ಲಿಯೂ ಈ ಪ್ರಕರಣ ಮರುಕಳಿಸುವ ಸಾಧ್ಯತೆ ಇದೆ.

ವರದಿ:ಧರ್ಮೇಶ್, ಹಾಸನ,

ಚಿತ್ರಗಳು: ಹೆಚ್.ಆರ್.ನವೀನ್ ಕುಮಾರ್

ಐತಿಹಾಸಿಕ ಸಮ್ಮೇಳನ

ಪುಟ 5 ರಿಂದ

ಸರ್ವಾನುಮತದಿಂದ ಅಂಗೀಕಾರವಾಯಿತು. ಇದು ಅಭೂತಪೂರ್ವವಾದುದು.

ಸಮ್ಮೇಳನದ ಎಲ್ಲಾ ಕಲಾಪಗಳೂ ಗಂಭೀರ-ಅರ್ಥಪೂರ್ಣ. ಸಮ್ಮೇಳನದ ಸ್ಥಳ ಸುಪ್ರಸಿದ್ಧ ಎ.ಕೆ.ಜಿ. ಸೆಂಟರ್‌ನ ಸಭಾಂಗಣದಲ್ಲಿ, 20 ರಂದು ಬೆಳಿಗ್ಗೆ ಹಿರಿಯ ಸಂಗಾತಿ, ತೆಲಂಗಾಣ ವೀರಹೋರಾಟದ ನಾಯಕರಾಗಿದ್ದ ನಂಡೂರಿ ಪ್ರಸಾದ್‌ರಾವ್ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಶ್ರದ್ಧಾಂಜಲಿ ಬಳಿಕ ಉದ್ಘಾಟನೆ. ಕಾಂ. ಜ್ಯೋತಿಬಸು, ಕಾಂ. ಉಮಾನಾಥ್, ಮಲ್ಲು ಸ್ವರಾಜ್ಯಂ, ಗಣೇಶ್ ಶಂಕರ್ ವಿದ್ಯಾರ್ಥಿ, ಪಳಗೋಲಿ ಮಹ್ಮದ್ ಕುಟ್ಟಿಯವರುಳ್ಳ ಅಧ್ಯಕ್ಷ ಮಂಡಳಿ ರಚಿತವಾಯಿತು. ನಂತರ ಅಧಿವೇಶನದಲ್ಲಿ ಕಾಂ.ಸುರ್ಜಿತ್ ಕರಡನ್ನು, ಕಾಂ.ಪ್ರಕಾಶ್ ಕಾರಟ್ ತಿದ್ದುಪಡಿಗಳನ್ನು ಮಂಡಿಸಿದರು. 21 ಮತ್ತು 22 ರಂದು 42 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಕರ್ನಾಟಕದಿಂದ ಕಾಂ. ಜಿ.ಎನ್.ನಾಗರಾಜ್ ಮಾತನಾಡಿದರು. ಕರ್ನಾಟಕದಿಂದ ಕಾಂ. ಜಿ.ಎನ್.ನಾಗರಾಜ್, ಜಿ.ವಿ.ಶ್ರೀರಾಮರೆಡ್ಡಿ, ಮಾರುತಿ ಮಾನ್ಪಡೆ, ವಿ.ಜೆ.ಕೆ.ನಾಯರ್, ಎಸ್.ವೈ.ಗುರುಶಾಂತ್ ಪ್ರತಿನಿಧಿಗಳಾಗಿ ಪಾಲ್ಗೊಂಡಿದ್ದರು.

ಕೋಮುವಾದದ ವಿರೋಧಿಸಿ ಹೋರಾಟ, ಆರ್ಥಿಕ ನೀತಿಗಳಿಗೆ ಪ್ರತಿರೋಧ, ಬೆಲೆಏರಿಕೆ ವಿರೋಧಸಿ, ಪ್ಯಾಲೆಸ್ಟೇನಿಯನ್ ಜನತೆಗೆ ಬೆಂಬಲ, ಕೇರಳದ ಕೊಲ್ಲಂನಲ್ಲಿ ಸಾರಾಯಿ ದುರಂತದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಮುಂತಾದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಈ ಸಮ್ಮೇಳನದ ಸಂದರ್ಭದಲ್ಲೇ ಹಲವಾರು ಪ್ರಮುಖ ವಿಚಾರ ಸಂಕಿರಣಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿತ್ತು. 22 ರಂದು 'ಕೇಂದ್ರ-ರಾಜ್ಯಗಳ ಸಂಬಂಧ' ಕುರಿತ ಅತೀ ಮಹತ್ವದ ವಿಚಾರ ಸಂಕಿರಣವೂ ನಡೆಯಿತು. ಮಾಜಿ ಪ್ರಧಾನಿ ದೇವೇಗೌಡ, ಆರ್‌ಜೆಡಿ ಅಧ್ಯಕ್ಷ ಲಲ್ಲೂ ಪ್ರಸಾದ್ ಯಾದವ್, ಅಸ್ಸಾಂ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ್ ಮಹಂತೋ, ಜ್ಯೋತಿಬಸು, ಇ.ಕೆ.ನಾಯನಾರ್, ಮಾಣಿಕ್ ಸರ್ಕಾರ್, ಸುರ್ಜಿತ್, ಸಿಪಿಐ ನ ನಾಯಕ ಎ.ಬಿ.ಬರ್ದನ್‌ರವರು ವಿಚಾರ ಮಂಡಿಸಿದರು. ದೇಶದ ಇಂದಿನ ಸ್ಥಿತಿಯಲ್ಲಿ ಮೂರನೇ ಪರ್ಯಾಯ ರೂಪುಗೊಳ್ಳುವ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣ ಅತೀ ಮಹತ್ವದ್ದು.

ಅಲ್ಲದೇ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು. ಕಾಂ. ಇ.ಎಂ.ಎಸ್.ರವರ ಬದುಕು-ಹೋರಾಟ ಕುರಿತ ನಾಟಕ ಗಮನಾರ್ಹವಾಗಿತ್ತು. ಕಳೆದ ಹಲವಾರು ದಶಕಗಳ ಇತಿಹಾಸವನ್ನು ಬಿಚ್ಚಿಟ್ಟದ್ದು ದೇಶಾಭಿಮಾನಿ ಪತ್ರಿಕೆಯ ವಸ್ತುಪ್ರದರ್ಶನ. ಹಾಗೆ ಪುಸ್ತಕ ಪ್ರದರ್ಶನ ಸಹ ಯೋಜಿತವಾಗಿತ್ತು.

ಸಮ್ಮೇಳನದ ಕೊನೆಯ ಭಾಗವಾಗಿ ನಡೆದಿದ್ದು ಬೃಹತ್ತಾದ ರ್‍ಯಾಲಿ. ಶಂಖಾಮುಖಂ ಮೈದಾನದಲ್ಲಿ ನಡೆದ ಸಭೆಯಲ್ಲಿ ಒಂದು ಲಕ್ಷ ಜನತೆ ಸೇರಿದ್ದರು. ಹಿಂದೆ 1964 ರಲ್ಲಿ ಕಲ್ಕತ್ತಾದಲ್ಲಿ ಸಹ ಕಾರ್ಯಕ್ರಮ ಅಂಗೀಕಾರ ಆದ ಬಳಿಕ ಲಕ್ಷಾಂತರ ಜನತೆ ಅಣಿನೆರೆದು ಸಿಪಿಐ(ಎಂ) ಮಾತ್ರವೇ ನಿಜವಾದ ಕಮ್ಯುನಿಸ್ಟ್ ಪಕ್ಷ ಎಂದು ಬೆಂಬಲಿಸಿದ್ದರು. ಈಗಲೂ ಅದೇ ಬದ್ಧತೆ, ಬೆಂಬಲ, ಸ್ಫೂರ್ತಿ ನೀಡಿದ್ದು ಕೇರಳದ ಜನತೆ. ಈ ಸಮ್ಮೇಳನಕ್ಕೆ ಸಹ ಒಂದೇ ದಿನದಲ್ಲಿ ಮನೆಮನೆಯಿಂದ ಹುಂಡಿ ಮೂಲಕ ನಿಧಿ ಸಂಗ್ರಹಿಸಲಾಗಿತ್ತು. ಒಂದು ಜಿಲ್ಲೆಯಲ್ಲಿಯೇ ಹತ್ತು ಲಕ್ಷ ಸಂಗ್ರಹವಾದದ್ದು ಜನರ ಪ್ರೀತಿಯ ದ್ಯೋತಕ. ಸಮ್ಮೇಳನ ಮುಕ್ತಾಯಗೊಂಡಾಗ ಎಲ್ಲರಲ್ಲೂ ಸ್ಫೂರ್ತಿ ಚಿಲುಮೆ. ಅಂತರ್‌ರಾಷ್ಟ್ರೀಯತೆ ಹಾಡು ವಿಶ್ವದ ಶ್ರಮಜೀವಿಗಳೊಂದಿಗೆ ಬೆಸೆದ ಹೆಗಲ ಬಳ್ಳಿ ಚಿಗುರುತ್ತಲೇ ಹೋದ ಅನುಭವ.

ಪಡಿತರ ವ್ಯವಸ್ಥೆ: ಕರ್ಮಕಾಂಡಗಳು

ಕುರುಗೋಡು ವಿಭಾಗದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಭಾಗವಾಗಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅಕ್ರಮ, ದೌರ್ಜನ್ಯ, ರಾಜಕೀಯಗಳಿಗೆ ಬೇಸತ್ತ ಜನ ಹೋರಾಟದ ಕಣಕ್ಕೆ ಇಳಿದಿದ್ದಾರೆ. ಕನಿಷ್ಟ ಕೂಲಿ ಇಲ್ಲದೆ, ಬೆಲೆ ಏರಿಕೆಯ ಬಿಸಿಯಲ್ಲಿ ತತ್ತರಿಸಿರುವ ಜನತೆಗೆ ಸ್ವಲ್ಪಮಟ್ಟಿಗಾದರೂ ಆಸರೆಯಾಗುವ ನ್ಯಾಯಬೆಲೆ ಅಂಗಡಿಗಳು ಉಳಿಯುವವೇ? ಇಂಥಹ ಸನ್ನಿವೇಶದಲ್ಲಿ ಸರಕಾರದ ನಿಲುವುಗಳು ಕೂಲಿ ಜನರ ಹಿತಗಳನ್ನು ರಕ್ಷಿಸುವುವೇ? ಬೆಲೆ ಏರಿಕೆಯ ಬಿಸಿ ತಾಪದಿಂದ ಜನತೆಯನ್ನು ಪಾರು ಮಾಡುತ್ತೇವೆಯೇ? ಹತ್ತು ಹಲವು ಆತಂಕದ ಪ್ರಶ್ನೆಗಳು ಕೂಲಿ ಜನರನ್ನು ಪ್ರಶ್ನೆಗಳು ಕಾಡುತ್ತವೆ.

ಪಿ.ಆರ್.ವೆಂಕಟೇಶ್
ಕುರುಗೋಡು, ಬಳ್ಳಾರಿ ಜಿಲ್ಲೆ

ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಎನ್‌ಡಿಎ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರಗಳು ಆಳ್ವಿಕೆಗೆ ಬಂದ ನಂತರ ಈ ಪಡಿತರ ವ್ಯವಸ್ಥೆಯ ಮೇಲೆ ಹೊಸ ಆರ್ಥಿಕ ನೀತಿಯ ಮೂಲಕ ತೀವ್ರದಾಳಿ ನಡೆಸಿವೆ ಹಾಗೂ ಪಡಿತರ ಪದ್ಧತಿಯನ್ನೇ ಮುಗಿಸಿಬಿಡುವ ಹುನ್ನಾರ ನಡೆಸಿವೆ.

1. ಅ) ನ್ಯಾಯಬೆಲೆ ಅಂಗಡಿಗಳು: ಈ ಅಂಗಡಿಗಳು ಯಾರ ಕೈಯಲ್ಲಿ ಇರಬಾರದೋ ಅವರ ಕೈಯಲ್ಲೇ ನಲುಗುತ್ತಿವೆ. ಕೆಲವು ಹಳ್ಳಿಗಳಲ್ಲಿ ನ್ಯಾಯಬೆಲೆ ಅಂಗಡಿ ಮುಂದೆ ಹೋಗಲು ಕೂಲಿಕಾರರು ಹೆದರುತ್ತಾರೆ. "ತುಟಿಪಿಟಿಕ್ ಅನ್ನಂಗಿಲ್ಲ. ಅವರಾಗಿ ಕೊಟ್ರೆ ಹಾಕ್ಸಿಕೊಂಡು ಬರ್ತೀವಿ, ಇಲ್ಲಂದ್ರ ಇಲ್ಲ" ಕೆಲವುಕಡೆ ಕೂಲಿಕಾರರು ಏನಾದರೂ ಮಾತನಾಡಿದರೆ (ಮಾಲಿಕರ ಅರ್ಥದಲ್ಲಿ ಯಡವಟ್ಟು ಮಾತನಾಡಿದರೆ, ಕಪಾಳದಮೇಲೆ ಬಾಸುಂಡೆ ಮೂಡುತ್ತವೆ. ರೇಷನ್ ಬಂದು 2 ಅಥವಾ 3 ದಿನಗಳಿಗೇ ಮುಗಿದು ಹೋಗುತ್ತದೆ. ನಂತರ ಹೋದ ಕಾರ್ಡುದಾರರಿಗೆ ರೇಷನ್ ಇಲ್ಲ. "ಬದುಕಿತ್ತು ಧಣಿ" ಎಂದರೆ "ನಾನೇನಾಡ್ಲಿ ರೇಷನ್ ಮುಗುದ್ಯೆತೆ, ಮುಂದಿನ ತಡವು ದೌಡುಬಾ" ಇನ್ನೂ ಹೆಚ್ಚು ಮಾತನಾಡಿದರೆ "ಲೇ.... ಸೂ..... ಮಗನೆ......." ಬೈಗಳ ಸುರಿಮಳೆ. ತಾವೇನೋ ಉಪಕಾರ ಮಾಡುವರಂತೆ ಅಂಗಡಿ ಮಾಲೀಕರು ನಡೆದುಕೊಳ್ಳುತ್ತಾರೆ. ಹೀಗಾಗಿ ಎಷ್ಟೋ ಕಾರ್ಡುದಾರರಿಗೆ ಪ್ರತಿತಿಂಗಳು ಸರಿಯಾಗಿ ರೇಷನ್ ಸಿಗದಿದ್ದರೂ ಎಲ್ಲಾ ಕಾರ್ಡುದಾರರಿಗೆ ರೇಷನ್ ವಿತರಿಸಲಾಗಿದ್ದಕ್ಕೆ ಅಚ್ಚುಕಟ್ಟಾದ ಲೆಕ್ಕ ಮಾತ್ರ ಸರಿ ಇರುತ್ತದೆ. ತೂಕದ ವಿಷಯ ಬಂದಾಗ 10 ಕೆ.ಜಿ.ಗೆ 2 ಕೆ.ಜಿ. ಕಡಿಮೆ. ಕೆಲವೆಡೆ ತೂಕವೇ ಇಲ್ಲ.ಯಾವುದೋ ಒಂದು ಅಳತೆಯ ಡಬ್ಬ ತುಂಬಿ ಹಾಕುತ್ತಾರೆ. ಕೇಳಿದರೆ "ನಾವು ಕೊಡೋದೇ ಹೀಗೆ. ಬೇಕಿದ್ರೆ ತಗೋ ಇಲ್ಲರೆದ್ರ ಬಿಡು". ಇನ್ನೂ ಕೆಲವೆಡೆ ನ್ಯಾಯಬೆಲೆ ಅಂಗಡಿಯವರೇ ಖುದ್ದಾಗಿ ಯ್ಯಾರ್ಯಾರದೋ ಹೆಸರಿನಲ್ಲಿ 20 ರಿಂದ 25 ರೇಷನ್ ಕಾರ್ಡುಗಳನ್ನು ತಾವೇ ಇಟ್ಟುಕೊಂಡಿರುತ್ತಾರೆ. ಕೆಲ ಮಧ್ಯಮ ವರ್ಗದ ಜನ "ಹಿಂಗಲ್ಲಾ ಮಾಡಿದ್ರೆ ಸರಿಕಾಣದಿಲ್ಲ, ಮ್ಯಾಗ ತಿಳುಸ್ತಿನಿ" ಎಂದರೆ "ಯಾವನಿಗೆ ಹೇಳ್ತಿಯೋ ಹೇಳು ಹೋಗು" ಎಂಬ ಉತ್ತರ. ಇವರಿಗೆ ಕಾನೂನಿನ, ಅಧಿಕಾರಿಗಳ ಬಗ್ಗೆ ಕಿಂಚಿತ್ತೂ ಅಂಜಿಕೆ ಇಲ್ಲ. ಅನೇಕ ವೇಳೆ ಆಹಾರ ಇಲಾಖೆಯ ಅಧಿಕಾರಿಗಳು ಅಂಗಡಿ ಮಾಲೀಕರ ಪರವೇ ವಾದಿಸುತ್ತಾರೆ. ಏಕೆಂದರೆ ಆಹಾರ ಇಲಾಖೆಯಲ್ಲಿ ಅಧಿಕಾರಿಗಳಿಲ್ಲ ಬರೀ ಲಂಚ ತಿನ್ನುವ ಹೆಗ್ಗಣಗಳೇ ತುಂಬಿವೆ.

ನ್ಯಾಯ ಬೆಲೆ ಅಂಗಡಿಗಳಿಗೆ ಒಟ್ಟು ಕಾರ್ಡುದಾರರ ಒಟ್ಟು ಯೂನಿಟ್‌ಗಳ ಲೆಕ್ಕದ ಪ್ರಕಾರ ಸರಕಾರವು ದಾಸ್ತಾನು ಕಳಿಸುತ್ತದೆ. ಕೊಂಬದೇ ಇರುವ ಕಾರ್ಡುಗಳ ಪಾಲಿನ ಉಳಿದ ದಾಸ್ತಾನು ಏನಾಗುತ್ತದೆ? ಎಲ್ಲಿಗೆ ಹೋಗುತ್ತದೆ? ಬಹುತೇಕ ಹಳ್ಳಿಗಳಲ್ಲಿ ಭೂಮಾಲಿಕರು ಅಥವಾ ಶ್ರೀಮಂತರೇ ನ್ಯಾಯ ಬೆಲೆ ಅಂಗಡಿಗಳನ್ನು ನಡೆಸುತ್ತಾರೆ.

ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಿಸುವ ದಾಸ್ತಾನು ಅತ್ಯಂತ ಕಳಪೆ ಗುಣಮಟ್ಟದ್ದು. ಕತ್ತೆ ಕೂಡಾ ಮೂಸಿ ನೋಡಲಾರದ ಅಕ್ಕಿ, ಗಬ್ಬುವಾಸನೆ, ಕರಿ ಬಣ್ಣಕ್ಕೆ ತಿರುಗಿದ ವಿಚಿತ್ರ ಅಕ್ಕಿ. "ಮೂರು ಮೂರು ಸಲ ತೊಳದ್ರು ವಾಸನೆ ಹೋಗಲ್ಲ.ಅನ್ನ ತಿಂದ ಕೂಡ್ಲೆ ಬೇಧಿ ಶುರು" ಎನ್ನುತ್ತಾರೆ ಜನ. ಕೆಲವೊಮ್ಮೆ ಸೊಸೈಟಿಯ ಉಗ್ರಾಣ ಹೊಕ್ಕು, ನೋಡಿದರೆ ಒಳ್ಳೆಯ ಅಕ್ಕಿ ತುಂಬಿದ ಚೀಲದ ಸಾಲು ಸಾಲು ನಿಟ್ಟು ಪೂರಾ ಹಿಂದುಗಡೆ ಇರುತ್ತದೆ. ಈ ಎಲ್ಲಾ ಅನಿಷ್ಟಗಳ ಜೊತೆಗೆ ಬೆಲೆ ಏರಿಕೆ ಎಲ್ಲಾ ದಾಸ್ತಾನುಗಳ ಬೆಲೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಲಾಜಿಲ್ಲದೇ ಬೆಲೆಗಳನ್ನು ಏರಿಸಿವೆ. "ಏನ್ ನ್ಯಾಯ ಬೆಲೆ ಅಂಗಡಿ ಸ್ವಾಮಿ, 1 ರೂ.ಜಾಸ್ತಿ ಕೊಟ್ರೆ ಮಸೂರಿ ನುಚ್ಚು ತಿನ್ನಬೋದು" ಎನ್ನುತ್ತಾರೆ ಜನ. ಈಗ ನ್ಯಾಯ ಬೆಲೆ ಅಂಗಡಿಗಳತ್ತ ಜನ ಇಣುಕಿ ಸಹ ನೋಡುತ್ತಿಲ್ಲ. ಇವೆಲ್ಲವನ್ನೂ ಗಮನಿಸಿದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಬಗ್ಗೆ ಸರಕಾರಗಳು ಅತ್ಯಂತ ನಿರ್ಲಕ್ಷ್ಯ ವಹಿಸಿವೆ ಅಷ್ಟೇ ಅಲ್ಲ, ಆದಷ್ಟು ಬೇಗ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಿ ಹಾಕುವ ಹುನ್ನಾರ ನಡೆಸಿವೆ.

ಸರಕಾರದ ಸುಳ್ಳುಗಳು: ಜನತೆಯ ಹೋರಾಟದ ಹೊಡೆತಗಳಿಂದ ತಪ್ಪಿಸಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸುಳ್ಳು ಹೇಳುವ ಸರ್ಕಸ್ ನಡೆಸಿವೆ. ಬಡವರಿಗೆ ಪಡಿತರ ವ್ಯವಸ್ಥೆಯ ಮೂಲಕ ಆಹಾರ ಧಾನ್ಯಗಳನ್ನು ಹಂಚುವುದರಿಂದ ಕೋಟಿಗಟ್ಟಲೆ ಹಣ ನಷ್ಟವಾಗುತ್ತಿದೆಯಂತೆ. ಆದ್ದರಿಂದ ಬಡಜನರು ಹೊಟ್ಟೆ ಕಟ್ಟಬೇಕಂತೆ, ದೇಶದ ಪ್ರಧಾನಿ, ಡಾಲರ್ ಧಣಿಗಳ ಪೂಜಾರಿ ವಾಜಪೇಯಿ ಹೇಳುವ ಮಾತು. ಎಡರಂಗ ಆಳ್ವಿಕೆಯ ರಾಜ್ಯಗಳಲ್ಲಿ ಪಡಿತರ ವ್ಯವಸ್ಥೆಯನ್ನು ಹೆಚ್ಚು ವ್ಯಾಪಕಗೊಳಿಸಿ, 16 ಅತ್ಯಾವಶ್ಯಕ ಒಳ್ಳೆ ಗುಣಮಟ್ಟದ ವಸ್ತುಗಳನ್ನು ಬಹಳ ದೀರ್ಘ ಕಾಲದಿಂದ ಬಡವರಿಗೆ ವಿತರಿಸುತ್ತಿದ್ದರೂ, ಪಡಿತರ ವ್ಯವಸ್ಥೆಯಿಂದ ನಷ್ಟವಿದೆ ಎಂದು ಎಂದೂ ಹೇಳುತ್ತಿಲ್ಲ. ಬರೀ ಮೂರೇ ಮೂರು ಸಾಮಾನುಗಳನ್ನು ಹಂಚುವ ಕರ್ನಾಟಕ ಸರಕಾರಕ್ಕೆ ನಷ್ಟ ಹೇಗೆ? ತೈಲ ರಫ್ತು ದೇಶ ಬೆಲೆ ಏರಿಸಿದ ಕಾರಣ ಸೀಮೆಎಣ್ಣೆ ಬೆಲೆ ಏರಿಸಲಾಗಿದೆ ಎಂಬ ಸುಳ್ಳಿನ ಹಿಂದೆಯೇ ರಫ್ತು ದೇಶಗಳು ಬೆಲೆ ಇಳಿಸಿದ್ದರೂ, ತಾವು ಮಾತ್ರ ಏರಿದ ಬೆಲೆಯನ್ನು ಇನ್ನಷ್ಟು ಏರಿಸಿ ಬಡವರು ಸೀಮೆಎಣ್ಣೆಯನ್ನು ಕೊಂಬದ ಹಾಗೆ ಮಾಡಿ ಅವರ ಗುಡಿಸಲಲ್ಲಿ ಕತ್ತಲು ಖಾಯಂ ಉಳಿಯುವಂತೆ ಮಾಡಿರುವುದು ನ್ಯಾಯವೇ?

ಕಳೆದ ಮೂರು ವರ್ಷಗಳಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆಯಾಗಿ 1995-96 ರ ಅಂತ್ಯಕ್ಕೆ ಇನ್ನೂ ಏರಿಕೆಯಾಯ್ತು. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಹಸಿರು ಕಾರ್ಡುದಾರರಿಗೆ 10 ಕೆ.ಜಿ. ಅಕ್ಕಿ ವಿತರಿಸಿತು. 1 ಕೆ.ಜಿ.ಗೆ 3.20 ರೂ. ಬೆಲೆಗೆ ಕೊಡಲು ನಿರ್ಧರಿಸಿತ್ತು. ಪರಿಣಾಮವಾಗಿ ರೇಷನ್ ಅಂಗಡಿಗಳಲ್ಲಿ ಕೊಂಬದೇ ಇದ್ದ ಅಕ್ಕಿಯನ್ನು ಜನ ಕೊಳ್ಳಲಾರಂಭಿಸಿದರು. 1994-95 ನೇ ಸಾಲಿನಲ್ಲಿ 1 ಲ. 28 ಸಾ. ಟನ್ ಅಕ್ಕಿ ಮಾರಾಟವಾಗಿದ್ದರೆ 95-96 ನೇ ಸಾಲಿನಲ್ಲಿ 2 ಲ. 64 ಸಾ. ಟನ್ ಅಕ್ಕಿ ಮಾರಾಟವಾಯ್ತು. ಆದರೆ ಕೇಂದ್ರ ಸರಕಾರ ಸರಕಾರಕ್ಕೆ ನಷ್ಟವೆಂಬ ನೆಪಒಡ್ಡಿ ಪ್ರತಿ ತಿಂಗಳು ಕಳಿಸುತ್ತಿದ್ದ 1.2 ಲ.ಟನ್ ಅಕ್ಕಿಯಲ್ಲಿ 75 ಸಾ.ಟನ್ ಅಕ್ಕಿಯನ್ನು ಕಡಿತ ಮಾಡಿತು. ಅಲ್ಲದೆ ವಿಶ್ವಬ್ಯಾಂಕ್, ಐ.ಎಂ.ಎಫ್. ಗಳ ಕಟ್ಟಾಜ್ಞೆಗಳನ್ನು ಶಿರಸಾವಹಿಸಿ ಪಡಿತರದ ಮೇಲಿನ ಸಹಾಯಧನವನ್ನು ಕಡಿತಮಾಡಿತು. ಅಲ್ಲದೆ ಪುನಃ ಬೆಲೆ ಏರಿಸಿ ಬಡವರ್ನು ನ್ಯಾಯಬೆಲೆ ಅಂಗಡಿಗಳಿಗೆ ಬಾರದಂತೆ ಮಾಡಿತು. ಅದೇ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಕಾರ್ಡ್‌ಗಳನ್ನು ಬದಲಿಸುವ ನೆಪದಲ್ಲಿ, ತ್ರಿವರ್ಣ ಧ್ವಜದ ಕಾರ್ಡುಗಳನ್ನು ನೀಡುವ ಹೆಸರಿನಲ್ಲಿ ಬಡವರಿಗಿದ್ದ ಅನೇಕ ಕಾರ್ಡುಗಳನ್ನು ರದ್ದು ಮಾಡಿತು.

ಈಗ ಪುನಃ ರಾಜ್ಯ ಸರ್ಕಾರವು ಇರುವ ಹಸಿರುವ ಕಾರ್ಡುಗಳನ್ನು ಬದಲಿಸಲು ಹೊರಟಿದೆ. ಬದಲಿಸುವ ಉದ್ದೇಶವನ್ನು ಹೀಗೆ ಹೇಳಿದೆ - ಖೋಟಾ ಹಸಿರು ಕಾರ್ಡುದಾರರಿದ್ದಾರೆ, ಕೆಲವು ಶ್ರೀಮಂತರೂ ಕಾರ್ಡುಗಳನ್ನು ಹೊಂದಿದ್ದಾರೆ. ಆದ್ದರಿಂದ ಅಂತಹ ಕಾರ್ಡುಗಳನ್ನು ರದ್ದು ಮಾಡಿ ನಿಜವಾದ ಬಡವರಿಗೆ ಹಸಿರು ಕಾರ್ಡಿನ ಬದಲು ಹಳದಿಕಾರ್ಡುಗಳನ್ನು ನೀಡಿ 3 ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ವಿತರಿಸಲು ನಿರ್ಧರಿಸಿದೆ. ಈ ಉದ್ದೇಶವನ್ನು ಜಾರಿಗೆ ತರಲು 1997-98 ರ ಬಿ.ಪಿ.ಎಲ್.(ಬಿಲೋ ಪಾವರ್ಟಿ ಲೈನ್- ಬಡತನರೇಖೆ ಕೆಳಗಿರುವವರು) ಸರ್ವೆಯನ್ನು ಆಧಾರ ಮಾಡಿಕೊಂಡಿದೆ. ಇದರಲ್ಲಿ ಹಂತ ಹಂತವಾಗಿ ನ್ಯಾಯಬೆಲೆ ಅಂಗಡಿಗಳನ್ನೇ ಮುಚ್ಚುವ ತಂತ್ರ ಅಡಗಿದೆ. ಖೋಟಾ ಹಸಿರು ಕಾರ್ಡುದಾರರನ್ನು ಮತ್ತು ಶ್ರೀಮಂತರು ಹೊಂದಿರುವ ಕಾರ್ಡುಗಳನ್ನು ಪತ್ತೆ ಹಚ್ಚುವ ಕೆಲಸವನ್ನು ನ್ಯಾಯಬೆಲೆ ಅಂಗಡಿ ಮಾಲಿಕರಿಗೆ ಜವಾಬ್ದಾರಿಯನ್ನು ಆಹಾರ ಇಲಾಖೆ ನೀಡಿದೆ. ಕಳ್ಳರನ್ನು ಹಿಡಿಯಲು ಕಳ್ಳರ ಮುಖ್ಯಸ್ಥರಿಗೇ ಆದೇಶ ನೀಡಿದಂತಾಗಿದೆ.

ಸರ್ವೆಯಲ್ಲೂ ಬಡವರಿಗೆ ಮೋಸ! : ಸರಕಾರವು ಹಸಿರು ಕಾರ್ಡುಗಳನ್ನು ಬದಲಿಸಿ ನಿಜ ಬಡವರನ್ನು ಕಂಡು ಹಿಡಿದು ಹಳದಿ ಕಾರ್ಡುಗಳನ್ನು ನೀಡಲು 1997-98 ರ ಬಿ.ಪಿ.ಎಲ್.ಸರ್ವೆಯನ್ನು ಆಧಾರವಾಗಿಟ್ಟುಕೊಂಡಿದೆ. ಅಂದರೆ ಬಿ.ಪಿ.ಎಲ್. ಸರ್ವೆಪಟ್ಟಿಯಲ್ಲಿ ಯಾರ ಹೆಸರು ಸೇರಿದೆಯೋ ಅವರೇ ನಿಜವಾದ ಬಡವರು ಎಂದು ಅರ್ಥ. ಕುರುಗೋಡಿನಲ್ಲಿ 4000 ಹಸಿರು ಕಾರ್ಡುದಾರರಿದ್ದಾರೆ. ಬಿ.ಪಿ.ಎಲ್. ಪಟ್ಟಿಯಲ್ಲಿ ಕೇವಲ 1300 ಜನರಿದ್ದಾರೆ. ಕುರುಗೋಡಿನ ಒಟ್ಟು ಜನಸಂಖ್ಯೆ ಅಂದಾಜು 17 ಸಾವಿರ ಅದರಲ್ಲಿ 9 ಸಾವಿರದಷ್ಟು ಕೃಷಿ ಕೂಲಿಕಾರರು..3 ಸಾವಿರದಷ್ಟು ಬಡ ರೈತರಿದ್ದಾರೆ. ಬಿ.ಪಿ.ಎಲ್. ಸರ್ವೆ ಪ್ರಕಾರ ಕೇವಲ 1300 ಮಾತ್ರ(ಕುಟುಂಬ ಎಂದು ಪರಿಗಣಿಸಿದರೂ 3 ಸಾವಿರದಷ್ಟು ಬಡಜನರು ಎಂದಾಗುತ್ತದೆ) ಇದೂ ಹೋಗಲಿ ಬಿ.ಪಿ.ಎಲ್. ಹೇಳುವಂತೆ ಈ 1300 ಕುಟುಂಬದ ಪಟ್ಟಿಯನ್ನು ಅವಲೋಕಿಸಿದರೆ ದಿಗ್‌ಭ್ರಮೆಯಾಗುತ್ತದೆ. ಯಾರು ನಿಜವಾದ ಬಡವರು? ಈ ಪಟ್ಟಿಯಲ್ಲಿ ನಿಜವಾದ ಬಡವರೆಂದು ಗುರುತಿಸಲ್ಪಟ್ಟವರ ಕೆಲವು ಸ್ಯಾಂಪಲ್‌ನ್ನು ಇಲ್ಲಿ ಕೊಡಲಾಗಿದೆ.

ಒಂದು ಬೀಜಗೊಬ್ಬರದ ಅಂಗಡಿ ಹಾಗೂ ಬಾರ್ ಹೊಂದಿರುವವರು, ತಿಂಗಳಿಗೆ 8 ಸಾವಿರ ಸಂಬಳ ಪಡೆಯುವ ಮೇಷ್ಟ್ರು, ಕಾಂಟ್ರ್ಯಾಕ್ಟರ್ರು, ಗ್ರಾ.ಪಂ. ಸದಸ್ಯರು, ಶ್ರೀಮಂತ ರೈತ, ಜವಳಿ ಹಾಗೂ ಗೊಬ್ಬರದ ಅಂಗಡಿ ಮಾಲೀಕರು.... ಪಟ್ಟಿ ಮಾಡುತ್ತಾ ಹೋದರೆ ದೊಡ್ಡ ಪುಸ್ತಕವೇ ಆಗುತ್ತದೆ. ಒಟ್ಟು ಸರ್ವೆಪಟ್ಟಿಯಲ್ಲಿ ಶೇ 50 ಇಂಥವರೇ ತುಂಬಿದ್ದಾರೆ. ಬಹುತೇಕ ಬಡವರು ಈ ಸರ್ವೆಯಿಂದ ಹೊರಗುಳಿದಿದ್ದಾರೆ. ಪಾರದರ್ಶಿಕ ಆಡಳಿತ ಹೇಗಿದೆ ಎಂಬುದು ಹೈಟೆಕ್ ಮಂತ್ರಿ ಕೃಷ್ಣಾರವರೇ ಹೇಳಬೇಕು. ಕುರುಗೋಡು ವಿಭಾಗದ ಪ್ರತಿ ಹಳ್ಳಿಯಲ್ಲೂ ಇದೇ ಸ್ಥಿತಿಯಿದೆ. ಇನ್ನೂ ರಾಜ್ಯದೆಲ್ಲೆಡೆ ಎಂತಹ ಗಂಭೀರ ಪರಿಸ್ಥಿತಿ ಇರಬಹುದೆಂಬುದನ್ನು ಊಹಿಸಬಹುದು? ಈ ಹಳದಿಕಾರ್ಡ್ ಹಂಚುವ ನೆಪದಲ್ಲಿ ಅನೇಕ ಕಾರ್ಡುದಾರರು ಕಡಿತಗೊಳ್ಳುತ್ತಾರೆ. ಹೀಗೆ ಇಂಚಿಂಚಾಗಿ ಪಡಿತರ ವ್ಯವಸ್ಥೆಯನ್ನು ಸಂಪೂರ್ಣ ನಾಶ ಮಾಡುವ ಹುನ್ನಾರ ನಡೆದಿದೆ.

ಜನತೆಯ ಹೋರಾಟಗಳು; ಈ ಕ್ರಮದ ವಿರುದ್ಧ ಕುರುಗೋಡಿನಲ್ಲಿ ದಿನಾಂಕ 23.10 2000 ದಂದು ಸುಮಾರು 250 ಜನ ಕೂಲಿಕಾರರು ಬೆಳಿಗ್ಗೆ 8 ಗಂಟೆಯಿಂದ ಆಹಾರ ಇಲಾಖೆಯ ಅಧಿಕಾರಿಗಳು ಬರುವವರೆಗೂ ಪ್ರಾಂತ ಕೃಷಿಕೂಕಲಿಕಾರರಸಂಘದ ನೇತೃತ್ವದಲ್ಲಿ ನಾಡ ಕಾರ್ಯಾಲಯದೆದುರು ಧರಣಿ ಸತ್ಯಾಗ್ರಹ ನಡೆಸಿದರು. 'ಬಿ.ಪಿ.ಎಲ್. ಸರ್ವೆಗೆ ಧಿಕ್ಕಾರ, ಎಲ್ಲಾ ಬಡವರಿಗೆ ರೇಷನ್ ಕಾರ್ಡ್' 'ಬಿಜೆಪಿ ಸರ್ಕಾರ ಇಳಿಯಲಿ, ನ್ಯಾಯ ಬೆಲೆ ಅಂಗಡಿ ಉಳಿಯಲಿ' ಎಂಬ ಘೋಷಣೆಗಳೊಂದಿಗೆ ಧರಣಿ ಕಾವೇರುತ್ತಲೇ ಹೋದಾಗ, ನಾಡ ತಹಶೀಲ್ದಾರವರು ಆಹಾರ ಇಲಾಖೆ ಅಧಿಕಾರಿಗಳನ್ನು ಕರೆದು ತಂದರು. ಸಂಘದ ನಿಯೋಗವನ್ನು ಮಾತುಕತೆಗೆ ಕರೆದರು. ಪ್ರಾಂತ ಕೃಷಿ ಕೂಲಿಕಾರರ ಸಂಘದ ವಿಭಾಗೀಯ ಸಮಿತಿ ಕಾರ್ಯದರ್ಶಿ ಕಾಂ. ವಿಶ್ವನಾಥ ಸ್ವಾಮಿಯವರ ಮುಖಂಡತ್ವದಲ್ಲಿ ಕಾಂ. ಹುಲುಗಪ್ಪ, ಕಾಂ. ಈರಮ್ಮ ಕಾಂ ಹುಲುಗಮ್ಮ ಕಾಂ. ಕೆಂಚಪ್ಪ, ಕಾಂ. ತಿಪ್ಪನಗೌಡ, ಕಾಂ. ಹೊನ್ನಾರ ಸಾಬ್, ಕಾಂ. ಪುರುಷೋತ್ತಮರವರನ್ನು ಒಳಗೊಂಡ ನಿಯೋಗವು ಸುದೀರ್ಘವಾಗಿ ಚರ್ಚಿಸಿ ಬಿ.ಪಿ.ಎಲ್. ಸರ್ವೆ ಪಟ್ಟಿಯಲ್ಲಿ ಸೇರಿಕೊಂಡಿರುವ ಶ್ರೀಮಂತರ ಕಾರ್ಡುಗಳನ್ನು ರದ್ದುಗೊಳಿಸಬೇಕು, 2. ಸರ್ವೆಪಟ್ಟಿಯಲ್ಲಿ ಕೈಬಿಟ್ಟಿರುವ ಎಲ್ಲಾ ಬಡವರಿಗೆ ಹಳದಿ ಕಾರ್ಡುಗಳನ್ನು ನೀಡಬೇಕು, 3. ಕಳಪೆಗುಣಮಟ್ಟದ ದಾಸ್ತಾನು ವಿತರಣೆ ನಿಲ್ಲಬೇಕು, 4. ರೇಷನ್ ಕಾರ್ಡು ಪಡೆಯಲು ಹಾಕಿರುವ ಕೆಲವು ನಿಬಂಧನೆಗಳನ್ನು ಸಡಿಲಗೊಳಿಸಬೇಕು - ಆದಾಯ ಪ್ರಮಾಣ ಪತ್ರವನ್ನು ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ಪರಿವೀಕ್ಷಕರ ಹೇಳಿಕೆಗಳ ಆಧಾರದಮೇಲೆ ಕಾರ್ಡುಗಳನ್ನು ವಿತರಿಸಬೇಕು. ಈ ಎಲ್ಲಾ ಬೇಡಿಕೆಗಳನ್ನು ಒಪ್ಪಿದ ಅಧಿಕಾರಿಗಳು ಸಂಘದ ಮುಖಂಡರಿಗೆ ಅರ್ಜಿ ನಮೂನೆಯನ್ನು ಕೊಟ್ಟು ಮಾಹಿತಿ ತಿಳಿಸಿದರು. ಧರಣಿ ನಿರತ ಕೂಲಿಕಾರರ ಮುಂದೆ ಚರ್ಚೆಯ ಅಂಶಗಳನ್ನು ಸವಿಸ್ತಾರವಾಗಿ ತಿಳಿಸಲಾಯ್ತು. ಹೊಸ ಆರ್ಥಿಕ ನೀತಿಯ ಪರಿಣಾಮಗಳು ಪಡಿತರ ವ್ಯವಸ್ಥೆಯನ್ನು ಎಲ್ಲಿಗೆ ತಂದಿವೆ ಹಾಗೂ ಎಡರಂಗ ಸರ್ಕಾರಗಳು ಈ ಹಾದಿಯಲ್ಲಿ ಸಾಧಿಸಿದ ಸಾಧನೆಗಳ ಬಗ್ಗೆ ಕೂಲಿಕಾರರ ಸಂಘದ ರಾಜ್ಯ ಸಮಿತಿಯ ಸಹ ಕಾರ್ಯದರ್ಶಿ ಕಾಂ. ಪಿ.ಆರ್.ವೆಂಕಟೇಶ್ ಮಾತನಾಡಿದರು. ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕಾಂ. ವಿ.ಎಸ್.ಶಿವಶಂಕರ್ ಹೋರಾಟಕ್ಕೆ ಬೆಂಬಲ ಕೋರಿ ಮಾತನಾಡಿದರು. ಮುಂದಿನ ಕಾರ್ಯಕಲಾಪಗಳಿಗೆ ಧರಣಿ ಕೊನೆಗೊಂಡಿತು.

ಈ ಹಿಂದೆಯೂ ಕುರುಗೋಡಿನ ಕೂಲಿಕಾರರು ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ಸಲ್ಲಿಸಿದ್ದಾರೆ. ಕಳೆದ ಕೆಲವು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಕುರುಗೋಡಿನ ಸಾರ್ವಜನಿಕ ಸಭೆಯೊಂದಕ್ಕೆ ಬಂದಾಗ ಅದೇ ಸಂದರ್ಭದಲ್ಲಿ ಸೊಸೈಟಿಯವರು ಅಕ್ಕಿ ವಿತರಣೆ ನಡೆದಿದ್ದು, ಗಬ್ಬು ವಾಸನೆಯಾಗಿದ್ದ ಅಕ್ಕಿಯನ್ನು ಕೂಲಿಕಾರ ಭೀಮ... ಪುಟ್ಟಿಯಲ್ಲಿ ಹಾಕಿಸಿಕೊಂಡು ಮೇಲೆ ವಸ್ತ್ರ ಮು... ಸಭೆ ವೇದಿಕೆಯತ್ತ ನಡೆದಳು. ಮಂತ್ರಿಗಳಿಗೆ ಹೂಹಾರ ತಂದಿರಬೇಕೆಂದು ಸ್ಥಳೀಯ ಮುಖಂಡರು ಹಿಗ್ಗು. ದಡದಡನೆ ಸಭೆಯ ಕಟ್ಟೆಯೇರಿ ಮಂತ್ರಿ... ಮುಂದೆ ಪುಟ್ಟಿ ಇಟ್ಟು ವಸ್ತ್ರ ತೆಗೆದಳು. ಗಬ್ಬು... ಮಂತ್ರಿಗಳು ಮೂಗು ಮುಚ್ಚಿದರು. 'ನೋಡ್ರಿ ಸ್ವಾಮಿ ಇಂಥ ಅಕ್ಕಿ ಬಡವರು ತಿನಬೇಕಾ' ಎಂದಳು. ಅ... ನೆರೆದಿದ್ದ ಕೂಲಿಕಾರರ ಸಂಘ ಹಾಗೂ ಪ್ರಾಂ...

→

..........ಜನತಾ ಪ್ರಜಾಪ್ರಭುತ್ವದೆಡೆ ಮುನ್ನಡೆ

ಪುಟ 5 ರಿಂದ

ಜಗತ್ತಿನ 4/5 ರಷ್ಟುಜನರನ್ನು ಬಡತನದ ಕೂಪದಲ್ಲಿ ಬೇಯುತ್ತಲೇ ಇರುವಂತೆ ಮಾಡುತ್ತಿರುವ ಈ ಜಗತ್ತಿನ ಅಸಮಾನ ವ್ಯವಸ್ಥೆಯನ್ನು ಬದಲಾಯಿಸಲು ಮಾರ್ಕ್ಸ್‌ವಾದ ನಮ್ಮನ್ನು ಸಜ್ಜುಗೊಳಿಸುತ್ತಿದೆ. ಇಂತಹ ಅಮಾನವೀಯ ಸುಲಿಗೆಯಿಂದ ವಿಶ್ವದ ಜನರನ್ನು ಮುಕ್ತಿಗೊಳಿಸುವ ಒಂದೇ ಒಂದು ದಾರಿಯೆಂದರೆ ಈಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದೇ ಆಗಿದೆ. ಮನುಕುಲದ ವಿಮೋಚನೆಗೆ ಸಮಾಜವಾದವೊಂದೇ ದಾರಿ. ಅದನ್ನು ಸಾಧಿಸಲು ಮಾರ್ಕ್ಸ್‌ವಾದ ನಮಗೆ ಅಸ್ತ್ರ ಹಾಗೂ ಅದು ವಿಜ್ಞಾನ ಕೂಡ.

ಮುಂದಿನ ದಿನಗಳಲ್ಲಿ ಮೂರನೇ ಜಗತ್ತಿನ ದೇಶಗಳು ಮತ್ತು ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯಗಳು ಉಲ್ಬಣಗೊಳ್ಳುತ್ತಾ ಹೋಗುತ್ತದೆ ಎನ್ನುವುದರ ಕುರಿತು ಸಿಪಿಐ(ಎಂ) ನ ಕಾರ್ಯಕ್ರಮವು ಈ ಮೇಲಿನ ತಿಳುವಳಿಕೆಯ ಆಧಾರದ ಮೇಲೆಯೇ ಕೇಂದ್ರೀಕರಿಸಿದೆ. ಆದ್ದರಿಂದ, ವಿಮೋಚನೆ, ಸ್ವಾತಂತ್ರ್ಯ ಮತ್ತು ಮಾನವನ ಘನತೆಗೆ ಬೆಲೆ ಕೊಡುವ ಎಲ್ಲರೂ, ಸಾಮ್ರಾಜ್ಯವಾದದ ವಿರುದ್ಧ ನಡೆಯುವ ಈ ಜಾಗತಿಕ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

'ಐತಿಹಾಸಿಕ ಪ್ರಮಾದ?'

ಸಿಪಿಐ(ಎಂ)ನ ಕಾರ್ಯಕ್ರಮವು ವಿಶದವಾಗಿ ಜಾಗತಿಕ ಹಾಗೂ ದೇಶದ ಪರಿಸ್ಥಿತಿಯ ಕುರಿತು ಮಾಡಿದ ವಿಶ್ಲೇಷಣೆಯನ್ನು ಉದ್ದೇಶಪೂರ್ವಕವಾಗಿಯೇ ದೇಶದ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಕಡೆಗಣಿಸಿವೆ. ಈ ಮಾಧ್ಯಮಗಳ ಆಸಕ್ತಿ ಇದ್ದದ್ದು - ಸಿಪಿಐ(ಎಂ) ಕೇಂದ್ರ ಸರ್ಕಾರದಲ್ಲಿ ಪಾಲ್ಗೊಳ್ಳುತ್ತದೆಯೇ ಅಥವಾ ಇಲ್ಲವೆ ಎಂಬುದರ ಬಗ್ಗೆ ಮಾತ್ರ. ಪಾಪ! ಪ್ರಾಯಶಃ ಈ ಬಾಡಿಗೆ ಲೇಖಕರಿಗೆ ಸಿಪಿಐ(ಎಂ)ನ ವಿಶ್ಲೇಷಣೆಯನ್ನು ಅರ್ಥಮಾಡಿಕೊಳ್ಳುವ ಬೌದ್ಧಿಕ ಶಕ್ತಿ ಇಲ್ಲವೆಂದು ಕಾಣುತ್ತದೆ. 1996 ರಲ್ಲಿ ಕೇಂದ್ರ ಸರ್ಕಾರದಲ್ಲಿ ಸಿಪಿಐ(ಎಂ) ಪಾಲ್ಗೊಳ್ಳದೆ ಮಾಡಿದ 'ಐತಿಹಾಸಿಕ ಪ್ರಮಾದ'ವನ್ನು ಈ ವಿಶೇಷ ಅಧಿವೇಶನದಲ್ಲಿ ಪರಿಷ್ಕರಿಸಿದ್ದಾರೆಯೇ ಎಂಬುದ ಬಗ್ಗೆ ತಿಳಿದುಕೊಳ್ಳುವುದರಲ್ಲೇ ಹೆಚ್ಚು ಆಸಕ್ತಿಯನ್ನು ಅವು ತೋರಿದವು. ಪಕ್ಷದ 1964 ರ ಕಾರ್ಯಕ್ರಮವು, ಕೇಂದ್ರ ಸರ್ಕಾರವನ್ನು ಸೇರುವ ವಿಚಾರದಲ್ಲಿ ನಿರ್ಬಂಧವನ್ನಾಗಲಿ ಅಥವಾ ತಡೆಯನ್ನಾಗಲೀ ಒಡ್ಡಿಲ್ಲ ಎಂಬ ಸಂಗತಿಯನ್ನು ಅವು ಅಲಕ್ಷಿಸಲು ಮುಂದಾಗಿದೆಯಷ್ಟೆ. ವಾಸ್ತವದಲ್ಲಿ ಈಗಿನ ಸಮಕಾಲೀನಗೊಳಿಸಿದ ಕಾರ್ಯಕ್ರಮವು 7.17 ನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಆಗ ಇರುವ 'ವಾಸ್ತವ ಪರಿಸ್ಥಿತಿ'ಗೆ ಅನುಗುಣವಾಗಿ ರಾಜ್ಯ ಅಥವಾ ಕೇಂದ್ರದ ಯಾವುದೇ ಸರಕಾರದಲ್ಲಿ ಭಾಗವಹಿಸುವ ಪ್ರಶ್ನೆಯನ್ನು ಪರಿಗಣಿಸಲಾಗುತ್ತದೆ ಎಂದು.

ಈ ಲೆಕ್ಕಾಚಾರದ ಆಧಾರದಲ್ಲಿಯೇ 1996 ರ ಕೇಂದ್ರ ಸರ್ಕಾರವನ್ನು ಸೇರದಿರುವ ನಿರ್ಧಾರವನ್ನು ಆಗಿನ 'ವಾಸ್ತವ ಪರಿಸ್ಥಿತಿ'ಗೆ ಅನುಗುಣವಾಗಿ ಮಾಡಲಾಗಿತ್ತು. ಈ ನಿರ್ಧಾರವನ್ನು ಆ ನಂತರ 1998 ರಲ್ಲಿ ನಡೆದ ಪಕ್ಷದ ಮಹಾಧಿವೇಶನ ಒಪ್ಪಿಗೆ ಕೂಡ.

ಕುರುಡು ಪತ್ರಿಕೆಗಳು


ಪಕ್ಷವು ಅನುಸರಿಸುತ್ತಿರುವ ಸರಳ ಸತ್ಯವನ್ನು ಅರ್ಥಮಾಡಿಕೊಳ್ಳದ ಈ ಪತ್ರಿಕೆಗಳು ತಮ್ಮ ಕುರುಡತನವನ್ನು ಪ್ರದರ್ಶಿಸುತ್ತಿವೆ. ಈಗಲೂ ಕೂಡ ಮಹಾರಾಷ್ಟ್ರ, ಬಿಹಾರ ಮತ್ತು ಅಸ್ಸಾಂ ರಾಜ್ಯಗಳ ಸರ್ಕಾರಗಳಲ್ಲಿ ಭಾಗವಹಿಸಬೇಕೆಂಬ ಕರೆಯಿದ್ದರೂ, ಪಕ್ಷ ಭಾಗವಹಿಸಲಿಲ್ಲವೆಂಬ ಕಟುಸತ್ಯವನ್ನು ಅವು ಬೇಕೆಂತಲೇ ಮರೆಯುತ್ತವೆ. ಕೇವಲ ಇಂತಹ ವಿಷಯಗಳಲ್ಲೇ ಮುಳುಗಿ ಹೋಗಿರುವ ಈ ಮಾಧ್ಯಮಗಳು ಕಳೆದ ಮೂರು ದಶಕಗಳಲ್ಲಿ ಭಾರತದಲ್ಲಿ ಆಗಿರುವ ವಿದ್ಯಮಾನ/ಬೆಳವಣಿಗೆಗಳ ಬಗ್ಗೆ ಪಕ್ಷವು ಮಾಡಿದ ಅಂದಾಜನ್ನು ವರದಿ ಮಾಡಲೇ ಇಲ್ಲ.

ಬಂಡವಾಳಶಾಹಿ ಪಥದ ತಪ್ಪುದಾರಿ

ಒಂದು ಕಡೆಯಲ್ಲಿ ಸಾಮ್ರಾಜ್ಯಶಾಹಿಗಳ ಜತೆ ಶಾಮೀಲು ಮತ್ತೊಂದು ಕಡೆ ಅರೆ ಪಾಳೆಯಗಾರಿ ಭೂಮಾಲಕರೊಂದಿಗೆ ಮಾಡಿಕೊಂಡ ಸಖ್ಯತೆಯಿಂದಾಗಿ ಭಾರತದ ಆಳುವ ವರ್ಗಗಳು ಸ್ವಾತಂತ್ರ್ಯಾನಂತರ, ಆರಿಸಿಕೊಂಡ ಬಂಡವಾಲಶಾಹಿ ಪಥದಿಂದಾಗಿ ಇಂದು ಹೆಚ್ಚೆಚ್ಚು ವಿದೇಶಿ ಹಣಕಾಸು ಬಂಡವಾಳದ ಮೇಲೆ ಅವಲಂಬಿಸುವಂತೆ ಮಾಡಿದೆ. ಇದರಿಂದಾಗಿಯೇ ನಮ್ಮ ಸರ್ಕಾರಗಳು ಬಾಯಿ ಮುಚ್ಚಿಕೊಂಡು ಸಾಮ್ರಾಜ್ಯಶಾಹಿಗಳು ನಮ್ಮ ದೇಶದ ಮೇಲೆ ಹೇರಿದ ನವ ಉದಾರೀಕೃತ ನೀತಿಗಳನ್ನು ಒಪ್ಪಿಕೊಳ್ಳುತ್ತಿವೆ.

> **ಮೂಲಭೂತ ವಿಷಯಗಳನ್ನು ಬೇಕೆಂತಲೇ ಬದಿಗೊತ್ತಿ ತಮ್ಮ ಪೂರ್ವಾಗ್ರಹ ಪೀಡಿತ ತಪ್ಪು ವಿಚಾರಗಳಲ್ಲೇ ಈ ಬಂಡವಾಳಶಾಹಿ ಮಾಧ್ಯಮಗಳು ಮುಳುಗಿಹೋಗಿವೆ. ಜನತಾ ಪ್ರಜಾಪ್ರಭುತ್ವದ ಪರವಾಗಿ ಜನರ ನಡುವಣ ವರ್ಗಶಕ್ತಿಗಳ ಅಂತರ್ ಸಂಬಂಧವನ್ನು ಬದಲಾಯಿಸುವ ರೀತಿಯನ್ನು ಸಿಪಿಐ(ಎಂ) ಕಾರ್ಯಕ್ರಮವು ಮುಂದಿಟ್ಟಿದೆ.**

ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ಆದೇಶದಂತೆ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಒಂದು ಕಡೆ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆಯಿಡುತ್ತಿವೆ, ಮತ್ತೊಂದೆಡೆ ಭಾರತದ ಜನತೆಯ ಮೇಲೆ ಹಿಂದೆಂದೂ ಕಾಣದ ಹೊರೆಯನ್ನು ಹೊರಿಸುತ್ತಿವೆ. ದೇಶದ ಆರ್ಥಿಕ ಸಾರ್ವಭೌಮತೆಯನ್ನು ಕಾಪಾಡಲು ಮತ್ತು ಉಲ್ಬಣಗೊಳ್ಳುತ್ತಿರುವ ಸುಲಿಗೆಯಿಂದ ಭಾರತದ ಜನರನ್ನು ಮುಕ್ತಿಗೊಳಿಸಲು ಈಗಿನ ಆಳುವವರ್ಗಗಳನ್ನು ಅಧಿಕಾರದಿಂದ ಕಿತ್ತುಹಾಕಲೇಬೇಕು.



ಜನತಾಪ್ರಜಾಪ್ರಭುತ್ವ ರಂಗ

ಈ ಮೇಲಿನ ಗುರಿಯನ್ನು ಸಾಧಿಸಲು ಜನತಾ ಪ್ರಜಾಪ್ರಭುತ್ವ ರಂಗವನ್ನು ರಚಿಸಬೇಕೆಂದು ಸಿಪಿಐ(ಎಂ) ಕಾರ್ಯಕ್ರಮವು ಕೋರುತ್ತದೆ. ವಿದೇಶಿ ಹಣಕಾಸು ಬಂಡವಾಳ ಮತ್ತು ಸಾಮ್ರಾಜ್ಯವಾದಿಗಳ ಕುತಂತ್ರಗಳ ಧಾಳಿಯಿಂದ ನರಳುತ್ತಿರುವ ಈಗಿನ ಆಳುವವರ್ಗದ, ಸಾಂಪ್ರದಾಯಿಕ ಬೆಂಬಲಿಗ ವಿಭಾಗಗಳಾದ ದೊಡ್ಡದಲ್ಲದ ಬಂಡವಾಳಿಗರು ಮತ್ತು ಶ್ರೀಮಂತ ರೈತರು ಅಪಾಯದ ಅಂಚನ್ನು ತಲುಪಿದ್ದಾರೆ. ಕಾರ್ಮಿಕ ವರ್ಗ, ಬಡ ರೈತರು ಮತ್ತು ಕೃಷಿಕೂಲಿಕಾರರ ಐಕ್ಯತೆಯ ಆದಾರದಲ್ಲಿನ ವರ್ಗ ಹೋರಾಟವನ್ನು ಗಟ್ಟಿಗೊಳಿಸುವ ಸಂದರ್ಭದಲ್ಲೇ ಈ ಮೇಲೆ ಹೇಳಿದ ಜನವಿಭಾಗವನ್ನು ಜನತಾ ಪ್ರಜಾಪ್ರಭುತ್ವ ರಂಗಕ್ಕೆ ಶಕ್ತಿ ತರುವ ಪ್ರಯತ್ನಗಳು ಆಗಲೇಬೇಕು.

ಇಂತಹ ಜನತಾಪ್ರಜಾಪ್ರಭುತ್ವ ರಂಗವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಕೆಲವು ತಾತ್ಕಾಲಿಕ ಗುಂಪುಗಳು ಎದ್ದೇ ಏಳುತ್ತವೆ. ಎಡ ಮತ್ತು ಪ್ರಜಾಪ್ರಭುತ್ವ ರಂಗ ಹಾಗೂ ಎಡ ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ನಾವಿಂದು ಕಟ್ಟುತ್ತಿರುವುದು ಕೆಲವು ಉದಾಹರಣೆಗಳಷ್ಟೆ. ಸಿಪಿಐ(ಎಂ) ನ ಈ ಪ್ರಯತ್ನಗಳನ್ನು ಕೆಲವರು ('ದಿ ಹಿಂದೂ' ಪತ್ರಿಕೆಯ ಅಕ್ಟೋಬರ್ 25, 2000 ದ ಸಂಪಾದಕೀಯ)ಚುನಾವಣಾ ರಂಗಗಳ ಜತೆ ಹೋಲಿಸುವ ಪ್ರಯತ್ನ ಮಾಡುತ್ತಾರೆ. ಇಂದು ಸಿಪಿಐ(ಎಂ) ಕಟ್ಟಲು ಬಯಸುತ್ತಿರುವ ಕಾಂಗ್ರೆಸ್ಸೇತರ ಬಿಜೆಪಿಯೇತರ ಪರ್ಯಾಯವು ಕೇವಲ ಚುನಾವಣಾ ಪರ್ಯಾಯವಲ್ಲ. ಅದು ಎಂತಹ ಪರ್ಯಾಯವೆಂದರೆ ಒಂದುಕಡೆ ಅದು ದೇಶವನ್ನು ಹಾಳುಗೆಡುವುತ್ತಿರುವ ಆರ್ಥಿಕ ನೀತಿಗಳನ್ನು ವಿರೋಧಿಸುತ್ತದೆ ಹಾಗೂ ಮತ್ತೊಂದು ಕಡೆ ದೇಶವನ್ನು ಛಿದ್ರಗೊಳಿಸಿದ ಕೋಮುವಾದಿ ಶಕ್ತಿಗಳ ಕುತಂತ್ರಗಳನ್ನು ದೃಢಸಂಕಲ್ಪದಿಂದ ವಿರೋಧಿಸುತ್ತದೆ. ಇಂತಹ ಗುಂಪುಗಳ ಐಕ್ಯಹೋರಾಟಗಳು ವರ್ಗ ಶಕ್ತಿಗಳ ಪುನಹೊಂದಾಣಿಕೆ/ ಪುರ್ನಸಂಘಟನೆಗೆ ದಾರಿ ಮಾಡಿಕೊಡುತ್ತವೆ ಮತ್ತು ಜನತಾ ಪ್ರಜಾಪ್ರಭುತ್ವದತ್ತ ಕೊಂಡೊಯ್ಯುತ್ತದೆ.

ಇಂತಹ ಮೂಲಭೂತ ವಿಷಯಗಳನ್ನು ಬೇಕೆಂತಲೇ ಬದಿಗೊತ್ತಿ ತಮ್ಮ ಪೂರ್ವಾಗ್ರಹ ಪೀಡಿತ ತಪ್ಪು ವಿಚಾರಗಳಲ್ಲೇ ಈ ಬಂಡವಾಳಶಾಹಿ ಮಾಧ್ಯಮಗಳು ಮುಳುಗಿಹೋಗಿವೆ. ಜನತಾ ಪ್ರಜಾಪ್ರಭುತ್ವದ ಪರವಾಗಿ ಜನರ ನಡುವಣ ವರ್ಗಶಕ್ತಿಗಳ ಅಂತರ್ ಸಂಬಂಧವನ್ನು ಬದಲಾಯಿಸುವ ರೀತಿಯನ್ನು ಸಿಪಿಐ(ಎಂ) ಕಾರ್ಯಕ್ರಮವು ಮುಂದಿಟ್ಟಿದೆ. ಇಂತಹ ಒಂದು ಗುರಿಯನ್ನು ಸಾಧಿಸಲು ಇರುವ ಶಕ್ತಿಯ ಆಧಾರದ ಮೇಲೆ ಸರ್ಕಾರವನ್ನು ಸೇರುವ ಅಥವಾ ಸೇರದಿರುವ ಪ್ರಶ್ನೆಯನ್ನು ನಿರ್ಧರಿಸಲಾಗುತ್ತದೆ.

ಇಷ್ಟೆಲ್ಲಾ ಹೇಳಿದ ಮೇಲೆ, ಸಿಪಿಐ(ಎಂ) ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ, ಬಂಡವಾಳಶಾಹಿ ಮಾಧ್ಯಮಗಳು ಅರಣ್ಯರೋಧನ ಮಾಡಿದವೆಂದೇ ಹೇಳಬೇಕಾಗುತ್ತದೆ. ಅವರು ಅಜ್ಞಾನದಿಂದ ಹೀಗೆ ಮಾಡಿರದೆ ಒಂದು ತಂತ್ರಗಾರಿಕೆ ದೃಷ್ಟಿಯಿಂದ ಹಾಗೆ ನಡೆದು ಕೊಂಡಿದ್ದಾರೆನ್ನುವುದನ್ನು ನಾವು ಮರೆಯಬಾರದು. ಇಡೀ ರಾಜಕೀಯವನ್ನು ಕೇವಲ ಒಂದು ಚುನಾವಣಾ ರಾಜಕೀಯದ ಮಟ್ಟಕ್ಕಷ್ಟೇ ಇಳಿಸುವುದೇ ಅವರ ಮುಖ್ಯಗುರಿ. ಜನರ ಪ್ರಜ್ಞೆಯ ಮಟ್ಟವನ್ನು ಜನಪ್ರಿಯ ಹೋರಾಟಗಳ ಮೂಲಕ ಏರಿಸುವ ಅಥವಾ ಸಾಮಾಜಿಕ ಬದಲಾವಣೆಗಾಗಿ ಜನರನ್ನು ಸಂಘಟಿಸುವ ಒಂದು ಚಟುವಟಿಕೆಯಾಗಿ ರಾಜಕೀಯವನ್ನು ಅವರು ಎಂದೂ ಪರಿಗಣಿಸಲೇ ಇಲ್ಲ. 'ಮಾರುಕಟ್ಟೆಯ ಮಿಗಿಲಾದದ್ದು' ಎಂಬ ಇಂದಿನ ದಿನಗಳಲ್ಲಿ ರಾಜಕೀಯವನ್ನು ಒಂದು ಮಾರುಕಟ್ಟೆಯ ವಸ್ತುವನ್ನಾಗಿ ಅವರು ನೋಡುತ್ತಾರೆ. ಕೇಂದ್ರ ಸರ್ಕಾರವನ್ನು ನಡೆಸಲು ನೀಡಿದ ಆಹ್ವಾನವನ್ನು ತಿರಸ್ಕರಿಸಿ ಅವರ ಸಲಹೆಯನ್ನು/ಪ್ರಯತ್ನವನ್ನು ಧಿಕ್ಕರಿಸಲು ಸಿಪಿಐ(ಎಂ)ಗೆ ಎಷ್ಟು ಧೈರ್ಯ? ರಾಜಕೀಯವನ್ನು ಸಂದರ್ಭಸಾಧಕತನದ ಮಟ್ಟಕ್ಕೆ ಅಪಮೌಲ್ಯಗೊಳಿಸುವ ಮತ್ತು ರಾಜಕೀಯವನ್ನು ಹಣ ಸೂರೆ ಹೊಡೆಯುವ ದಂಧೆಯಾಗಿಸುವ ಅವರ ಪ್ರಯತ್ನವನ್ನು ವಿರೋಧಿಸಲು ಸಿಪಿಐ(ಎಂ)ಗೆ ಅಬ್ಬಾ ಎಷ್ಟು ಧೈರ್ಯ?

'ದಯವಿಟ್ಟು ಕ್ಷಮಿಸಿ' ಎಂದಷ್ಟೆ ನಾವು ಅವರಿಗೆ ಹೇಳಬಹುದು. ಈಗಿರುವ ಅಸಮಾನ ಮತ್ತು ಸುಲಿಗೆಯ ವ್ಯವಸ್ಥೆಯನ್ನು ಮಾರ್ಪಾಟು ಮಾಡಲು ಸಿಪಿಐ(ಎಂ) ಪ್ರಯತ್ನಿಸುತ್ತದೆ. ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದ ಇವತ್ತಿನ ಆಳುವ ವರ್ಗವನ್ನು ಕಿತ್ತುಹಾಕುವುದರ ಮೂಲಕ ಆ ಗುರಿಯನ್ನು ನಾವು ಸಾಧಿಸುತ್ತೇವೆ. ಸಿಪಿಐ(ಎಂ)ನ ಕಾರ್ಯಕ್ರಮ ಈ ತಂತ್ರವನ್ನು ಹೇಳಿದೆ. ಭಾರತವನ್ನು ಮುಕ್ತಿಗೊಳಿಸುವ ಮತ್ತು ಜನರ ಭವಿಷ್ಯವನ್ನು ಉಜ್ವಲಗೊಳಿಸುವ ಒಂದೇ ತಂತ್ರ ಅದು. ಭಾರತದ ಮುಂದಿನ ಭವಿಷ್ಯ ಜನತಾ ಪ್ರಜಾಪ್ರಭುತ್ವದೆಡೆಗೆ - ಅದೇ ಸಮಾಜವಾದದತ್ತ ಭಾರತ ಹೋಗುವ ದಾರಿ.

...ತ ಸಂಘದ ಕಾರ್ಯಕರ್ತರು ಘೋಷಣೆಗಳನ್ನು ...ಗಿದರು. ಸ್ಥಳೀಯ ಕಾಂಗ್ರೆ ಮುಖಂಡರಿಗೆ ...ಲ್ಲಿಲ್ಲದ ಸಿಟ್ಟು. ನಂತರದ ದಿನಗಳಲ್ಲಿ ಊರಿಗೆ ...ಂದ ಮಂತ್ರಿಗಳನ್ನು ಅವಮಾನಿಸಿದರೆ ಊರ ...ರ್ಯಾದೆ ಏನಾಗುತ್ತದೆ, ಈ ಸಂಘದವರದು ...ಳ ಆತು. ಹಾಗೆ ಹೀಗೆ ಎಂದು ಊರು ...ಭಿಮಾನದ ಕಟ್ಟುಕಥೆಗಳು ಗೊಣಗೊಟ್ಟಿದರು. ...ವ್ಮನ್ನ ಚುನಾಯಿಸಿದ ಊರು ಜನಕ್ಕೆ ...ಗ್ಗುವಾಸನೆಯ ಅಕ್ಕಿ ತಿನ್ನಿಸುವುದು ಯಾವ ...ರ್ಯಾದೆ ಪ್ರಶ್ನೆ? ಕೆಲವು ದಿನ ಸೊಸೈಟಿಯಲ್ಲಿ ...ತ್ತಮ ಅಕ್ಕಿಗಳು ವಿತರಣೆಯಾದವು. ಪುನಃ ...ಜಾಡು, ನಾಡ ಕಾರ್ಯಾಲಯದ ಮುಂದೆ ...ರಣೆ ವಿತರಿಸಿದ ಅಕ್ಕಿಗಳ ಪ್ರದರ್ಶನ, 'ಕಳಪೆ ...ಕ್ಕಿ ಹೋಗಲಿ, ಒಳ್ಳೆಯ ಅಕ್ಕಿ ವಿತರಣೆಯಾಗಲಿ". ಇದೆ ತಿಂಗಳ ಮೊದಲ ವಾರದಲ್ಲಿ ಪುನಃ ಪ್ರತಿಭಟನೆ, ಸೊಸೈಟಿಮುಚ್ಚಲಾಯ್ತು. ಅದೇ ಕರೆದಿದ್ದ ಗ್ರಾಮ ಪಂಚಾಯ್ತಿ ಗ್ರಾಮ ಸಭೆಯಲ್ಲಿ ಸೊಸೈಟಿ ಬಾಗಿಲು ಜಡೆದ ಜನ ಗ್ರಾ.ಪಂ. ಮುಂದೆ ಜಮಾಯಿಸಿ ಧರಣಿ ಸಭೆಯು ಒಳಗಡೆ ಕೂಲಿಕಾರ ಮುಖಂಡರ ಒತ್ತಾಯ.

ಕೊನೆಗೆ ಪಂಚಾಯತಿಯ ಗ್ರಾಮಸಭೆಯಲ್ಲಿ ಆಹಾರಇಲಾಖೆಗೆ ದೂರು ನೀಡುವ ನಿರ್ಣಯ ತೆಗೆದುಕೊಳ್ಳಲಾಯ್ತು. ಈಗ ಪುನಃ ಬಿ.ಪಿ.ಎಲ್. ಸರ್ವೆ ಮೋಸದ ವಿರುದ್ಧ ಹೋರಾಟ ನಡೆದಿದೆ. ಹಸಿರು ಕಾರ್ಡು ಬದಲು ಹಳದಿಕಾರ್ಡು ಕೊಡುವ ನೆಪದಲ್ಲಿ ಕಾರ್ಡುದಾರರನ್ನೇ ಕಡಿತಗೊಳಿಸುವ ತಂತ್ರ, ಅಷ್ಟೇ ಅಲ್ಲ ಕೂಲಿಕಾರರು ಪಡಿತರ ಚೀಟಿ ಪಡೆಯಲು ಅರ್ಜಿಯೊಟ್ಟಿಗೆ ಸಲ್ಲಿಸಬೇಕಾದ ಲಗತ್ತುಗಳನ್ನು ತಯಾರಿಸಿಕೊಳ್ಳಲೂ ಸಾಧ್ಯವಿರದ ಪರಿಸ್ಥಿತಿ. ಇದಕ್ಕೆ ತಗಲುವ ಖರ್ಚನ್ನು ಕೂಲಿಕಾರರು ಭರಿಸಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತವೆ. ಅರ್ಜಿಗೆ ರೂ. 1, ಆದಾಯ ಪ್ರಯಾಣ ಪತ್ರದ ಸೆಟ್‌ಗೆ 7 ರೂ. ಇದಕ್ಕೆ ಫೋಟೋ 20 ರೂ. ಕಾರ್ಡಿನ ಅರ್ಜಿಗೆ ಫೋಟೋ(4) 30 ರೂ. ಸ್ಥಳೀಯರ V.A.; RI ಸಹಿಗಳ ತಿರುಗಾಟಕ್ಕೆ ಖರ್ಚು 10 ರೂ. (ಇವರುಒಂದೇ ದಿನ ಸಿಗುವುದಿಲ್ಲ) ನಂತರ ತಹಶೀಲ್ದಾರರ ಸಹಿ ಬಳ್ಳಾರಿಗೆ ಹೋಗಬೇಕು, ಸುಮಾರು 3 ಸಲವಾದರೂ ಹೋಗಿರಬೇಕು. ಬಸ್‌ಚಾರ್ಜ್ ಖರ್ಚು 60 ರೂ.(ಮೂರು ಬಾರಿಗೆ) ಒಟ್ಟು ಖರ್ಚು 130 ರೂ. ಕೂಲಿಕಾರರಿಗೆ ಒಂದು ದಿನಕ್ಕೆ 30 ರೂ ಕೂಲಿ. ಇಷ್ಟೆಲ್ಲಾ ಮಾಡಲು ಕನಿಷ್ಠ 4, 5 ದಿನ ಕೂಲಿಕೊಡಬೇಕು. ಕೆಲವರು ಇದನ್ನೆಲ್ಲಾ ಮಾಡಲು ಹೆದರಿ ಕಾರ್ಡುತಂಟೆಯೇ ಬೇಡವೆನ್ನುವ ಸ್ಥಿತಿ ಇದೆ. ಇಂತಹ ಕ್ರಮಗಳೂ ಬಡವರನ್ನು ಪಡಿತರ ವ್ಯವಸ್ಥೆಯಿಂದ ದೂರವಿಡುತ್ತದೆ.

ಇವೆಲ್ಲವನ್ನು ಗಮನಿಸಿದಾಗ ಬಡವರಿಗಾಗಿ ಎಂದು ಹೇಳುವ ಸರಕಾರದ ಸೌಲಭ್ಯ ಪಡೆಯಲು ಬಡವರು ಏನೆಲ್ಲಾ ಹೆಣಗಬೇಕು. ಇಂತಹ ಸನ್ನಿವೇಶದಲ್ಲಿ ಪ್ರಬಲ ಜನಾಂದೋಲನದ ಅವಶ್ಯಕತೆ ಎದ್ದು ಕಾಣುತ್ತದೆ. ಕಸುವು ತುಂಬಿದ ಜನತೆಯ ಹೋರಾಟಕ್ಕೆ ಸಂಘವೂ ತನ್ನ ಕಸುವನ್ನು ಹೆಚ್ಚಿಸಿಕೊಂಡು ಸಜ್ಜಾಗಬೇಕಿದೆ.

ಶಿಕ್ಷಣದ ಮೇಲಿನ ಆಕ್ರಮಣಕ್ಕೆ ಮೆಕ್ಸಿಕನ್ ವಿದ್ಯಾರ್ಥಿಗಳ ಧೀರ ಪ್ರತಿರೋಧ

ಜಾಗತೀಕರಣ ನೀತಿಯ ಭಾಗವಾಗಿ ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ ಶಿಕ್ಷಣದ ಪ್ರಜಾಪ್ರಭುತ್ವೀಕರಣ, ಶಿಕ್ಷಣ ನೀತಿ ನಿರೂಪಣೆಯಲ್ಲಿ ವಿದ್ಯಾರ್ಥಿಗಳ ಹಕ್ಕನ್ನು ಪ್ರತಿಪಾದಿಸಿ ಮೆಕ್ಸಿಕೋದ ಲಕ್ಷಾಂತರ ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ.

2,75,000 ವಿದ್ಯಾರ್ಥಿಗಳು ಓದುತ್ತಿರುವ ಲ್ಯಾಟಿನ್ ಅಮೆರಿಕಾದ ವಿಶಾಲ ಶಿಕ್ಷಣ ಸಂಸ್ಥೆ 'ದಿ ನ್ಯಾಶನಲ್ ಅಟೋನೋಮಸ್ ಯೂನಿವರ್ಸಿಟಿ ಆಫ್ ಮೆಕ್ಸಿಕೋ' ನಲ್ಲಿ 1968 ರಲ್ಲಿ ಆದಂತೆ ಮತ್ತೊಮ್ಮೆ ಶಿಕ್ಷಣದ ವ್ಯಾಪಾರದ ವಿರುದ್ಧ ತೀವ್ರ ಪ್ರತಿಭಟನೆ ಭುಗಿಲೆದ್ದಿದೆ.

ಇದೇ ಮೆಕ್ಸಿಕನ್ ವಿಶ್ವವಿದ್ಯಾಲಯದಲ್ಲಿ 1968 ರಲ್ಲಿ ಆರಂಭವಾದ ವಿದ್ಯಾರ್ಥಿ ಚಳುವಳಿ ಅಂದಿನ ಮೆಕ್ಸಿಕೋ ಸರ್ವಾಧಿಕಾರಿ ಆಡಳಿತದ ವಿರುದ್ಧದ ಪ್ರಜಾಪ್ರಭುತ್ವದ ಪರವಾದ ಬೃಹತ್ ಆಂದೋಲನ ಸ್ಫೂರ್ತಿ ಕೇಂದ್ರವಾಗಿತ್ತು. ಮೆಕ್ಸಿಕೋದಲ್ಲಿ ಪ್ರಜಾಪ್ರಭುತ್ವ ಬೆಳೆದು ಬಂದದ್ದೇ ವಿದ್ಯಾರ್ಥಿಗಳ ಇಂತಹ ತ್ಯಾಗ, ರಕ್ತ ಮತ್ತು ಬೆವರಿನಿಂದ.

ಮುಂಚೆ ವರ್ಷಕ್ಕೆ ಎರಡು ಸೆಂಟ್‌ಗಳಷ್ಟಿದ್ದ ಬೋಧನಾ ಶುಲ್ಕವನ್ನು ವರ್ಷಕ್ಕೆ 150 ಡಾಲರ್‌ಗಳಿಗೆ ಏರಿಸುವ ವಿಶ್ವವಿದ್ಯಾಲಯದ ಯೋಜನೆ ವಿರುದ್ಧ ಈ ಹೋರಾಟ ಏಪ್ರಿಲ್ 20, 1999 ರಂದು ಆರಂಭವಾಯಿತು. ಈಗಿನ ಮುಷ್ಕರ 89 ವರ್ಷಗಳ ಇತಿಹಾಸದಲ್ಲೇ ಅತೀ ದೀರ್ಘಾವಧಿ ಮುಷ್ಕರ. 2,70000 ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಏಪ್ರಿಲ್ 20 ರಿಂದ ವಿಶ್ವವಿದ್ಯಾಲಯದ ರೆಕ್ಟಾರ್ ಫ್ರಾನ್ಸಿಸ್ಕೋ ಬಾರೆನೆಡೆ ಕ್ಯಾಸ್ಟ್ರೋ ಈ ಏರಿಸಲ್ಪಟ್ಟ ಬೋಧನಾ ಶುಲ್ಕಗಳನ್ನು ವಿದ್ಯಾರ್ಥಿಗಳ ಮೇಲೆ ಹೊರಲಾರದ ಈ ಹೊರೆಯನ್ನು ಹೇರಲು ಹೋದಾಗ ಪ್ರತಿಭಟನೆ ತೀವ್ರಗೊಂಡಿತು. ಇದು ಶಿಕ್ಷಣಕ್ಕೆ ಹಣ ಕಡಿತಗೊಳಿಸುವ ಸರ್ಕಾರದ ನೀತಿಯ ವಿರುದ್ಧ ತಿರುಗಿತು.

ಈ ಶುಲ್ಕ ಏರಿಕೆ, ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ನಿರ್ದೇಶನದಿಂದುಂಟಾದ ಶಿಕ್ಷಣ ಸಹಾಯಧನ ಕಡಿತದ ನೇರ ಪರಿಣಾಮ. **ಈ ನಿರ್ಬಂಧಗಳ ಮೂಲಕ ಸರ್ಕಾರ ಉನ್ನತ ಶಿಕ್ಷಣವನ್ನು ಕೇವಲ ಶ್ರೀಮಂತರಿಗೆ ಮಿತಿಗೊಳಿಸಲು ಪ್ರಯತ್ನಿಸುತ್ತಿದೆ. ವಿಶ್ವವಿದ್ಯಾಲಯ ಚಳುವಳಿಯ ವಿದ್ಯಾರ್ಥಿ ಮುಖಂಡರು ಮೆಕ್ಸಿಕೋದ ಬಲಪಂಥೀಯ ಸರಕಾರ ಹಾಗೂ ವಿ.ವಿ. ರೆಕ್ಟಾರ್‌ನನ್ನು ಮೆಕ್ಸಿಕೋದ 'ಸಾರ್ವಜನಿಕ ಶಿಕ್ಷಣವನ್ನು ಧ್ವಂಸಗೊಳಿಸುವ ಸಾಧನ' ಎಂದೇ ಕರೆಯುತ್ತಿದ್ದಾರೆ.**

ಇದಲ್ಲದೇ ಮಾರುಕಟ್ಟೆ ದೃಷ್ಟಿಕೋನದಲ್ಲಿ ಕೋರ್ಸುಗಳ ಪುನರ್‌ರಚನೆ ಇತ್ಯಾದಿಗಳನ್ನು ವಿದ್ಯಾರ್ಥಿಗಳು ವಿರೋಧಿಸುತ್ತಿದ್ದಾರೆ. ವಿ.ವಿ. ರೆಕ್ಟಾರ್‌ರವರು ವಿಶ್ವವಿದ್ಯಾಲಯವು ಸಾಮಾಜಿಕ ವಿಜ್ಞಾನ ವಿಭಾಗಗಳನ್ನು ವೈಟ್‌ಕಾಲರ್ ವೃತ್ತಿಪರ ಶಾಲೆಯನ್ನಾಗಿ ಮಾಡಲು, ತತ್ವಶಾಸ್ತ್ರ, ರಾಜ್ಯ ಶಾಸ್ತ್ರಗಳಂತಹ ವಿಜ್ಞಾನಗಳನ್ನು ಕಂಪ್ಯೂಟರ್‌ಗಳ ನೆಟ್‌ಬೋಲ್ಟ್ ಕೋರ್ಸ್‌ಗಳಂತೆ ಮಾಡಲು ಹೊರಟಿದ್ದಾರೆ. ವಿಶ್ವವಿದ್ಯಾಲಯಗಳು ಜ್ಞಾನಾರ್ಜನೆಯ ಉನ್ನತ ಕೇಂದ್ರಗಳಾಗಿ ಇಡೀ ಸಮಾಜದ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕು. ಕೇವಲ ಖಾಸಗಿ ಕಂಪನಿಗಳ ಹಿತರಕ್ಷಣೆ ಮಾಡುವುದಲ್ಲ ಎಂಬುದು ವಿದ್ಯಾರ್ಥಿಗಳ ಒಟ್ಟಾರೆ ಅಭಿಪ್ರಾಯ.

ಶಿಕ್ಷಣ ಕೇವಲ ವಾಣಿಜ್ಯ ಸೇವೆಯಲ್ಲ. ಇದು ಮೆಕ್ಸಿಕೋ ದೇಶದಲ್ಲಿ ದಶಕಗಳ ಹೋರಾಟದ ನಂತರ ಗಳಿಸಿದ ಒಂದು ಸಾಮಾಜಿಕ ಹಕ್ಕು. ಐಎಂಎಫ್-ವಿಶ್ವಬ್ಯಾಂಕ್ ಶರತ್ತುಗಳನ್ನು ಒಪ್ಪಿಕೊಂಡ ಹಲವು ದೇಶಗಳಂತೆ ಮೆಕ್ಸಿಕೊದಲ್ಲಿ ಸಹ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಸರ್ಕಾರದ ಹೆಗಲಿನಿಂದ ವಿದ್ಯಾರ್ಥಿಗಳ ಹೆಗಲಿಗೆ ವರ್ಗಾಯಿಸಲಾಗುತ್ತಿದೆ. ಶಿಕ್ಷಣ ವೆಚ್ಚದ ಶೇಕಡಾ 8 ರಷ್ಟನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡಿಕೊಳ್ಳುವ ಸರ್ಕಾರ ಕ್ರಮೇಣ ಶಿಕ್ಷಣ ನೀಡುವ ಜವಾಬ್ದಾರಿಯಿಂದ ಜಾರಿಕೊಳ್ಳುವ ಪ್ರಯತ್ನ ನಡೆಸಿದೆ. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಿಕ್ಷಣ ನೀತಿಗಳ ನಿರೂಪಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಹ ಶಿಕ್ಷಣದ ಪ್ರಜಾಪ್ರಭುತ್ವೀಕರಣವನ್ನು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ.

ಸತತ ಏಳು ವಾರಗಳ ಹೋರಾಟದ ನಂತರವೂ ವಿದ್ಯಾರ್ಥಿಗಳೊಂದಿಗೆ ಮಾತುಕತೆಗೆ ನಿರಾಕರಿಸುತ್ತಿದ್ದ ವಿ.ವಿ. ಆಡಳಿತ ಮಂಡಳಿಯು ಕೊನೆಗೆ ಮಾತುಕತೆಗೆ ಬರುವುದು ಅನಿವಾರ್ಯವಾಯಿತು. ವಿ.ವಿ.ಆಡಳಿತವು ಬೋಧನಾ ಪಾವತಿಯನ್ನು ಸ್ವಯಂ ಇಚ್ಛೆಗೆ ಬಿಟ್ಟಿದೆ ಆದರೆ ಪ್ರಮುಖ ಬೇಡಿಕೆಯಾದ ಶಿಕ್ಷಣ ಶುಲ್ಕಗಳ ಇಳಿಕೆಗೆ ಹಾಗೂ ಶಿಕ್ಷಣದ ಪ್ರಜಾಪ್ರಭುತ್ವೀಕರಣಕ್ಕೆ ಒಪ್ಪಿಲ್ಲ. ಹೀಗೆ ಮಾತುಕತೆ ಮುರಿದು ಬಿದ್ದಿದೆ. ವಿದ್ಯಾರ್ಥಿಗಳು ಮುಷ್ಕರ ಮುಂದುವರೆಸಿದ್ದಾರೆ. ರಾಜಧಾನಿಯಲ್ಲಿ ವಿದ್ಯಾರ್ಥಿಗಳ ಬೃಹತ್ ರ್‍ಯಾಲಿ ಅವಶ್ಯಕ ಸೇವೆಗಳ ಹೊರತುಪಡಿಸಿದ ಯಶಸ್ವಿ ಬಂದ್ ನಡೆದಿದೆ.

1999 ಜೂನ್ ಕಡೆಯ ವಾರದಲ್ಲಿ 15,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮುಖದ ಮೇಲೆ ಕೆಂಪು-ಕಪ್ಪು ಮುಷ್ಕರದ ಬಣ್ಣದ ಪಟ್ಟಿಯೊಂದಿಗೆ ವಿ.ವಿ.ಸ್ಟೇಡಿಯಂಗೆ ನುಗ್ಗಿದ್ದಾರೆ. ಅಮೆರಿಕಾದ ರಾಯಭಾರ ಕಛೇರಿಯ ಮುಂದೆ ಭಾರಿ ಪ್ರತಿಭಟನೆ ಸಂಘಟಿಸಲಾಗಿದೆ. ಮತ್ತು ಹೋರಾಟ ಮುಂದುವರಿಕೆಯ ದೃಢತೆಯನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದ್ದಾರೆ. ಹೋರಾಟದಲ್ಲಿ ಹಲವರು ಬಂದಿಸಲ್ಪಟ್ಟು ಜೈಲುವಾಸ ಸಹ ಅನುಭವಿಸಿದ್ದಾರೆ.

ಫೆಬ್ರವರಿ 1 ರಂದು ಆ ಮುಷ್ಕರ ಆರಂಭವಾದ 9 ತಿಂಗಳ ನಂತರ ದೌರ್ಜನ್ಯ ನಡೆಯಿತು. 1968 ರ ವಿದ್ಯಾರ್ಥಿ ಹೋರಾಟದ ವಿದ್ಯಾರ್ಥಿಗಳ ಸಾಮೂಹಿಕ ಹತ್ಯೆಯ ರಾಕ್ಷಸೀ ಕ್ರೌರ್ಯವನ್ನು ಮೆರೆದ, 'ಪ್ರಿವೆಂಟೀವ್ ಫೆಡರಲ್ ಪೋಲೀಸರು' ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಮೇಲೆ ಧಾಳಿ ನಡೆಸಿದ್ದಾರೆ. 37 ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡು ಹಲವರು ಜೈಲಿಗೆ ಕಳಿಸಲ್ಪಟ್ಟಿದ್ದಾರೆ. ಫೆಬ್ರವರಿ 6 ರಂದು ಮುಖ್ಯ ಕ್ಯಾಂಪಾಸ್ ಆದ 'ನ್ಯಾಷನಲ್ ಯೂನಿವರ್ಸಿಟಿ' ಯನ್ನು ವಶಕ್ಕೆ ತೆಗೆದುಕೊಂಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ. ಬಹುತೇಕ ನಿದ್ರಿಸುತ್ತಿದ್ದ ವಿದ್ಯಾರ್ಥಿಗಳನ್ನು ಇದ್ದಕ್ಕಿದ್ದಂತೆ ಸುತ್ತುಗಟ್ಟಿ ಬಂಧಿಸಲಾಗಿದೆ. ಇಷ್ಟಾದರೂ ವಿದ್ಯಾರ್ಥಿಗಳು ಹೋರಾಟ ಮುಂದುರಿಸಿದ್ದಾರೆ. ಮಿಸ್ಟರ್ ಬಾರ್‌ನೆಸ್ ಶುಲ್ಕ ಏರಿಕೆ ಹೇರಿದ ವಿ.ವಿ.ರೆಕ್ಟಾರ್ ನವೆಂಬರ್‌ನಲ್ಲಿ ರಾಜೀನಾಮೆ ಸಲ್ಲಿಸಿದ್ದಾನೆ. ಮಿ.ಡಿ.ಲಾ. ಪೆಂಟು, ಹೊಸ ರೆಕ್ಟಾರ್ ಎಲ್ಲಾ ಬೋಧನಾ ಪಾವತಿಯನ್ನು ರದ್ದುಪಡಿಸುವ ಪ್ರಸ್ತಾಪ, ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದು, ವಿದ್ಯಾರ್ಥಿಗಳ 'ಜನರಲ್' ಕಾಂಗ್ರೆಸ್ ಆರಂಭಕ್ಕೆ ಒಪ್ಪಿಗೆಯ ಸೂಚನೆ ಮುಂದಿಟ್ಟಿದ್ದಾರೆ. ಈ ಪ್ರಸ್ತಾಪಗಳು ಸರ್ಕಾರದಿಂದ ಬರಬೇಕೆಂದು ಪಟ್ಟು ಹಿಡಿದು ವಿದ್ಯಾರ್ಥಿಗಳು ಪ್ರಸ್ತಾಪವನ್ನು ತಿರಸ್ಕರಿಸಿದ್ದಾರೆ.

ನ್ಯಾಷನಲ್ ಆಟನೋಮಸ್ ಯೂನಿವರ್ಸಿಟಿ ಆಫ್ ಮೆಕ್ಸಿಕೋ(ಎಲೂಅ್ಡ)ಗೆ ಶಸಸ್ತ್ರ ಸೈನಿಕರ ಪ್ರವೇಶದ 3 ತಿಂಗಳ ನಂತರವೂ ಬಿಕ್ಕಟ್ಟು ಬಗೆಹರಿದಿಲ್ಲ. 1960 ರ ಸುಮಾರಿನಲ್ಲಿ ನಡೆದ ಪ್ರಜಾಪ್ರಭುತ್ವ ಪರ-ಸರ್ವಾಧಿಕಾರಿ ವಿರೋಧಿ ಹೋರಾಟದಂತೆಯೇ ಇಂದು ಮೆಕ್ಸಿಕೋ ಸೇರಿದಂತೆ ಜಗತ್ತಿನಾದ್ಯಂತ ವಿದ್ಯಾರ್ಥಿಗಳು ಕ್ರಮೇಣ ಹೋರಾಟಕ್ಕಿಳಿಯುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ವಿಶೇಷ ಅಂಶವೆಂದರೆ ಮೆಕ್ಸಿಕೋ ವಿದ್ಯಾರ್ಥಿ ಸಮುದಾಯ ತಮ್ಮ ಹೋರಾಟದಲ್ಲಿ ಅಪ್ರತಿಮ ಹೋರಾಟಗಾರರಾದ ಚೆ-ಗುವಾರ, ಸ್ಟಾಲಿನ್ ಮುಂತಾದವರ ಪೋಸ್ಟರ್‌ಗಳನ್ನು ಹಿಡಿದಿದ್ದರು. ಸಮಾಜವಾದ ಪರವಾದ ಘೋಷಣೆಗಳು ಮೊಳಗುತ್ತಿದ್ದವು ಎನ್ನುವುದು.

- ಆರ್.ರಾಮಕೃಷ್ಣ



Historic Mexican Student Movement Against Imperialist onslaught on Education

.... ಜ್ಯೋತಿ ಬಸು ಬಿಡುಗಡೆ

ಪುಟ 7 ರಿಂದ

ಎಂದೇ ಅರ್ಥ. ಎಡಶಕ್ತಿಗಳು ಅಧಿಕಾರದಲ್ಲಿ ಮುಂದುವರೆದದ್ದು ತೀವ್ರ ವರ್ಗ ಹೋರಾಟಗಳ ಮೂಲಕವೇ. ಈ 23 ವರ್ಷಗಳಲ್ಲಿ ಆಂದೋಲನದ ರಕ್ಷಣೆಯಲ್ಲಿ ಮತ್ತು ಎಡರಂಗ ಸರಕಾರದ ಧೋರಣೆಗಳ ಜಾರಿಯಲ್ಲಿ ಸಾವಿರಾರು ಸಂಗಾತಿಗಳು ಪ್ರಾಣ ಬಲಿದಾನ ನೀಡಿದ್ದಾರೆ. ದೊಡ್ಡ ಅಖಿಲ ಭಾರತ ಬಂಡವಾಳಿಗರು, ಎಲ್ಲಾ ಕೇಂದ್ರ ಸರಕಾರಗಳು, ಪಶ್ಚಿಮ ಬಂಗಾಳದ ಭೂಮಾಲಕರು ಮತ್ತು ಪ್ರತಿಗಾಮಿಗಳು ಹಾಗೂ ಸಾಮ್ರಾಜ್ಯಶಾಹಿ **ಎಲ್ಲರೂ ಕೈಮಿಲಾಯಿಸಿ ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡ ಆಂದೋಲನವನ್ನು ದಮನ ಮಾಡಲು ಪ್ರಯತ್ನಿಸಿದರು. ಅವರು ವಿಫಲರಾಗಿದ್ದಾರೆ ಎಂಬುದೇ ಪಶ್ಚಿಮ ಬಂಗಾಳದ ಜನಸಾಮಾನ್ಯರ ನಡುವೆ ಪಕ್ಷ ಮತ್ತು ಆಂದೋಲನ ಆಳವಾದ ಬೇರು ಬಿಟ್ಟಿವೆ ಎಂಬುದಕ್ಕೆ ಸಾಕ್ಷಿ.**

ಒಂದು ಬಂಡವಾಳಶಾಹಿ-ಭೂಮಾಲಕ ಚೌಕಟ್ಟಿನೊಳಗೆ ಒಂದು ರಾಜ್ಯ ಸರಕಾರವನ್ನು ನಡೆಸುವ ಮಿತಿಗಳ ಅರಿವು ಸಿಪಿಐ(ಎಂ) ಮತ್ತು ಜ್ಯೋತಿಬಸು ನೇತೃತ್ವದ ಸರ್ಕಾರಕ್ಕೆ ಸದಾ ಇದೆ. ಒಂದು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆ ಸೃಷ್ಟಿಸಿದ ಎಲ್ಲಾ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ಈಗಿರುವ ಕಾನೂನುಗಳ ಪ್ರಕಾರ ಭೂಸುಧಾರಣೆಗಳಿಂದ ಮಿಗುತೆ ಭೂಮಿಯನ್ನು ಭೂಹೀನರಿಗೆ ಹಂಚಲು ಸಾಧ್ಯವಾಗಿದೆ. ಆದರೆ ಕೃಷಿ ವಲಯದಲ್ಲಿ ಬಂಡವಾಳಶಾಹಿ ಸಂಬಂಧಗಳು ಮತ್ತು ಅದರ ಜತೆಗೆ ಏಳುವ ಸಮಸ್ಯೆಗಳು ಮುಂದುವರೆಯುತ್ತವೆ. ನಿರುದ್ಯೋಗದ ಬೃಹತ್ ಸಮಸ್ಯೆ, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಹಾಗೆಯೇ ಉಳಿದಿದೆ. ಹೊಸ ಉದ್ದಿಮೆಗಳನ್ನು ಸ್ಥಾಪಿಸಬೇಕಾದರೆ **ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿಕೃತ ಆದ್ಯತೆಗಳನ್ನು ಮೀರಿನಿಲ್ಲಬೇಕು. ಮೂಲಭೂತ ಧೋರಣೆಗಳಲ್ಲಿ ಒಂದು ಬದಲಾವಣೆ ತರದೆ ಜನಗಳ ಬದುಕಿನ ಪರಿಸ್ಥಿತಿಗಳಲ್ಲಿ ಗುಣಾತ್ಮಕ ಸುಧಾರಣೆ ಸಾಧ್ಯವಿಲ್ಲ.** ಆದರೆ ಈ ಧೋರಣೆಗಳೆಲ್ಲಾ ಅಖಿಲ ಭಾರತ ಸ್ವರೂಪದವು.

ಮಾಡಬೇಕಾದ್ದು ಬಹಳ ಇದೆ. ಅವಕ್ಕೆ ಹೊಸ ಮುತುವರ್ಜಿಗಳು ಅಗತ್ಯ. **ಜನಗಳೊಡನೆ ವ್ಯವಹರಿಸುವಾಗ ರಾಜ್ಯ ಆಡಳಿತದ ಹಲವು ವಿಫಲತೆಗಳ, ಕೊರತೆಗಳತ್ತ ಮೊದಲು ಗಮನ ಸೆಳೆದವರು ಕೂಡಾ ಜ್ಯೋತಿಬಸುರವರೇ.**

ಮುಂಬರುವ ದಿನಗಳಲ್ಲಿ ಎಡರಂಗ ಜನಗಳಿಗೆ ತನ್ನ ಬದ್ಧತೆಯನ್ನು ನವೀಕರಿಸಬೇಕು. ಈ ಕೆಲಸವನ್ನು ಅದು ತಾನು ಮೊದಲು ಅಧಿಕಾರಕ್ಕೆ ಬಂದಾಗ ಇದ್ದದ್ದಕ್ಕಿಂತ ಹೆಚ್ಚು ಕಠಿಣವಾದ ಸನ್ನಿವೇಶದಲ್ಲಿ ಮಾಡಬೇಕಾಗಿದೆ. ಉದಾರೀಕರಣದ ಅಪಾಯಕಾರೀ ಧೋರಣೆಗಳನ್ನು ಎಲ್ಲಾ ರಾಜ್ಯಗಳ ಮೇಲೆ ಹೊರಿಸಲಾಗುತ್ತಿದೆ. ಅತ್ತ ಕೋಮುವಾದಿ ಶಕ್ತಿಗಳ ಬಲ ಹೆಚ್ಚಿದೆ. ಎಡ ಐಕ್ಯತೆ ಈಗ ಹಿಂದೆಂಗಿಂತಲೂ ಮಹತ್ವದ್ದು. ಒಂದು ಉತ್ತಮ ಭವಿಷ್ಯಕ್ಕಾಗಿ ಹೋರಾಡುತ್ತಿರುವವರಿಗೆಲ್ಲಾ ಪಶ್ಚಿಮಬಂಗಾಳ ಕಳೆದ 23 ವರ್ಷಗಳ ದಾರಿದೀಪವಾಗಿತ್ತು. ಮುಂದೆಯೂ ಅದು ದಾರಿದೀಪವಾಗಿರುತ್ತದೆ. ಈ ವಿಶ್ವಾಸದೊಂದಿಗೆ ಬುದ್ಧದೇವ ಭಟ್ಟಾಚಾರ್ಯರವರ ನೇತೃತ್ವದ ಹೊಸ ಮಂತ್ರಿಮಂಡಲ ಸದ್ದು-ಗದ್ದಲವಿಲ್ಲದೆ ಅಧಿಕಾರ ವಹಿಸಿಕೊಳ್ಳುತ್ತಿದೆ.

PRB DECR 319-79/79 AIKYARANGA WEEKLY
Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ